# ಅಧ್ಯಾಯ 9

# ಹೊಸ ಒಡಂಬಡಿಕೆಯ ಶ್ರೇಷ್ಠತೆ

## ದೇವದರ್ಶನಗುಡಾರದಿಂದ ಪಾಠಗಳು (9:1-10)

ನಾವು ಸುವಾರ್ತೆಯನ್ನು ಅರ್ಥಮಾಡಿಕೊಳ್ಳುವಾಗ, ನಮ್ಮನ್ನು ಕ್ರಿಸ್ತನ ಬಳಿಗೆ ಕರೆ ತರುವದರಲ್ಲಿ ಸಹಾಯ ಮಾಡಿದ ಧರ್ಮಶಾಸ್ತ್ರದ ಬೆಲೆಯನ್ನು ನಾವು ಅರ್ಥಮಾಡಿಕೊಳ್ಳುವೆವು (ಗಲಾತ್ಯ 3:24). ಇಬ್ರಿಯರಿಗೆ ಪತ್ರಿಕೆಯ ಲೇಖಕನು ತನ್ನ ಶ್ರೋತೃಗಳನ್ನು ಕಾಲದಲ್ಲಿ ಹಿಂದಕ್ಕೆ ಕರೆದೊಯ್ದು ಅರಣ್ಯದಲ್ಲಿ ದೇವದರ್ಶನಗುಡಾರವಿದ್ದ ಸಮಯವನ್ನು ಜ್ಞಾಪಿಸುತ್ತಾನೆ. ದೇವರು ಮೋಶೆಗೆ ಹೀಗೆ ಹೇಳಿದ್ದನು, "ನಾನು ಅವರ ಮಧ್ಯದಲ್ಲಿ ವಾಸಿಸುವದಕ್ಕೆ ನನಗೆ ಒಂದು ದೇವಸ್ಥಾನವನ್ನು ಕಟ್ಟಿಸಬೇಕು" (ವಿಮೋಚನಕಾಂಡ 25:8). ವಾಕ್ಯಭಾಗವು ಸಂಪೂರ್ಣವಾಗಿ ದೇವರಿಂದ ವಿನ್ಯಾಶಿಸಲ್ಪಟ್ಟು ಪ್ರತಿಷ್ಠಿಸಲ್ಪಟ್ಟಿದ್ದ ಮೂಲ ಕಟ್ಟಡದ ಮೇಲೆ ಮುಖ್ಯ ಗಮನವನ್ನು ಹರಿಸುತ್ತದೆ. ಸಾಮಾನ್ಯವಾಗಿ ಇದು ಮೊದಲ ಶತಮಾನದಲ್ಲಿ ಅಸ್ತಿತ್ವದಲ್ಲಿದ್ದ ಹೆರೋದನ ದೇವಾಲಯದ ಕುರಿತಾಗಿ ಹೇಳಲ್ಪಟ್ಟಿರುವದಕ್ಕೆ ಸಾಧ್ಯವಿಲ್ಲ. ವಾಸ್ತವದಲ್ಲಿ, ಅದನ್ನು ಕಟ್ಟಿದ್ದಕ್ಕಾಗಿ ಯೆಹೂದ್ಯರು ಈಗಲೂ ಒಬ್ಬ ಎದೋಮ್ಯನಾಗಿದ್ದ ಈ ರೋಮನ್ ಪ್ರಾಂತೀಯ ಅಧಿಪತಿಯ ಬಗ್ಗೆ ಸಿಟ್ಟುಗೊಳ್ಳುತ್ತಿದ್ದರು. ಹೇಗೂ, ಯೇಸುವಿನ ಶಿಷ್ಯರು ಅದರಲ್ಲಿ ಹೆಚ್ಚಳಪಟ್ಟುಕೊಳ್ಳುವಂತೆ ಕಂಡರು (ಮಾರ್ಕ 13:1). ಹಳೆಯದ್ದರ ಸ್ಥಾನದಲ್ಲಿ ಹೊಸ ಒಡಂಬಡಿಕೆಯು ಬಂದಿದೆ ಎಂದು ನಾವು ತಿಳಿದಿದ್ದೇವಾದರೂ, ಇಂದು ಕ್ರೈಸ್ತರು ಈಗಲೂ ಹಳೆಯ ಒಡಂಬಡಿಕೆಯಲ್ಲಿ ಹೆಚ್ಚಳಪಟ್ಟುಕೊಳ್ಳುತ್ತಾರೆ.

ದೇವಾಲಯ ಮತ್ತು ಅದರ ಪೂರ್ವಗಾಮಿಗಳು ಕೇವಲ ಪರಲೋಕದಲ್ಲಿ ಅತ್ಯಂತ ಪರಿಶುದ್ಧ ಸ್ಥಳ ಚಿತ್ರಣಗಳಾಗಿದ್ದವಷ್ಟೆ. ದೇವಾಲಯದ ಧಾರ್ಮಿಕ ಆಚಾರಗಳು ನಿಜವಾದ ಆರಾಧನೆಯ ಒಂದು ಛಾಯೆಯಾಗಿದೆ. ಯೆಹೂದಿ ಕ್ರೈಸ್ತರಿಗೆ ಬರೆಯಲಾದ ಈ ಪತ್ರಿಕೆಯು, ಅವರು ಹಳೆಯ ಒಡಂಬಡಿಕೆಯ ವಿಧಿವಿಧಾನಗಳನ್ನು ತೊರೆದು ಬಿಟ್ಟು ಆತ್ಮದಲ್ಲಿ ಪರಲೋಕದ ದೇವಾಲಯವನ್ನು ಪ್ರವೇಶಿಸಬೇಕೆಂದು ಅವರಿಗೆ ಕಲಿಸುತ್ತದೆ. ಖಂಡಿತವಾಗಿಯೂ, ಆರಾಧನೆಯಲ್ಲಿ ಅವರು ನೇರವಾದ ದೇವರ ಸಿಂಹಾಸನದ ಬಳಿಗೆ ಹೋಗಬಹುದಿತ್ತು, ಅದನ್ನು ಹಳೆಯ ಒಡಂಬಡಿಕೆಯ ಅಡಿಯಲ್ಲಿ ಅವರು ಸಮೀಪಿಸುವದಕ್ಕೆ ಸಹ ಸಾಧ್ಯವಾಗಿರಲಿಲ್ಲ (4:15, 16).

ಈ ವಾಸ್ತವಾಂಶವು ಯಾವದೇ ಯೆಹೂದಿ ವಿಶ್ವಾಸಿಗೆ ಹೊಸ ಒಡಂಬಡಿಕೆಯ ಶ್ರೇಷ್ಠವಾದ ಪ್ರಯೋಜನಗಳ ಬಗ್ಗೆ ಮನವರಿಕೆಯನ್ನು ಉಂಟು ಮಾಡಿರತಕ್ಕದ್ದು. ಹಳೆಯ ಒಡಂಬಡಿಕೆಯ ಲಾಂಛನಗಳು ಚಿನ್ನದ ತಗಡಿನಿಂದ ಲೇಪಿಸಲ್ಪಟ್ಟಿದ್ದವು – ಆದರೆ ಲೇಖಕನು ನಿತ್ಯತ್ವದ ಮೌಲ್ಯವುಳ್ಳ ಒಂದು ಆತ್ಮೀಕ "ಚಿನ್ನ" ವನ್ನು ಬಯಲುಗೊಳಿಸುತ್ತಾನೆ. ದೇವದರ್ಶನಗುಡಾರದ ಚಿನ್ನದ ತಗಡಿನಿಂದ ಹೊದಿಸಿದ್ದ ಪಿಠೋಪಕರಣಗಳು ಮತ್ತು ಪಾತ್ರೆಗಳನ್ನು ನೋಡುವದಕ್ಕಿಂತಲೂ ಅದರ ಒಟ್ಟಾರೆಯಾದ ಉದ್ದೇಶವೇನೆಂಬುದನ್ನು ನೋಡುವದು ಎಷ್ಟೋ

ಹೆಚ್ಚು ಪ್ರಯೋಜನಕರವಾಗಿರುತ್ತದೆ. ಹೊಸ ಒಡಂಬಡಿಕೆಯ ಕ್ರೈಸ್ತರಿಗಾದರೋ, ದೇವರು ತಾನು ವಾಸಿಸುವ ಒಂದೇ ಸ್ಥಳವಾಗಿ ಏಕೆ ಸಭೆಯನ್ನು ಕೊಟ್ಟನೆಂಬುದನ್ನು ತಿಳಿದುಕೊಳ್ಳುವದು (ನೋಡಿರಿ ಎಫೆಸ 2:20, 21) ಆತನನ್ನು ನಾವು ಧೈರ್ಯದಿಂದ ಸಮೀಪಿಸುವಂತೆ ಮಾಡತಕ್ಕದ್ದು. ನಂತರ, ಒಟ್ಟಾರೆಯಾದ ಯೋಜನೆಯಲ್ಲಿ ಅದರ ಕ್ರಿಯೆ ಏನೆಂಬುದನ್ನು ತಿಳಿದುಕೊಳ್ಳುವದರಿಂದ ನಾವು ಖಂಡಿತವಾಗಿಯೂ ದೇವರಿಗೆ ನಿಕಟವಾಗಿ ಬೆಳೆಯುವೆವು.

ನಮ್ಮ ಉತ್ತಮವಾದ ಯಜ್ಞವಾಗಿರುವ ಯೇಸು 9:1–10:18ರ ಪ್ರಮುಖ ಚರ್ಚೆಯ ವಿಷಯವಾಗಿದೆ. ಇಬ್ರಿಯರಿಗೆ ಪತ್ರಿಕೆಯಲ್ಲಿರುವ ಮುಖ್ಯ ಪದಗಳು ಗ್ರೀಕ್ ವಾಕ್ಯದಲ್ಲಿ ಪುನಃ ಪುನಃ ಕಾಣಿಸಿಕೊಳ್ಳುತ್ತವೆ:

- "ಸಮರ್ಪಿಸು" (προσφέρω, *prospherō*): 8:3, 4; 9:7, 9, 14, 25, 28; 10:1, 2, 8, 11, 12.
- "ಸಮರ್ಪಿಸುವದಕ್ಕೆ" (προσφορά, *prosphora*): 10:5, 8, 10, 14, 18.
- "ಯಜ್ಞ" (θυσία, *thusia*): 8:3; 9:9, 23, 26; 10:1, 5, 8, 11, 12.
- "ಒಡಂಬಡಿಕೆ" (διαθήκη, *diathēkē*): 8:6, 8, 9, 10; 9:4, 15, 16, 17, 20; 10:16.
- "ರಕ್ತ" (αἷμα, *haima*): 9:7, 12, 13, 14, 18, 19, 20, 21, 22, 25; 10:4.
- "ಪಾಪ" (ἁμαρτία, *hamartia*): 8:12; 9:26, 28; 10:2, 3, 4, 6, 11, 12, 17, 18.[1]

## ಪರಿಶುದ್ಧ ಸ್ಥಳ ಮತ್ತು ಅದರ ಪಿಠೋಪರಣಗಳು (9:1, 2)

**[1]ಹೀಗಿದ್ದರೂ ಮೊದಲನೆಯ ಒಡಂಬಡಿಕೆಯಲ್ಲಿ ದೇವಾರಾಧನೆಯ ನಿಯಮಗಳಿದ್ದವು; ಮತ್ತು ದೇವಾಲಯವಿತ್ತು, ಅದು ಇಹಲೋಕಸಂಬಂಧವಾದದ್ದು. [2]ಅಂದರೆ ಒಂದು ಗುಡಾರವು ಕಟ್ಟಲ್ಪಟ್ಟಿತು; ಆದರ ಮೊದಲನೆಯ ಭಾಗದಲ್ಲಿ ದೀಪಸ್ತಂಭ, ಮೇಜು, ಸಮರ್ಪಿಸಿದ ರೊಟ್ಟಿ ಇವುಗಳಿದ್ದವು; ಅದಕ್ಕೆ ಪವಿತ್ರಸ್ಥಾನ ಎಂದು ಹೆಸರು.**

**ವಚನ 1.** ಲೇಖಕನು 8:6ರಲ್ಲಿ "ಅದಕ್ಕಿಂತ ಶ್ರೇಷ್ಠವಾದ ಯಾಜಕೋದ್ಯೋಗ" ಎಂದು ಹೇಳಿದನು, ಆದರೆ ಇಲ್ಲಿ ಆತನು ಅದನ್ನು ಹೆಚ್ಚು ವಿವರವಾಗಿ ತಿಳಿಸುತ್ತಾನೆ. ಮೊದಲನೆಯ ಒಡಂಬಡಿಕೆಯಲ್ಲಿ **ದೇವಾರಾಧನೆ** ("ದೈವಿಕ ಸೇವೆ"; NKJV; "ಆರಾಧನೆಗಾಗಿ ನಿಯಮಗಳು"; RSV) ಸೇರಿತ್ತು. **ಗಳಿದ್ದವು** ಎಂಬುದನ್ನು ಗಮನಿಸಿರಿ: ಆ ನಿಮಯಗಳು ಮತ್ತಾಯ 5:17, 18ರಲ್ಲಿ ಮುಂತಿಳಿಸಿದ್ದ ಪ್ರಕಾರ, ಯೇಸುವಿನ ಶಿಲುಬೆಯ ಮೂಲಕ ಈಗಾಗಲೆ ತೆಗೆದು ಹಾಕಲ್ಪಟ್ಟವುಗಳಾ "ಗಿದ್ದವು" (ಎಫೆಸ 2:14–16 ಮತ್ತು ಕೊಲೊಸ್ಸೆ 2:14–17). ಅಲ್ಲದೆ, ದೇವದರ್ಶನಗುಡಾರವು ಕ್ರಿ.ಶ ಮೊದಲ ಶತಮಾನದಲ್ಲಿ ಅಸ್ತಿತ್ವದಲ್ಲಿರಲಿಲ್ಲ. ಧರ್ಮಶಾಸ್ತ್ರದಡಿಯಲ್ಲಿ, ಆರಾಧನೆಯ ಕುರಿತಾದ ನಿಯಮಗಳನ್ನು ಕಟ್ಟುನಿಟ್ಟಿನಿಂದ ಕೈಕೊಂಡು ನಡೆಯಬೇಕಿತ್ತು, ಅದು ನಾದಾಬ್ ಮತ್ತು ಅಬಿಹು (ಯಾಜಕಕಾಂಡ 10:1–3) ಮತ್ತು ಉಜ್ಜ (2 ಸಮುವೇಲ 6:6, 7) ಇವರುಗಳ ಮರಣದ ಮೂಲಕ ತೋರ್ಪಡಿಸಲ್ಪಟ್ಟಿರುತ್ತದೆ. ಎಲ್ಲವೂ "ಮಾದರಿಯ ಪ್ರಕಾರ" ಕಟ್ಟಲ್ಪಡಬೇಕಾಗಿತ್ತು ಮತ್ತು ಮಾಡಲ್ಪಡಬೇಕಾಗಿತ್ತು (ಇಬ್ರಿಯ 8:5). ನಿರ್ದಿಷ್ಟವಾದ ಉಪದೇಶಗಳು ವಿಮೋಚನಕಾಂಡ 25–40ರಲ್ಲಿ ಸಿಕ್ಕುತ್ತವೆ. ಸ್ವಾಭಾವಿಕವಾಗಿ,

ಇಬ್ರಿಯರಿಗೆ ಪತ್ರಿಕೆಯ ಲೇಖಕನು ಮೂಲ ಮಾದರಿಯ ಕಡೆಗೆ ತಿರುಗಿಕೊಂಡನು ಅನಂತರದಲ್ಲಿನ ದೇವಾಲಯ ಗಳನ್ನು – ಜೆರೂಬ್ಬಾಬೆಲನಿಂದ ಕಟ್ಟಿಸಲ್ಪಟ್ಟ ಮತ್ತು ವಿಶೇಷವಾಗಿ ಹೆರೋದನಿಂದ ಆದೇಶಿಸಲ್ಪಟ್ಟು ಕಟ್ಟಲ್ಪಟ್ಟ ದೇವಾಲಯಗಳು – ಕೆಲವು ಯೆಹೂದ್ಯರು ದೇವರ ಮಾದರಿಯ ಪ್ರಕಾರವಾಗಿ ಕಟ್ಟಲ್ಪಟ್ಟವುಗಳೆಂದು ಪರಿಗಣಿಸಿರಲಿಲ್ಲ. ದೇವದರ್ಶನಗುಡಾರದ ಕುರಿತ ದೇವರ ಮೂಲ ಮಾದರಿಯನ್ನು ಯಾವ ಯೆಹೂದ್ಯನು ಆಕ್ಷೇಪಿಸುವದಕ್ಕೆ ಸಾಧ್ಯವಿರಲಿಲ್ಲ.

ನಿಬಂಧನೆಗಳು ಶಾರೀರಿಕ ಸ್ವಭಾವದವುಗಳಾಗಿದ್ದವು, ಯಾಕೆಂದರೆ ಅವುಗಳು **ಇಹಲೋಕ ಸಂಬಂಧವಾಗಿದ್ದವು**. ಅವುಗಳು "ಲೋಕಸಂಬಂಧ" ಅಥವಾ "ಲೌಕಿಕ" ವಾಗಿರುವದರ ಯೋಚನೆಯು, "ಲೋಕದೊಂದಿಗೆ ಸ್ನೇಹ" (ಯಾಕೋಬ 4:4) ಎಂಬದರಲ್ಲಿರುವಂತೆ, ಅದು ದೇವರ ಚಿತ್ತಕ್ಕೆ ವಿರುದ್ಧವಾಗಿತ್ತೆಂಬ ಅರ್ಥವನ್ನು ಕೊಡುವದಿಲ್ಲ. ಬದಲಾಗಿ, ಈ ಸನ್ನಿವೇಶದಲ್ಲಿ, "ಲೋಕಸಂಬಂಧವಾದದ್ದು" "ಪರಲೋಕದ್ದಕ್ಕೆ" ವಿರುದ್ಧ ಹೋಲಿಕೆಯಲ್ಲಿತ್ತು (8:5). ಲೋಕದ ನಮೂನೆಗಳು ಸ್ವತಃ ಪರಲೋಕದ್ದಕ್ಕೆ ಮತ್ತು ಪರಲೋಕದ ಛಾಯೆ ಹಾಗೂ ನೆರವೇರಿಕೆಯಾಗಿ ಸಭೆಯನ್ನು ಸೂಚಿಸುವದಾಗಿತ್ತು. ಇಲ್ಲಿ ದೇವಾಲಯದ ಕುರಿತು ಅಲ್ಲ, ದೇವದರ್ಶನಗುಡಾರದ ಬಗ್ಗೆ ಚರ್ಚಿಸಲಾಗಿರುತ್ತದೆ, ಯಾಕೆಂದರೆ ಅದು ದೇವಾಲಯದಲ್ಲಿ ಮಾತ್ರವೇ ನಕಲು ಮಾಡಲ್ಪಟ್ಟ ಏಕೈಕ ಮೂಲ ಸಾಮಗ್ರಿಯಾಗಿತ್ತು.

"ದೇವಾಲಯ" ಎಂದರೆ ಒಂದು "ಪವಿತ್ರಸ್ಥಳ" ಮತ್ತು ಎರಡು ವಿಭಾಗಗಳನ್ನೊಳಗೊಂಡ ಒಟ್ಟಾರೆಯಾದ ದೇವದರ್ಶನಗುಡಾರವನ್ನು ಸೂಚಿಸುತ್ತದೆ. ಒಂದು ಸಭೆಯ ಕಟ್ಟಡವು "ದೇವಾಲಯ" ಆಗಿರುವದಿಲ್ಲ, ಯಾಕೆಂದರೆ ಈಗ ಅಂಥ ಕಟ್ಟಡವು ಇನ್ನು ಮೇಲೆ ಯಾವದೇ ಸಮಯದಲ್ಲಿಯೇ ಆಗಲಿ ಅದು ಯಾವ ಉದ್ದೇಶಕ್ಕೆ ಬಳಸಲ್ಪಡುತ್ತಿದೆ ಎಂಬುದಕ್ಕಿಂತಲೂ ಹೆಚ್ಚು ಪರಿಶುದ್ಧವಾಗಿರುವದಿಲ್ಲ. ಕೈಗಳಿಂದ ನಿರ್ಮಿಸಲ್ಪಟ್ಟಿರುವ ಕಟ್ಟಡವಲ್ಲ, ಆದರೆ ದೇವಜನರ ಕೂಟವು "ಪವಿತ್ರ" ಸಭೆಯಾಗಿರುತ್ತದೆ.

**ವಚನ 2.** ಈ ವಚನವು **ದೇವದರ್ಶನಗುಡಾರ**ದಲ್ಲಿನ ಎರಡು ಕೊಠಡಿಗಳಲ್ಲಿರುವ ಸರಕುಗಳ ಪಟ್ಟಿಯನ್ನು ಮುಂದಿಡುವ ಮೂಲಕ ಆರಂಭಿಸುತ್ತದೆ. **ಮೊದಲನೆಯ ಭಾಗವು**, ಹೊರಗಿನ ಕೋಣೆ ಅಥವಾ ಪವಿತ್ರಸ್ಥಾನವನ್ನು ಸೂಚಿಸುತ್ತದೆ. ಅದರಲ್ಲಿ ವಸ್ತುಗಳಲ್ಲಿ ಚಿನ್ನದ **ದೀಪಸ್ತಂಭ** (ವಿಮೋಚನಕಾಂಡ 25:31-40; 37:17-24) ಸೇರಿತ್ತು, ಅದು ಗಟ್ಟಿ ಚಿನ್ನದಿಂದ ನಿರ್ಮಿಸಲ್ಪಟ್ಟಿತ್ತು ಮತ್ತು ಒಂದು ನೇರವಾದ ಕಂಬದಲ್ಲಿ ಆರು ಕೊಂಬೆಗಳನ್ನು ಹೊಂದಿತ್ತು.

ದೇವದರ್ಶನಗುಡಾರದಲ್ಲಿನ ದೀಪಸ್ತಂಭವು ಸಭೆಗೆ ಪೂರ್ವಛಾಯೆಯಾಗಿರಬಹು ದಾಗಿದೆ, ಅದು ಸುವಾರ್ತೆಯ ಬೆಳಕನ್ನು ಲೋಕದೊಳಗೆ ಪ್ರಕಾಶಿಸುವದಾಗಿರುತ್ತದೆ. ಪ್ರತಿಯೊಂದು ಸಭೆಯು ಲೋಕದೊಳಗೆ ಸುವಾರ್ತೆಯನ್ನು ಹರಡಿಸತಕ್ಕದ್ದು. ಅದೇ ರೀತಿಯಲ್ಲಿ, ಪ್ರತಿಯೊಬ್ಬ ಕ್ರೈಸ್ತನು ಸಹ ಪ್ರಕಾಶಿಸತಕ್ಕದ್ದು (ಮತ್ತಾಯ 5:14-16). ಜೆಕರ್ಯ 4:1-6ರಲ್ಲಿ, ಪ್ರವಾದಿಯು ಒಂದು ದೀಪಸ್ತಂಭದ ದರ್ಶನವೊಂದನ್ನು ಕಂಡನು ಮತ್ತು ಒಬ್ಬ ದೇವದೂತನು ಅವನಿಗೆ, "ಯೆಹೋವನ ನುಡಿ . . ." ಎಂದು ಹೇಳುತ್ತಾನೆ. ದೀಪಗಳಲ್ಲಿನ ಎಣ್ಣೆಯು ಸಭೆಯಲ್ಲಿ ವಾಸಿಸುವ ಪವಿತ್ರಾತ್ಮನನ್ನು ಪ್ರತಿನಿಧಿಸಿರಬಹುದಾಗಿದೆ.[2]

ನಂತರ ಪ್ರಸ್ತಾಪಿಸಲಾಗಿರುವ ವಸ್ತುಗಳೆಂದರೆ **ಮೇಜು, ಸಮರ್ಪಿಸಿದ ರೊಟ್ಟಿ** ("ಪ್ರತಿಷ್ಠಿಸಲ್ಪಟ್ಟಿದ್ದ ರೊಟ್ಟಿ"; NIV). ಮೇಜಿನ ಮೇಲೆ ಹನ್ನೆರಡು ರೊಟ್ಟಿಗಳು ಇಡಲ್ಪಟ್ಟಿದ್ದವು – ಇಸ್ರಾಯೇಲಿನಲ್ಲಿರುವ ಒಂದೊಂದು ಗೋತ್ರಕ್ಕೆ ಒಂದು ರೊಟ್ಟಿ (ಎಫ್ರಾಯೀಮ್ ಮತ್ತು ಮನಸ್ಸೆ ಗೋತ್ರಗಳನ್ನು ಎಣಿಸುವದು ಆದರೆ ಲೇವಿಯ ಯಾಜಕ ಗೋತ್ರವನ್ನು ಲೆಕ್ಕಿಸದಿರುವದು).

ಮೇಜು ಅಕ್ಷರಶಃ "ರೊಟ್ಟಿಗಳನ್ನು ಜೋಡಿಸಿಡುವಿಕೆ" ಎಂದು ಕರೆಯಲ್ಪಡುತ್ತಿತ್ತು. ಅದು ತೆರೆಯ ಹತ್ತಿರದಲ್ಲಿ, ದೇವರಿಗೆ ಸಮೀಪವಾಗಿ ಇಡಲ್ಪಟ್ಟಿತ್ತು. (RSV, NRSV, ಮತ್ತು ESVಗಳಲ್ಲಿ "ಸನ್ನಿಧಿಯ ರೊಟ್ಟಿ" ಎಂದಿರುತ್ತದೆ; ಇಬ್ರಿಯ ಭಾಷೆಯಲ್ಲಿ ಅದು ಅಕ್ಷರಶಃ "ಸಮ್ಮುಖ ರೊಟ್ಟಿ" ಆಗಿರುತ್ತದೆ.[3]) ರೊಟ್ಟಿಯು ಆರು ರೊಟ್ಟಿಗಳಂತೆ ಎರಡು ರಶಿಗಳಾಗಿ ಇಡಲ್ಪಟ್ಟಿರುತ್ತಿದ್ದವು, ಪ್ರತಿಯೊಂದರ ಮೇಲೆ ಒಂದು ಧೂಪದ ಪಾತ್ರೆಯು ಇಡಲ್ಪಟ್ಟಿರುತ್ತಿತ್ತು (ಯಾಜಕಕಾಂಡ 24:5–9). ಅದು ಒಂದು ವಾರದಷ್ಟು ಹಳೆಯದಾದ ಮೇಲೆ, ಪ್ರತಿ ಸಬ್ಬತ್ ದಿನದಂದು ಯಾಜಕರು ಅವುಗಳನ್ನು ತಿನ್ನುತ್ತಿದ್ದರು.

### ಅತಿ ಪರಿಶುದ್ಧ ಸ್ಥಳ (9:3-5)

**[3]ಎರಡನೆಯ ತೆರೆಯ ಆಚೆಯಲ್ಲಿ ಅತಿಪವಿತ್ರಸ್ಥಾನವೆನಿಸಿಕೊಳ್ಳುವ ಇನ್ನೊಂದು ಭಾಗವಿತ್ತು; [4]ಅದರಲ್ಲಿ ಚಿನ್ನದ ಧೂಪಾರತಿ, ಒಳಗೂ ಹೊರಗೂ ಚಿನ್ನದ ತಗಡನ್ನು ಮಡಾಯಿಸಿದ್ದ ಒಡಂಬಡಿಕೆಯ ಮಂಜೂಷ ಇವುಗಳಿದ್ದವು; ಆ ಮಂಜೂಷದೊಳಗೆ ಮನ್ನಾ ಇಟ್ಟಿದ್ದ ಚಿನ್ನದ ಪಾತ್ರೆಯೂ ಆರೋನನ ಚಿಗುರಿದ ಕೋಲೂ ಒಡಂಬಡಿಕೆ ಬರೆದಿದ್ದ ಕಲ್ಲಿನ ಹಲಗೆಗಳೂ ಇದ್ದವು; [5]ಅದರ ಮೇಲೆ ದೇವರ ಪ್ರಭಾವವನ್ನು ಸೂಚಿಸುವ ಕೆರೂಬಿಗಳು ಕೃಪಾಸನವನ್ನು ಆಚ್ಛಾದಿಸಿಕೊಂಡಿದ್ದವು. ಸದ್ಯಕ್ಕೆ ಈ ವಿಷಯಗಳನ್ನು ಒಂದೊಂದಾಗಿ ವಿವರಿಸುವದಕ್ಕೆ ಆಗುವದಿಲ್ಲ.**

**ವಚನ 3. ಎರಡನೆಯ ತೆರೆ** ಎಂಬುದು ದೇವರು ಮತ್ತು ಪಾಪಭರಿತ ಮನುಷ್ಯನ ನಡುವೆ ಇರುವ ಅಡೆತಡೆಗೆ ಮಾದರಿಯೆಂದು ಭಾವಿಸಲಾಗಿರುತ್ತದೆ. ಹೀಗೆ ಕ್ರಿಸ್ತನ ಮರಣದ ವೇಳೆ ದೇವಾಲಯದ ತೆರೆಯು ಹರಿದು ಹೋಗುವದು ದೇವರ ಚಿತ್ತದೊಳಗೆ ಇತ್ತು (ಮತ್ತಾಯ 27:51), ಸ್ವತಃ ದೇವರ ಸನ್ನಿಧಿಯೊಳಗೆ ದಾರಿಯು ತೆರೆಯಲ್ಪಟ್ಟಿತೆಂಬುದನ್ನು ತೋರಿಸುವದಾಗಿದೆ. ಯೇಸು ತನ್ನ ಮರಣದ ವೇಳೆಯಲ್ಲಿ ಸಾಂಕೇತಿಕವಾಗಿ ಅತಿಪವಿತ್ರ ಸ್ಥಾನವನ್ನು ಪ್ರವೇಶಿಸಿದನು, ಮತ್ತು ತೆರೆಯನ್ನು ಹರಿದು ಹಾಕುವ ಮೂಲಕ ದೇವರು ಇದನ್ನು ದೃಢೀಕರಿಸಿದನು.[4] ಅದು ಹೇಗೆ ಸಂಭವಿಸಿದ್ದರೂ ಸರಿಯೇ, ತೆರೆಯು ಹರಿದು ಹಾಕಲ್ಪಡುವದು ತಂದೆಯ ಬಳಿಗೆ ಹೋಗುವದಕ್ಕೆ ಯೇಸುವೇ ಏಕೈಕ ಮಾರ್ಗವೆಂಬುದನ್ನು ದೃಷ್ಟಾಂತಪಡಿಸಿತು (ಯೋಹಾನ 14:6; ನೋಡಿರಿ ಇಬ್ರಿಯ 4:14–16).

**ವಚನ 4. ಚಿನ್ನದ ಧೂಪಾರತಿ**ಯನ್ನು ಲೇಖಕನು ಎರಡನೆಯ ತೆರೆಯೊಳಗೆ ಇಟ್ಟದ್ದಾಗಿ ಹೇಳುತ್ತಿರುವಂತೆ ತೋರುತ್ತದೆ. ಇದು ವಿಮೋಚನಕಾಂಡ 30:6–8ಕ್ಕೆ ತದ್ವಿರುದ್ಧವಾಗುವದು, ಅಲ್ಲಿ ಧೂಪರಾತಿಯ ವೇದಿಯು ತೆರೆಯ ಮುಂದೆ ಇಡಲ್ಪಟ್ಟಿತ್ತೆಂದು ಹೇಳಲಾಗುತ್ತದೆ. LXXನಲ್ಲಿ ಯಾವ ವೇದಿಯ ಬಗ್ಗೆ ಹೇಳಲಾಗಿರುತ್ತೆಂಬುದು ಸ್ಪಷ್ಟವಾಗಿರುವದಿಲ್ಲ, ಆದರೆ, ಅದು ವಿಮೋಚನಕಾಂಡದಲ್ಲಿ ಹೇಳಲ್ಪಟ್ಟಿರುವ ಧೂಪವೇದಿಯೇ ಆಗಿದ್ದಲ್ಲಿ, ಬಹುಶಃ ಇಬ್ರಿಯರಿಗೆ ಪತ್ರಿಕೆಯ ಲೇಖಕನು ದೋಷಪರಿಹಾರಕ ದಿನವನ್ನು ಮನಸ್ಸಿನಲ್ಲಿಟ್ಟುಕೊಂಡು ಹಾಗೆ ಹೇಳಿರಬಹುದಾಗಿದೆ. ಆ ದಿನದಂದು, ಧೂಪವೇದಿಯು ನಿರಂತರವಾಗಿ ಬಳಕೆಯಲ್ಲಿರುತ್ತಿತ್ತು, ಅತಿಪವಿತ್ರ ಸ್ಥಾನದಲ್ಲಿ ಧೂಪವು ಅರ್ಪಿಸಲ್ಪಡುತ್ತಲೇ ಇರುತ್ತಿತ್ತು. ತೆರೆಯನ್ನು ಹಿಂದಕ್ಕೆ ಎಳೆದಿರುವಾಗ, ಧೂಪವೇದಿಯು ಅತಿಪವಿತ್ರ ಸ್ಥಾನದಲ್ಲಿ ಕಾಣಿಸಿಕೊಳ್ಳುವದು.

**ಒಡಂಬಡಿಕೆಯ ಮಂಜೂಷ**ವು ಸಂಪೂರ್ಣವಾಗಿ ಚಿನ್ನದ ತಗಡಿನಿಂದ ಮುಚ್ಚಲ್ಪಟ್ಟಿತ್ತು ಮತ್ತು "ಕೃಪಾಸನ" ಎಂದು ಕರೆಯಲ್ಪಡುವ ಮುಚ್ಚಳವನ್ನು ಹೊಂದಿತ್ತು. ಕೃಪಾಸನದ ಮೇಲೆ *shekinah* ಇರುತ್ತಿತ್ತು, ಅದು ದೈವಿಕ ಪ್ರಸನ್ನತೆಯ ಪ್ರಾತಿನಿಧ್ಯವಾಗಿತ್ತು.[5] "ಮಂಜೂಷ" ಎಂಬ

ಪದವು ಲ್ಯಾಟಿನ್ ಪದವಾದ *arca* ಎಂಬದರಿಂದ ಬರುತ್ತದೆ, ಅದರರ್ಥವು "ಪೆಟ್ಟಿಗೆ." ಮಂಜೂಷದಲ್ಲಿರುವ ವಸ್ತುಗಳಲ್ಲಿ ದಶಾಜ್ಞೆ ಬರೆದಿದ್ದ **ಕಲ್ಲಿನ ಹಲಿಗೆಗಳು** (ಅಥವಾ ಮೇಜುಗಳು) ಇದ್ದವು.[6] ಸೊಲೊಮೋನನ ಕಾಲದ ಹೊತ್ತಿಗೆ, ಇವುಗಳು ಮಾತ್ರವೇ ಅದರಲ್ಲಿ ಉಳಿದುಕೊಂಡಿದ್ದವು. ಅಂತಿಮವಾಗಿ ಈ ಹಲಿಗೆಗಳಿಗೆ ಏನಾಯಿತೆಂಬುದು ತಿಳಿದು ಬಂದಿರುವದಿಲ್ಲ, ಅದೇ ರೀತಿಯಲ್ಲಿ ಒಡಂಬಡಿಕೆಯ ಮಂಜೂಷವು ಇರುವ ಸ್ಥಳವು ಸಹ ಗೊತ್ತಿರುವದಿಲ್ಲ. ಮೊದಲ ಅರಸು 8:9ನೇ ವಚನವು ಆ ಪೆಟ್ಟಿಗೆಯಲ್ಲಿ ಬೇರೆ ಇನ್ನೇನೋ ಇತ್ತೆಂಬುದನ್ನು ಪರೋಕ್ಷವಾಗಿ ಸೂಚಿಸುತ್ತದೆ. **ಚಿನ್ನದ ಪಾತ್ರೆ**, ಅಥವಾ ಬೂದಿಗಡಿಗೆಯು ಮಂಜೂಷದಲ್ಲಿದ್ದದ್ದಾಗಿದ್ದು ಅದು ಬಹಳ ವರ್ಷಗಳ ಹಿಂದೆಯೇ ಇಲ್ಲದೇ ಹೋಗಿತ್ತು; ಆದರೆ ಅದು ಅರಣ್ಯದಲ್ಲಿ ಅಲೆದಾಡುವ ವೇಳೆಯಲ್ಲಿ ಮನ್ನಾವನ್ನು ಇಡಲಾಗಿತ್ತು, ಮತ್ತು ಆ **ಮನ್ನಾ** ಎಂದೂ ಕೆಟ್ಟು ಹೋಗಿರಲಿಲ್ಲ (ವಿಮೋಚನಕಾಂಡ 16:32-34).[7] **ಆರೋನನ ಚಿಗುರಿದ ಕೋಲು** ಮತ್ತು ಹಣ್ಣಾದ ಬದಾಮಿಗಳು ಅದರಲ್ಲಿದ್ದವು (ನೋಡಿರಿ ಅರಣ್ಯಕಾಂಡ 17:1-11). ಆರೋನನು ಮಹಾಯಾಜಕನಾಗಿರುವಂತೆ ಯೆಹೋವನಿಂದ ಆರಿಸಿಕೊಂಡವನಾಗಿದ್ದಾನೆಂಬುದಕ್ಕೆ ಸಂಕೇತವಾಗಿ ಕೋಲು ಇತ್ತು.

ಒಡಂಬಡಿಕೆಯ ಮಂಜೂಷವು ಬಹುಶಃ ಬಾಬಿಲೋನಿನ ಸೆರೆವಾಸದ ವೇಳೆಯಲ್ಲಿ ಕಳೆದು ಹೋಗಿರಬಹುದಾಗಿದೆ (ಕ್ರಿ.ಪೂ. 586). ಶಾಸ್ತ್ರಗಳಲ್ಲಿ ಅದರ ಬಗ್ಗೆ ಕಡೆಯದಾಗಿ 1 ಅರಸು 8:9ದಲ್ಲಿ ಪ್ರಸ್ತಾಪಿಸಲಾಗಿರುತ್ತದೆ (ನೋಡಿರಿ 2 ಪೂರ್ವಕಾಲವೃತ್ತಾಂತ 5:10). ರೋಮನ್ ಸೇನಾಧಿಕಾರಿ ಪೊಂಪೇಗೆ ಆಶ್ಚರ್ಯ ಹುಟ್ಟಿಸುವ ರೀತಿಯಲ್ಲಿ, ಆತನು ಕ್ರಿ.ಪೂ. 63ರಲ್ಲಿ ತನ್ನ ಸೈನ್ಯವನ್ನು ಅತಿಪವಿತ್ರ ಸ್ಥಳದೊಳಗೆ ನುಗ್ಗಿಸಿದಾಗ ಆತನಿಗೆ ಮಂಜೂಷವು ಅಲ್ಲಿ ಕಂಡು ಬರಲಿಲ್ಲ.[8] ಮಂಜೂಷ ಅನುಪಸ್ಥಿತಿಯಲ್ಲಿ, ಆ ಸ್ಥಳವನ್ನು "ಅಸ್ತಿವಾರದ ಕಲ್ಲು" ಎಂಬ ಒಂದು ಚಪ್ಪಡಿ ಕಲ್ಲಿನಿಂದ ಗುರುತಿಸಲ್ಪಟ್ಟಿತ್ತು.[9]

**ವಚನ 5.** ಅದರ ಮೇಲೆ **ದೇವರ ಪ್ರಭಾವವನ್ನು ಸೂಚಿಸುವ ಕೆರೂಬಿಗಳು ಕೃಪಾಸನದವನ್ನು ಆಚ್ಛಾದಿಸಿಕೊಂಡಿದ್ದವು** (ಮುಚ್ಚಿಕೊಂಡಿದ್ದವು; ನೋಡಿರಿ ವಿಮೋಚನ ಕಾಂಡ 25:18-22; 37:7-9). ಇವೆರಡು ಚಿನ್ನದ ಪ್ರತಿಮೆಗಳಾಗಿದ್ದವು, ಬಹುಶಃ ಪರಲೋಕದಲ್ಲಿ ದೇವರ ಸಿಂಹಾಸನದ ಸುತ್ತ ಇರುವ ದೇವದೂತರಿಗೆ ಸಂಕೇತಗಳಾಗಿರ ಬಹುದು. 1 ಸಮುವೇಲ 4:4ರಲ್ಲಿ ದೇವರು "ಕೆರೂಬಿಗಳ ಮಧ್ಯದಲ್ಲಿ ಆಸೀನನಾಗಿರುವ"ವನು ಎಂದು ಬಣ್ಣಿಸಲ್ಪಟ್ಟಿದ್ದಾನೆ. ದೇವರು ತನ್ನ ಚಿತ್ತದಂತೆ ಯಾವದೇ ದಿಕ್ಕಿನಲ್ಲಿ ಸಂಚರಿಸಿದರೂ ಕೆರೂಬಿಯರು ಆತನಿಗೆ (ಸಾಂಕೇತಿಕ ಭಾಷೆಯಲ್ಲಿ) ವಾಹನವಾಗಿರುತ್ತಾರೆ (ಯೆಹೆಜ್ಕೇಲ 10:10-14; ನೋಡಿರಿ 1:5-14). ಸೊಲೊಮೋನನ ದೇವಾಲಯದಲ್ಲಿ ಎರಡು ಬೃಹತ್ ಕೆರೂಬಿಗಳು ಇದ್ದವು (1 ಅರಸು 6:23-27). ಏಕೆ ಅಂಥ ಪ್ರತಿಮೆಗಳು ಕೆತ್ತಿದ ಮೂರ್ತಿಗಳೆಂದು ಪರಿಗಣಿಸಲ್ಪಟ್ಟಿರಲಿಲ್ಲ? ಅವು ಅತ್ಯಂಥ ಸಾಂಕೇತಿಕ ಸ್ವಭಾವದಲ್ಲಿದ್ದವೆಂಬುದರಲ್ಲಿ ಉತ್ತರವು ಇರಬಲ್ಲದಾಗಿದೆ. ಅವುಗಳು "ಆಕಾಶದಲ್ಲಾಗಲಿ ಭೂಮಿಯ ಮೇಲಾಗಲಿ ಭೂಮಿಯ ಕೆಳಗಣ ನೀರನಲ್ಲಾಗಲಿ ಇರುವ ಯಾವದರ ರೂಪ" ವೂ ಆಗಿರಲಿಲ್ಲ (ವಿಮೋಚನಕಾಂಡ 20:4; ಧರ್ಮೋಪದೇಶಕಾಂಡ 5:8). ನಿಜವಾದದ್ದರ ರೂಪಗಳು ವಾಸ್ತವಿಕತೆಯನ್ನು ವ್ಯಕ್ತಪಡಿಸುವದಕ್ಕೆ ಸಾಕಾಗದವುಗ ಳಾಗಿರತಕ್ಕದ್ದು.

ಹಳೆಯ ಒಡಂಬಡಿಕೆಯಲ್ಲಿ "ಪ್ರಭಾವ"ವು ದೇವದರ್ಶನಗುಡಾರವನ್ನು ಪ್ರವೇಶಿಸಿ, ದೇವರ ಪ್ರಸನ್ನತೆಗೆ ಸಂಕೇತವಾಗಿರುವ ಕೃಪಾಸನದ ಮೇಲೆ ನಿಂತುಕೊಳ್ಳುತ್ತಿದ್ದ ಮೇಘದೊಂದಿಗೆ ಸಂಬಂಧ ಹೊಂದಿತ್ತು.[10] "ಕೃಪಾಸನ" (ἱλαστήριον, *hilastērion*) ಅಂದರೆ

“ಪ್ರಸನ್ನಗೊಳಿಸುವಿಕೆ” ಅಥವಾ “ಪ್ರಾಯಶ್ಚಿತ್ತಪಡಿಸುವಿಕೆ” ಎಂದಾಗಿರುತ್ತದೆ; ಎರಡನೆಯ ಪದವು ಪಾಪ ಪ್ರಾಯಶ್ಚಿತ್ತವನ್ನು ಸೂಚಿಸುತ್ತದೆ. “ಪ್ರಸನ್ನಗೊಳಿಸುವಿಕೆ” ಎಂದರೆ “ಸಂತುಷ್ಟಪಡಿಸು ಅಥವಾ ಕೃಪಾಕಟಾಕ್ಷಗೊಳ್ಳು” ಎಂದಾಗಿದೆ. ದೇವರು ಜನರನ್ನು “ಯೇಸುವಿನ ರಕ್ತದಲ್ಲಿ” ನಂಬಿಕೆಯ ಮೂಲಕವಾಗಿ ನೀತಿವಂತರೆಂದು ನಿರ್ಣಯಿಸುವದಕ್ಕೆ ಸಾಧ್ಯವಾಗುವಂತೆ ಯೇಸುವಿನ ರಕ್ತವು ಸುರಿಸಲ್ಪಡುವದಕ್ಕೆ ಅನುಮತಿಸುವ ಮೂಲಕ ನೀತಿಯುಳ್ಳವನಾಗಿರಬಲ್ಲನೆಂದು ಪೌಲನು ವಿವರಿಸುತ್ತಾನೆ (ನೋಡಿರಿ ರೋಮಾ 3:25). ಹೀಗೆ ಪಾಪಗಳ “ಮುಚ್ಚುವಿಕೆ,” ಅಥವಾ ಕ್ಷಮಾಪಣೆಯು ಈ ಪದದಲ್ಲಿ ಪರೋಕ್ಷವಾಗಿ ಸೂಚಿಸಲ್ಪಟ್ಟಿದೆ. ಇದು ನಮಗೊಬ್ಬ “ಪಾಪಭರಿತ ಮಾನವನನ್ನು ಸಂಧಿಸಿ ಆತನನ್ನು ರಕ್ಷಿಸುವ ದೇವರು ಇದ್ದಾನೆ” ಎಂಬುದನ್ನು ಸೂಚಿಸುತ್ತದೆ.[11]

ಲೇಖಕನು **ಈ ವಿಷಯಗಳನ್ನು** ಹೊರತು ಪಡಿಸಿ ಹೆಚ್ಚಿನದೇನನ್ನೂ **ವಿವರಿಸುವದಕ್ಕೆ** ಉದ್ದೇಶ ಹೊಂದಿರಲಿಲ್ಲ. ಅವರು ಭೂಮಿಯಲ್ಲೆಲ್ಲಾ ಇದ್ದರು ಮತ್ತು ಹೇಗೂ ನಿರ್ಮೂಲನೆ ಮಾಡಲ್ಪಡಲಿದ್ದರು.

### ದೋಷಪರಿಹಾರಕ ದಿನ (9:6, 7)

**[6]ಇವುಗಳು ಹೀಗೆ ಸಿದ್ಧಮಾಡಲ್ಪಟ್ಟ ಮೇಲೆ ಯಾಜಕರು ಯಾವಾಗಲೂ ಗುಡಾರದ ಮುಂದಣ ಭಾಗದೊಳಗೆ ಹೋಗಿ ದೇವಾರಾಧನೆಯನ್ನು ನಡಿಸುತ್ತಾರೆ. [7]ಆದರೆ ಎರಡನೆಯ ಭಾಗದೊಳಗೆ ಮಹಾಯಾಜಕನೊಬ್ಬನೇ ವರುಷಕ್ಕೆ ಒಂದೇ ಸಾರಿ ಹೋಗುತ್ತಾನೆ, ಅವನು ರಕ್ತವನ್ನು ತಕ್ಕೊಳ್ಳದೆ ಹೋಗುವದಿಲ್ಲ; ಆ ರಕ್ತವನ್ನು ತನಗೋಸ್ಕರವೂ ಜನರ ತಪ್ಪುಗಳಿಗೋಸ್ಕರವೂ ಸಮರ್ಪಿಸುತ್ತಾನೆ.**

**ವಚನಗಳು 6, 7. ಯಾಜಕರು** ಸಿದ್ಧಪಡಿಸುವದಕ್ಕಾಗಿ ಮತ್ತು ದೀಪಗಳಲ್ಲಿ ಎಣ್ಣೆಯನ್ನು ತುಂಬಿಸುವದಕ್ಕಾಗಿ ಹಾಗೂ ಬೆಳಿಗ್ಗೆ ಮತ್ತು ಸಾಯಂಕಾಲಗಳಲ್ಲಿ ಧೂಪವನ್ನು ಅರ್ಪಿಸುವದಕ್ಕೆ ದಿನಾಲೂ ಪ್ರವೇಶ ಮಾಡುತ್ತಿದ್ದರು (ವಿಮೋಚನಕಾಂಡ 30:7, 8; ಯಾಜಕಕಾಂಡ 24:3, 4). ಅವರಿಗೆ ಪವಿತ್ರ ಸ್ಥಳವನ್ನು ಪ್ರವೇಶಿಸುವದಕ್ಕೆ ಮಾತ್ರವೇ ಅನುಮತಿಯಿತ್ತು, ಆದರೆ ಈ ಸ್ಥಳದಲ್ಲಿ ಪ್ರವೇಶಿಸುವದಕ್ಕೆ ಸಾಮಾನ್ಯ ಯೆಹೂದಿಗಳಿಗೆ ಅವಕಾಶವೇ ಇರಲಿಲ್ಲ. ಜಕರೀಯನಿಗೆ ಯಾಜಕ ಕೆಲಸಗಳನ್ನು ನಡಿಸುವ ಗೌರವ ದೊರಕಿತ್ತು, ಆಗ ಲೂಕ 1:9-20ರಲ್ಲಿ ದೇವದೂತನು ಅವನ ಸಂಗಡ ಮಾತಾಡಿದ್ದನು. ದೇವಾಲಯದ **ಎರಡನೆಯ ಭಾಗದೊಳಗೆ**[12] **ವರುಷಕ್ಕೆ ಒಂದೇ ಸಾರಿ** ಅತಿಪವಿತ್ರ ಸ್ಥಳದಲ್ಲಿ ದೋಷಪರಿಹಾರಕ ದಿನದ ಅಗತ್ಯತೆಗಳನ್ನು ಸಿದ್ಧಪಡಿಸುವದಕ್ಕೆ ಒಬ್ಬ ಯಾಜಕನು ಪ್ರವೇಶ ಮಾಡುತ್ತಿದ್ದನು.

ದೋಷಪರಿಹಾರಕ ದಿನದ (Yom Kippur) ಚಟುವಟಿಕೆಗಳ ವಿವರವು ಯಾಜಕಕಾಂಡ 16ರಲ್ಲಿ ಕೊಡಲ್ಪಟ್ಟಿದೆ. ಈ ದಿನವು ಪ್ರತಿ ವರ್ಷ ತಿಶ್ರಿ ತಿಂಗಳಿನ ಹತ್ತನೆಯ ದಿನದಂದು ಬರುತ್ತಿತ್ತು, ಅಂದಾಜಿನಲ್ಲಿ ಸೆಪ್ಟೆಂಬರ್ ತಿಂಗಳಿಗೆ ಬರುತ್ತಿತ್ತು. **ಮಹಾಯಾಜಕನು** ವರುಷಕ್ಕೆ ಒಂದು ಸಾರಿ ಅತಿಪವಿತ್ರ ಸ್ಥಳದೊಳಗೆ **ಹೋಗುವಾಗ**, ಆತನು ಅ ದಿನದಲ್ಲಿ ಮೂರು ಸಾರಿ ಪ್ರವೇಶಿಸಿರಬಹುದಾಗಿದೆ: ಮೊದಲನೆಯದಾಗಿ ಕೃಪಾಸನದ ಮೇಲೆ ಧೂಪದ ಮೇಘವನ್ನು ನಿರ್ಮಿಸುವದಕ್ಕೆ, ನಂತರ ತನ್ನ ಸ್ವಂತ ಪಾಪಗಳಿಗಾಗಿ ಒಂದು ಎಳೆಯ ವಯಸ್ಸಿನ ಹೋರಿಯ ರಕ್ತವನ್ನು ತಕ್ಕೊಂಡು ಹೋಗುತ್ತಿದ್ದನು, ಮತ್ತು ಅಂತಿಮವಾಗಿ **ಜನರು ಅಜ್ಞಾನದಲ್ಲಿ ಮಾಡಿದ ತಪ್ಪುಗಳಿಗೋಸ್ಕರ** ಹೋತದ ರಕ್ತವನ್ನು ಅರ್ಪಿಸುವದಕ್ಕೆ ಹೋಗುತ್ತಿದ್ದನು.[13] “ಪೂರ್ಣ

ತಿಳುವಳಿಕೆಯಿಂದ," ಅಥವಾ ಉದ್ದೇಶಪೂರ್ವಕವಾಗಿ, ಬಂಡಾಯದ ಪೂರ್ವಕಲ್ಪನೆಯೊಂದಿಗೆ ಪಾಪಗಳು ಮಾಡಲ್ಪಡುವಾಗ ಆ ಪಾಪಗಳು ಹಳೆಯ ಒಡಂಬಡಿಕೆಯಲ್ಲಿ ಕ್ಷಮಿಸಲ್ಪಟ್ಟವೆಂಬುದಕ್ಕೆ ನಾವು ಯಾವದೇ ಪುರಾವೆಗಳನ್ನು ಕಾಣುವದಿಲ್ಲ. *Mishnah* ಹೀಗೆ ಹೇಳುತ್ತದೆ, "ಒಬ್ಬ ಮನುಷ್ಯನು 'ನಾನು ಪಾಪ ಮಾಡಿ ಪಶ್ಚಾತ್ತಾಪ ಪಡುವೆನು, ಮತ್ತು ಪುನಃ ಪಾಪ ಮಾಡಿ ಪಶ್ಚಾತ್ತಾಪ ಪಡುವೆನು' ಎಂದು ಹೇಳಿದರೆ ಆತನಿಗೆ ಪಶ್ಚಾತ್ತಾಪ ಪಡುವದಕ್ಕೆ ಯಾವದೇ ಅವಕಾಶವು ಕೊಡಲ್ಪಡುವದಿಲ್ಲ. [ಆತನು ಹೀಗೆ ಹೇಳಿದರೆ], 'ನಾನು ಪಾಪ ಮಾಡುವೆನು ಮತ್ತು ದೋಷಪರಿಹಾರಕ ದಿನವು ಪ್ರಾಯಶ್ಚಿತ್ತ ಮಾಡುವದು' ಎಂದರೆ, ದೋಷಪರಿಹಾರ ದಿನವು ಪ್ರಾಯಶ್ಚಿತ್ತವನ್ನು ಮಾಡುವದಿಲ್ಲ."[14] ಇದು ಇಬ್ರಿಯ 6:4-6; 10:26-29ರಲ್ಲಿನ ಪರಿಮಳವನ್ನು ಹೊಂದಿರುತ್ತದೆ. ಕೆಲವರು ಕೆಟ್ಟತನದಲ್ಲಿ ಎಷ್ಟೊಂದು ಮುಳುಗಿ ಹೋಗಿರುತ್ತಾರೆಂದರೆ ಅವರಿಗೆ ಅದರ ದುಷ್ಪರಿಣಾಮಗಳ ಬಗ್ಗೆ ತಿಳಿದಿರುತ್ತದೆ ಮತ್ತು ಆಗಲೂ ಅವನತಿಯ ದಾರಿಯನ್ನು ಅನುಸರಿಸುತ್ತಿರುತ್ತಾರೆ. ಅದಕ್ಕೆ ತದ್ವಿರುದ್ಧವಾಗಿ, "ತಿಳುವಳಿಕೆಯಿಂದ" ಮಾಡಿದ ಪಾಪಗಳಿಂದ ಬೇರ್ಪಡಿಸಬೇಕಾಗಿರುವ "ಅಜ್ಞಾನದಿಂದ" ಮಾಡಿದ ನಿಜವಾದ ಪಾಪಗಳಿರುತ್ತವೆ. ಕ್ಷಮಾಪಣೆಯನ್ನು ಅನುಮತಿಸುವ ಅಥವಾ ನಿತ್ಯವಾದ ನಾಶನವನ್ನು ತರುವಂತಹ ಅಜ್ಞಾನ ಅಥವಾ ಜ್ಞಾನದ ಪ್ರಮಾಣವನ್ನು ದೇವರು ಮಾತ್ರವೇ ನಿರ್ಧರಿಸಬಲ್ಲನು.

ಹಳೆಯ ಒಡಂಬಡಿಕೆಯ ಅಡಿಯಲ್ಲಿ ಮಾಡಲಾಗುವ ಯಜ್ಞಗಳು ಪಾಪವನ್ನು ಪರಿಹರಿಸಿದವು, ಆದರೆ ಅವುಗಳು ಪಾಪವನ್ನು ನಿವಾರಿಸಲಿಲ್ಲ. ಕ್ರಿಸ್ತನ ಶುದ್ಧೀಕರಣ ಮತ್ತು ರಕ್ಷಿಸುವ ಕೆಲಸವು ದೋಷಪರಿಹಾರಕ ದಿನದಂದು ಯೆಹೂದಿ ಮಹಾಯಾಜಕರು ಮಾಡುವ ಕೆಲಸವನ್ನು ಮೀರಿಸುವಂಥದ್ದು ಮತ್ತು ಅದಕ್ಕಿಂತ ಎಷ್ಟೋ ಹೆಚ್ಚಿನದ್ದಾಗಿದೆ.

### ಕೇವಲ ರೂಪಕಗಳು ಮತ್ತು ಸಂಕೇತಗಳು (9:8-10)

**8ಈ ಏರ್ಪಾಟಿನಿಂದ ಗುಡಾರದಲ್ಲಿ ಮುಂದಣ ಭಾಗವು ಇರುವ ತನಕ ದೇವರ ಸಮಕ್ಷಮಕ್ಕೆ ಹೋಗುವ ಮಾರ್ಗವು ಇದುವರೆಗೂ ಪ್ರಕಟವಾಗಲಿಲ್ಲವೆಂಬುದನ್ನು ಪವಿತ್ರಾತ್ಮನು ವ್ಯಕ್ತಪಡಿಸುತ್ತಾನೆ. 9ಆಗುಡಾರವು ಈಗಿನ ಕಾಲದವರಿಗೋಸ್ಕರ ಒಂದು ಒಳಗಣ ಅರ್ಥವನ್ನು ಸೂಚಿಸುತ್ತದೆ; ಏನಂದರೆ ಅದರ ಕ್ರಮದ ಮೇರೆಗೆ ಸಮರ್ಪಣೆಯಾಗುವ ಕಾಣಿಕೆಗಳೂ ಯಜ್ಞಗಳೂ ದೇವಾರಾಧನೆ ಮಾಡುವವರನ್ನು ಮನಸ್ಸಾಕ್ಷಿಯು ಒಪ್ಪುವಂತೆ ಸಿದ್ಧಿಗೆ ತರಲಾರದೆ 10ಅನ್ನಪಾನಾದಿಗಳೂ ವಿವಿಧ ಸ್ನಾನಗಳೂ ಸಹಿತವಾಗಿ ದೇಹಕ್ಕೆ ಮಾತ್ರ ಸಂಬಂಧಪಟ್ಟ ನಿಯಮಗಳಾಗಿದ್ದು ತಿದ್ದುಪಾಟಿನ ಕಾಲದ ವರೆಗೆ ಮಾತ್ರ ನೇಮಕವಾದವು ಎಂಬದು.**

**ವಚನ 8.** ತೆರೆಯು ತೆರೆಯಲ್ಪಟ್ಟು ಅಥವಾ ತೆಗೆದು ಹಾಕಲ್ಪಟ್ಟದ್ದರೊಂದಿಗೆ, ದೇವರ ಸಮಕ್ಷಮದಲ್ಲಿಯೇ ಪ್ರವೇಶಿಸುವದಕ್ಕೆ ದಾರಿಯು ತೆರೆವುಗೊಳಿಸಲ್ಪಟ್ಟಿರುತ್ತದೆ. ಮೋಶೆಗೆ ಧರ್ಮಶಾಸ್ತ್ರವನ್ನು ಮತ್ತು ದೇವದರ್ಶನ ಗುಡಾರಕ್ಕಾಗಿರುವ ಎಲ್ಲಾ ಧಾರ್ಮಿಕ ಆಚಾರಗಳನ್ನು ಕೊಟ್ಟಿದ್ದು **ಪವಿತ್ರಾತ್ಮನು** ಆಗಿದ್ದಾನೆ. ಈ ಧಾರ್ಮಿಕ ಆಚಾರದ ನಿಜವಾದ ಅರ್ಥವು ಇಬ್ರಿಯರಿಗೆ ಪತ್ರಿಕೆಯೊಳಗೆ ಇಲ್ಲಿ ಕಂಡು ಬರುತ್ತದೆ, ಅದು ಸಹ ಪವಿತ್ರಾತ್ಮನಿಂದ ಕೊಡಲ್ಪಟ್ಟಿತ್ತು. ಖಂಡಿತವಾಗಿಯೂ, ಶಾಸ್ತ್ರಗಳು ದೈವಪ್ರೇರಿತವೆಂಬುದಕ್ಕೆ ಇಬ್ರಿಯರಿಗೆ ಪತ್ರಿಕೆಯು ಕೊಡುವಷ್ಟು ಗೌರವವನ್ನು ಬೇರೆ ಇನ್ನಾವ ಪುಸ್ತಕವೂ ಕೊಡುವದಿಲ್ಲ. ದೇವದರ್ಶನಗುಡಾರದ ವಿನ್ಯಾಸ ಮತ್ತು ನಿರ್ಮಾಣಕ್ಕೆ ಮಾರ್ಗದರ್ಶನ ನೀಡಿದ ಅದೇ ಪವಿತ್ರಾತ್ಮನು ಹಳೆಯ ಒಡಂಬಡಿಕೆಯ ಲೇಖಕರನ್ನು, ಮಾತ್ರವಲ್ಲದೆ ಹೊಸ ಒಡಂಬಡಿಕೆಯ ಲೇಖಕರನ್ನು ಸಹ ಪ್ರೇರಿಸಿದ್ದನು (2 ಪೇತ್ರ

1:20, 21).

ಇಬ್ರಿಯರಿಗೆ ಪತ್ರಿಕೆಯನ್ನು ಓದುವದರಲ್ಲಿ, ಹಳೆಯ ಒಡಂಬಡಿಕೆಯ ಶಾಸ್ತ್ರಗಳು ಒಂದು ದೊಡ್ಡದಾದ ಎರಡನೆಯ ಅರ್ಥವನ್ನು ಹೊಂದಿದ್ದು ಅದು ಹೊಸ ಒಡಂಬಡಿಕೆಯ ಆರಾಧನೆಯನ್ನು ಗ್ರಹಿಸಿಕೊಳ್ಳುವಂತೆ ನಮಗೆ ಸಹಾಯ ಮಾಡುವದಕ್ಕೆ ಮಹತ್ವಪೂರ್ಣವಾಗಿರುತ್ತದೆಂಬುದು ಸ್ಪಷ್ಟಗೊಳ್ಳುತ್ತದೆ. ಪವಿತ್ರ ಪರ್ವತದ ಮೇಲೆ, ಮೋಶೆಗೆ ಏನೋ ತೋರಿಸಲ್ಪಟ್ಟಿತು, ಆತನು ಅದನ್ನು ನಂಬಿಗಸ್ತಿಕೆಯಿಂದ ಒಂದು ಸಾಂಕೇತಿಕ ಪ್ರತಿರೂಪವಾಗಿ, ಅಂದರೆ ದೇವದರ್ಶನ ಗುಡಾರವಾಗಿ ಮರು ಉತ್ಪಾದಿಸಿದನು (ನೋಡಿರಿ ವಿಮೋಚನಕಾಂಡ 25:40; ಇಬ್ರಿಯ 9:8, 11, 23, 24).

ಹಳೆಯ ವ್ಯವಸ್ಥೆಯು ನೆರವೇರಿದ ತನಕ, ಜನರು ಹೇಗೆ ರಕ್ಷಿಸಲ್ಪಡುವರು ಅಥವಾ ನೀತಿವಂತರೆಂದು ನಿರ್ಣಯಿಸಲ್ಪಡುವರು, ಮತ್ತು ಆ ಮೂಲಕ ಪರಲೋಕದಲ್ಲಿನ **ಪವಿತ್ರಸ್ಥಾನ**ವನ್ನು ಪ್ರವೇಶಿಸುವರೆಂಬುದು ಸ್ಪಷ್ಟಗೊಂಡಿರಲಿಲ್ಲ. ದೇವಾಯಲವು **ಇರುವ ತನಕ** ವೇಳೆಯಲ್ಲಿ ಯಾವನೂ ಪರಲೋಕಕ್ಕೆ ದಾರಿಯನ್ನು ಕಂಡುಕೊಳ್ಳುವದಕ್ಕಾಗಲಿಲ್ಲ ಎಂದು ತರ್ಜುಮೆಗಳು ಪರೋಕ್ಷವಾಗಿ ಸೂಚಿಸುವಂತೆ ತೋರುತ್ತವೆ. ಒಂದು ಉತ್ತಮವಾದ ಅನುವಾದವು ಸಲಹೆ ಮಾಡಲ್ಪಟ್ಟಿರುತ್ತದೆ: "ಮೊದಲ ದೇವದರ್ಶನಗುಡಾರವು ಇನ್ನೂ ಯಾವದೇ ಮಾನ್ಯತೆಯನ್ನು ಹೊಂದಿರುವಾಗ."[15] 8ನೇ ವಚನವು ಹೇಳುವದೇನೆಂದರೆ "ಪವಿತ್ರಸ್ಥಳ"ವು ಇರುವಿಕೆಯು ("ಅತಿಪವಿತ್ರ ಸ್ಥಳ" ಎಂದರ್ಥ) "ಹೊರಗಿನ ದೇವದರ್ಶನಗುಡಾರ" ಇನ್ನೂ "ಇರುವ ತನಕ" ಪರಲೋಕದೊಳಗೆ ಪ್ರವೇಶಿಸುವ ದಾರಿಯು ಪ್ರಕಟಗೊಳಿಸಲ್ಪಟ್ಟಿರಲಿಲ್ಲ ಎಂಬುದನ್ನು ಸೂಚಿಸುತ್ತದೆ. ಅಂದರೆ, ಹಳೆಯ ವ್ಯವಸ್ಥೆಯ ಮೇಲೆ ಅವಲಂಭಿತನಾಗಿರುವ ಒಬ್ಬ ವ್ಯಕ್ತಿಯು ದೇವರ ಸಮಕ್ಷಮದಲ್ಲಿ ಪ್ರವೇಶಿಸುವದಕ್ಕೆ ನಿಜವಾದ ಮಾರ್ಗವನ್ನು ಕಂಡುಕೊಳ್ಳಲಾಗಲಿಲ್ಲ. ಒಬ್ಬನು ಛಾಯೆಗಳಿಗೆ ಅಂಟಿಕೊಂಡಿರುವ ವೇಳೆಯಲ್ಲಿ ವಾಸ್ತವಿಕತೆಯನ್ನು ಹಿಡಿದುಕೊಳ್ಳುವದಕ್ಕೆ ಸಾಧ್ಯವಿಲ್ಲ. ಇಬ್ರಿಯ ಕ್ರೈಸ್ತರಿಗಾದರೋ ಧರ್ಮಶಾಸ್ತ್ರಕ್ಕೆ ಅಂಟಿಕೊಂಡಿರುವದು ಅವರ ರಕ್ಷಣೆಯನ್ನು ಗಂಡಾಂತರಕ್ಕೀಡು ಮಾಡುವದಾಗಿತ್ತು.

ಮಹಾಯಾಜಕನು ಮಾತ್ರವೇ ಅತಿಪವಿತ್ರ ಸ್ಥಳವನ್ನು ಪ್ರವೇಶಿಸಬಲ್ಲವನಾಗಿದ್ದನು, ಅದು ಒಂದು ರೂಪಕದಲ್ಲಿ, ಪರಲೋಕದೊಳಗೆ ಪ್ರವೇಶಿಸುವದಕ್ಕೆ ದಾರಿಯು ಇನ್ನೂ ಅಸ್ಪಷ್ಟವಾಗಿತ್ತು ಎಂಬುದನ್ನು ತೋರಿಸಿತ್ತು. ತೆರೆಯು ಹರಿದು ಹಾಕಲ್ಪಟ್ಟಾಗ ಆ ಅಸ್ಪಷ್ಟತೆಯು ಸಾಂಕೇತಿಕವಾಗಿ ಅಂತ್ಯಗೊಂಡಿತ್ತು. ಧರ್ಮಶಾಸ್ತ್ರದಡಿಯಲ್ಲಿ ರಕ್ಷಿಸಲ್ಪಟ್ಟವರು ವಿಮೋಚಿಸಲ್ಪಡುವ ನಿರೀಕ್ಷೆಯೊಂದಿಗೆ ಜೀವಿಸಿದರು. ಇದು ಹೇಗೆ ಕ್ರಿಸ್ತನ ಮರಣದ ಮೂಲಕ ಸಾಧಿಸಲ್ಪಡುವದಿತ್ತು ಎಂಬುದು ಆತನು ಬರುವ ತನಕ ಮತ್ತು ಅಪೊಸ್ತಲರು ಆತನ ಕೆಲಸವರನ್ನು ವಿಸ್ತರಿಸುವ ತನಕ ಒಂದು ಮರ್ಮವಾಗಿ ಉಳಿದಿತ್ತು.

**ವಚನ 9.** ಅತಿಪವಿತ್ರ ಸ್ಥಳದೊಳಗೆ ನೋಡುವದಕ್ಕಿದ್ದ ಅಸಮರ್ಥತೆಯು (ವ. 8) ಕ್ರೈಸ್ತ ಯುಗಕ್ಕೆ ಒಂದು (ಈಗಿನ "ಕಾಲ" ಅಥವಾ "ಯುಗ") "ರೂಪಕ" ಅಥವಾ **ಒಂದು ಒಳಗಣ ಅರ್ಥವನ್ನು**[16] ಸೂಚಿಸುವದಾಗಿತ್ತು. ಮೋಶೆಯ ಯುಗವು ಒಂದು ನಮೂನೆಗಳ ಮತ್ತು ಛಾಯೆಗಳ ಕಂತೆಯಾಗಿದ್ದು ಅವುಗಳು ಸಭೆಯಲ್ಲಿ ನೆರವೇರಿದವು. ಕ್ರಿಸ್ತನ ಮರಣದ ವೇಳೆ ತೆರೆಯು ಹರಿಯಲ್ಪಡುವಿಕೆಯು ನಿಜವಾದ ಅತಿಪವಿತ್ರ ಸ್ಥಳದೊಳಗೆ ಪ್ರವೇಶಮಾರ್ಗವನ್ನು ಪ್ರತಿನಿಧಿಸುತ್ತದೆ (ನೋಡಿರಿ ಮತ್ತಾಯ 27:51; ಮಾರ್ಕ 15:38; ಲೂಕ 23:45). ಕ್ರಿಸ್ತನು ತನ್ನ ರಕ್ತವನ್ನು ಸುರಿಸಿ ಅದನ್ನು ಪರಲೋಕದಲ್ಲಿ ಅರ್ಪಿಸುವ ತನಕ ಮಹಿಮೆಯೊಳಗೆ ಪ್ರವೇಶಿಸುವ

ದಾರಿಯು ಇನ್ನೂ ಪೂರ್ಣವಾಗಿ ಪ್ರಕಟಪಡಿಸಲ್ಪಟ್ಟಿರಲಿಲ್ಲ ಎಂದು ಸೂಚಿಸುತ್ತದೆ. ಅಪೊಸ್ತಲರ ಕೃತ್ಯಗಳು 2ರಲ್ಲಿ ಅಪೊಸ್ತಲರು ಯಾವದೇ ರೂಪಕೋಕ್ತಿಗಳನ್ನು ಬಳಸದೆಯೇ, ಹೇಗೆ ರಕ್ಷಣೆ ಹೊಂದಬಹುದೆಂಬುದನ್ನು ಸರಳವಾಗಿ ಸಾರಿದರು (ಅಪೊಸ್ತಲರ ಕೃತ್ಯಗಳು 2:36-38). ನಮಗೆ ಪರಲೋಕದಲ್ಲಿ ಪ್ರವೇಶಿಸುವದಕ್ಕೆ ಅನುಮತಿಸುವಂತೆ ಈ ತೆರೆಯು ಹರಿದು ಹಾಕಲ್ಪಟ್ಟಿದೆ. ದಾರಿಯು ಈಗ ಪರಿಪೂರ್ಣವಾಗಿ ಸರಾಗಗೊಳಿಸಲ್ಪಟ್ಟಿರುತ್ತದೆ.

ಯೇಸುವಿನ ಹರಿದ ಶರೀರವೇ (ತೆರೆಯು) ಮಾರ್ಗವನ್ನು ತೆರೆಯಿತು (ಇಬ್ರಿಯ 10:20). ಸಭೆ, ಅಥವಾ ಕ್ರಿಸ್ತನ ದೇಹವು ಕ್ರಿಸ್ತನು ಶಿಲುಬೆಯ ಮೇಲೆ ಮರಣಿಸುವ ತನಕ ಅಸ್ತಿತ್ವಕ್ಕೆ ಬರಲಿಲ್ಲ. ಆತನನ ಸಭೆಯು ರಕ್ಷಣೆ ಹೊಂದಿದವರನ್ನು – ಹಿಂದಿನ ಕಾಲದಲ್ಲಿ ನಾಶನದಲ್ಲಿದ್ದ ಆದರೆ ಈಗ ವಿಮೋಚಿಸಲ್ಪಟ್ಟ ಆತ್ಮಗಳಾಗಿದ್ದು ಯೇಸು ಸಭೆಯನ್ನು ತನ್ನ ರಕ್ತದಿಂದ ಕೊಂಡುಕೊಳ್ಳುವ ತನಕ ಅದರಲ್ಲಿ ಸೇರಲಾರದವರಾಗಿದ್ದವರು – ಒಳಗೊಂಡಿರುತ್ತದೆ (ಅಪೊಸ್ತಲರ ಕೃತ್ಯಗಳು 20:28). ದೇವರು ತನ್ನ ನಿಜವಾದ ಮಹಾಯಾಜಕನಿಗೆ, ಮೆಸ್ಸೀಯನಿಗೆ ಮಹಿಮೆಯ ತೆರೆಯೊಳಗೆ ನಮ್ಮ ವಿಮೋಚನೆಯನ್ನು ಸಂಪಾದಿಸಿಕೊಂಡವನಾಗಿ ಪ್ರವೇಶಿಸುವದಕ್ಕೆ ಸಾಧ್ಯಗೊಳಿಸಿದನು. “ಇಸ್ರಾಯೇಲಿನಲ್ಲಿದ್ದ ದೇವದರ್ಶನಗುಡಾರವು, ಮತ್ತು ನಂತರ ದೇವಾಲಯವು, ದೇವಾಲಯತದ ತೆರೆಯು ಹರಿಯಲ್ಪಡುವ ತನಕ ಇಸ್ರಾಯೇಲ್ಯರ ಇತಿಹಾಸದಲ್ಲಿ ಪಾಠದ ಲಕ್ಷ್ಯವಾಗಿ ಉಳಿದಿತ್ತು.”[17]

ಧರ್ಮಶಾಸ್ತ್ರದಡಿಯಲ್ಲಿ ಒಬ್ಬ **ದೇವಾರಾಧನೆ ಮಾಡುವವನು** ಪಾಪದಿಂದ ಬಿಡುಗಡೆಗೊಂಡವನೆಂಬ ನಿಜವಾದ ಅರ್ಥದಲ್ಲಿ **ಮನಸ್ಸಾಕ್ಷಿಯು ಒಪ್ಪುವಂತೆ ಸಿದ್ಧಿಗೆ** ಬರುವದಕ್ಕಾಗಲಿಲ್ಲ. “ಮನಸ್ಸಾಕ್ಷಿಯು ಶುದ್ಧ ಮಾಡಲ್ಪಟ್ಟಾಗ ಮಾತ್ರವೇ ಒಬ್ಬನು ದೇವರನ್ನು ಸಮೀಪಿಸುವದಕ್ಕೆ ಮತ್ತು ಅಂಗೀಕಾರರ್ಹವಾದ ಸೇವೆ ಹಾಗೂ ಆರಾಧನೆಗಳನ್ನು ಅರ್ಪಿಸುವದಕ್ಕೆ ವಿಮುಕ್ತಗೊಳಿಸಲ್ಪಟ್ಟವನಾಗುತ್ತಾನೆ.”[18] “ಮನಸ್ಸಾಕ್ಷಿ” ಎಂಬ ಪದವು ಇಲ್ಲಿ ಬಹುಶಃ ಕೇವಲ ಒಂದು ಪಾಪದ “ಅರಿವು” – ತತ್ಪರಿಣಾಮವಾಗಿ, ಒಂದು “ಗಾಯಗೊಂಡ ಮನಸ್ಸಾಕ್ಷಿ” – ಎಂದರ್ಥವಾಗಿರಬಹುದಾಗಿದೆ. “ಒಂದು ಕಳವಳಗೊಂಡ ಮನಸ್ಸಾಕ್ಷಿಯುಳ್ಳ ವಾಚಕನೊಬ್ಬನು ಹೆಚ್ಚುಕಡಿಮೆ ಶಾಸ್ತ್ರಗಳಲ್ಲಿ ಬೇರೆ ಯಾವದೇ ಭಾಗದಲ್ಲಿ ಹೊಂದುವದಕ್ಕಿಂತಲೂ ಇಬ್ರಿಯರಿಗೆ ಪತ್ರಿಕೆಯಲ್ಲಿ ಹೆಚ್ಚು ಸಹಾಯವನ್ನು ಕಂಡುಕೊಳ್ಳುವ ಸಾಧ್ಯತೆಯಿರುತ್ತದೆ.”[19] ವಾಸ್ತವದಲ್ಲಿ, 9:14ನೇ ವಚನದಲ್ಲಿ ಕಳವಳಕ್ಕೊಳಗಾಗಿರುವ ಮನಸ್ಸಾಕ್ಷಿಯಲ್ಲಿರುವ ಪ್ರತಿಯೊಬ್ಬ ಪುರುಷ ಮತ್ತು ಸ್ತ್ರೀಗೆ ಸಹಾಯವನ್ನು ಒದಗಿಸುವದಕ್ಕೆ ಬಯಸಿದ್ದನೆಂದು ತೋರುತ್ತದೆ. ಯೆಹೂದ್ಯನು Yom Kippur ದಿನದಂದು ಯಜ್ಞವನ್ನು ಅರ್ಪಿಸಿದ ಬಳಿಕ ತನಗೆ ಶುದ್ಧ ಮನಸ್ಸಾಕ್ಷಿಯು ಇರುತ್ತದೆಂದು ಭಾವಿಸಿಕೊಂಡಿರಬಹುದು. ಬಹುಶಃ ಆತನು ಆ ದಿನದಲ್ಲಿ ತನ್ನ ಪಾಪಗಳು ನಿವಾರಿಸಲ್ಪಟ್ಟವೆಂದು ನಂಬಿರಬಹುದು, ಆದರೆ ಆತನು ಈಗಲೂ ಪಾಪದಲ್ಲಿದ್ದನು.

**ವಚನ 10.** ಇಂದು ಒಬ್ಬನು ದೀಕ್ಷಾಸ್ನಾನದಲ್ಲಿ ಕ್ರಿಸ್ತನಿಗೆ ವಿಧೇಯನಾಗುವ ಮೂಲಕ ನಿಜವಾಗಿಯೂ ಒಂದು ಶುದ್ಧ ಮನಸ್ಸಾಕ್ಷಿಯನ್ನು ಹೊಂದಿಕೊಳ್ಳಬಲ್ಲನು (1 ಪೇತ್ರ 3:21). ಈ ಕ್ರಿಯೆಯ ಮೂಲಕ, ನಮ್ಮ ಹಿಂದಿನ ಪಾಪಗಳು ಇನ್ನು ಹೊರಟು ಹೋಗಿವೆಯೆಂಬುದನ್ನು ತಿಳಿಯಬಲ್ಲೆವು. ಯೇಸುವು ದೇವರ ಬಳಿಗೆ ಮಾರ್ಗವನ್ನು ಏರ್ಪಡಿಸುವ ರಕ್ಷಣೆಗೆ ಮತ್ತು ಶುದ್ಧೀಕರಣಕ್ಕೆ ದಾರಿಯಾಗಿದ್ದಾನೆ (ಯೋಹಾನ 14:6). ಧರ್ಮಶಾಸ್ತ್ರವು ಪಾಪಗಳ ಪೂರ್ಣ ಕ್ಷಮಾಪಣೆಯನ್ನು ಒದಗಿಸಲಿಲ್ಲ ಮತ್ತು ಸಂಪಾದಿಸಿಕೊಳ್ಳಲಿಲ್ಲ; ಅದು ಕೇವಲ ಒಂದು ಸಾಂಕೇತಿಕ ಅಥವಾ ಧಾರ್ಮಿಕ ಆಚಾರದ ಕ್ಷಮಾಪಣೆ ಮಾತ್ರವೇ ಆಗಿರುತ್ತದೆ. ಅದು **ದೇಹಕ್ಕೆ**

**ಮಾತ್ರ ಸಂಬಂಧಪಟ್ಟ ನಿಯಮಗಳಾಗಿತ್ತು**; ಅದರ ವಿವಿಧ ಸ್ನಾನಗಳು ಆತ್ಮವನ್ನು ಶುದ್ಧ ಮಾಡುವದಕ್ಕೆ ಸಾಧ್ಯವಾಗಲಿಲ್ಲ.

ಅಂಥ ಕಾರ್ಯಗಳುಕೇವಲ ಒಂದು "ಒಳಗಣ ಅರ್ಥ" (ವ. 9), ಅಥವಾ "ಛಾಯೆ" ಮಾತ್ರವೇ ಆಗಿದ್ದವು (ಕೊಲೊಸ್ಸೆ 2:14-17), ಅದು **ತಿದ್ದುಪಾಟಿನ ಕಾಲದ ವರೆಗೆ ಮಾತ್ರ** (διόρθωσις, *diorthōsis*) ಇರತಕ್ಕದ್ದಾಗಿತ್ತು. "ತಿದ್ದುಪಾಟು" ಎಂಬುದಕ್ಕಿರುವ ಈ ಪದವು "ತನ್ನ ಮೂಲಸ್ಥಾನದಿಂದ ಬಿದ್ದು ಹೋಗಿರುವದನ್ನು ನೆಟ್ಟಗೆ ಮಾಡುವದು" ಎಂದರ್ಥವನ್ನು ಕೊಡಬಲ್ಲದು ಮತ್ತು ಅದು ಕೀಲು ತಪ್ಪಿದ ಅಂಗಗಳನ್ನು ಪುನಃ ಸರಿಪಡಿಸುವದು ಎಂಬುದನ್ನು ಸಹ ಸೂಚಿಸಬಹುದಾಗಿದೆ.[20] ಇದು "ಸಮಸ್ತವೂ ಸರಿ ಪಡಿಸಲ್ಪಡುವಂಥ" ಕಾಲವನ್ನು, ಹೊಸ ಒಡಂಬಡಿಕೆಯ ಕಾಲವನ್ನು[21] ಸೂಚಿಸುವದಾಗಿದೆ. ಈ ಪದವು "ಹೊಸ ವ್ಯವಸ್ಥೆ" (NIV) ಎಂಬ ಅರ್ಥವನ್ನು ಸಹ ಕೊಡಬಹುದಾಗಿದೆ. ಅದು ಬಹಳ ಮಟ್ಟಿಗೆ ಯೇಸುವು ಪ್ರಸ್ತಾಪಿಸಿದ "ಹೊಸ ಸೃಷ್ಟಿ" ಸಮಯ ಎಂಬಂತೆ ತೋರುತ್ತದೆ (ಮತ್ತಾಯ 19:28). ಯೇಸು ಒಂದು ಬೇರೆಯಾದ ಪದವನ್ನು (παλιγγενεσία, *palingenesia*) ಬಳಸಿದನಾದರೂ, ಆತನು ಒಂದು ನಿಕಟವಾದ ಭಾವನೆಯನ್ನು ಮುಂದಿಡುತ್ತಿರಬಹುದಾಗಿದೆ. ಈ ನಂತರದ ಪದವು ಆತ್ಮೀಕ ಪುನರ್ಜನ್ಮ ಅಥವಾ ಹೊಸದಾಗಿ ಹುಟ್ಟುವಿಕೆಯನ್ನು ಸೂಚಿಸುವದಾಗಿದ್ದು ಅದು ಎಲ್ಲಾ ವ್ಯಕ್ತಿಗಳಿಗೆ ಅನ್ವಯವಾಗಬಲ್ಲದು, ಆದರೆ "ತಿದ್ದುಪಾಟು" ಬಹುಶಃ ಹೆಚ್ಚಾಗಿ ಯೆಹೂದಿ ಜೀವನ ರೀತಿಗೆ ಅನ್ವಯವಾಗಿರಬಹುದಾಗಿದ್ದು, ಅದನ್ನು ಇಬ್ರಿಯರಿಗೆ ಪತ್ರಿಕೆಯಲ್ಲಿ ಬಳಸುವದಕ್ಕೆ ಸೂಕ್ತಗೊಳಿಸಿತ್ತು. ಇದು ಕಾರ್ಯಗಳು "ಸರಿಪಡಿಸಲ್ಪಡುವ" ಸಮಯವಾಗಿತ್ತು; "ಸುವಾರ್ತೆಯ ಯುಗ" ಎಲ್ಲಾ ಆತ್ಮಗಳಿಗೆ ರಾಜ್ಯವನ್ನು ಪ್ರವೇಶಿಸುವದಕ್ಕಾಗಿ ದ್ವಾರವನ್ನು ತೆರೆಯುವ ತನಕ ಇದು ಸಂಭವಿಸುವದಕ್ಕಾಗಲಿಲ್ಲ.

## ಕ್ರಿಸ್ತನ ಮರಣ ಮತ್ತು ಪ್ರಾಯಶ್ಚಿತ್ತ (9:11-15)

ನಮ್ಮ ಮಹಾಯಾಜಕನಾಗಿ ಕ್ರಿಸ್ತನು ಕಾಣಿಸಿಕೊಳ್ಳುವಿಕೆಯು ಕ್ರೈಸ್ತ ನಂಬಿಕೆಯ ಒಂದು ಪ್ರಾಥಮಿಕವಾದ ಸತ್ಯವಾಗಿದೆ. ಹಳೆಯ ಒಡಂಬಡಿಕೆಯ ಮಹಾಯಾಜಕನು ಪವಿತ್ರಸ್ಥಳವನ್ನು ದಾಟಿ ಹೋದ ಹಾಗೆಯೇ, ಯೇಸು ನಿಜವಾದ ಪವಿತ್ರಸ್ಥಳದೊಳಗೆ ಪ್ರವೇಶ ಮಾಡಿದನು. ಆತನು ನಿಜವಾಗಿಯೂ ಅತಿ ಪರಿಶುದ್ಧ ಸ್ಥಳದಲ್ಲಿ ಕೂತುಕೊಳ್ಳುವ ತಂದೆಯ ಸಮಕ್ಷಮದಲ್ಲಿರುತ್ತಾನೆ. ನಮ್ಮ ಹೊಸ ಮಹಾಯಾಜಕನಿರುವಾಗ, ಹಳೆಯ ಛಾಯೆಯು ಇನ್ನು ಮೇಲೆ ಅವಶ್ಯಕವಾಗಿರುವದಿಲ್ಲ.

ಈ ವಾಕ್ಯಭಾಗವು, 9:11-15, "ಇಬ್ರಿಯರಿಗೆ ಪತ್ರಿಕೆಯ ಹೃದಯಭಾಗ"[22] ಎಂದು ಕರೆಯಲ್ಪಡುವದಕ್ಕೆ ಅಭ್ಯಂತರವಿರುವದಿಲ್ಲ. ಅದರ ಚಿನ್ನದ ನೂಲು, ಪ್ರಧಾನ ಚರ್ಚೆಯಾಂಶವು ಯೇಸುವಿನ ರಕ್ತವಾಗಿದೆ. ನಾವು ಅದನ್ನು ಅಧ್ಯಯನ ಮಾಡುವ ವೇಳೆ, ನಮ್ಮನ್ನು ಹೀಗೆ ಕೇಳಿಕೊಳ್ಳೋಣ, "ಯೇಸು ನಮಗ ತನ್ನ ರಕ್ತದ ಮೂಲಕ ಏನನ್ನು ಕೊಟ್ಟಿರುತ್ತಾನೆ?"

### ಕ್ರಿಸ್ತನ ಪ್ರಾಯಶ್ಚಿತ್ತ ಯಜ್ಞದ ಶ್ರೇಷ್ಠತೆ (9:11-14)

**[11]ಆದರೆ ಕ್ರಿಸ್ತನು ಈಗ ದೊರೆತಿರುವ ಮೇಲುಗಳನ್ನು ಕುರಿತು ಮಹಾಯಾಜಕನಾಗಿ ಬಂದು ಕೈಯಿಂದ ಕಟ್ಟಲ್ಪಡದಂಥ ಅಂದರೆ ಈ ಸೃಷ್ಟಿಗೆ ಸಂಬಂಧ ಪಡದಂಥ ಘನವಾಗಿಯೂ ಉತ್ಕೃಷ್ಟವಾಗಿಯೂ ಇರುವ ಗುಡಾರದಲ್ಲಿ ಸೇವೆಯನ್ನು ಮಾಡುವವನಾಗಿ [12]ಹೋತಗಳ ಮತ್ತು ಹೋರಿಕರಗಳ ರಕ್ತವನ್ನು ತೆಗೆದುಕೊಳ್ಳದೆ ಸ್ವಂತ ರಕ್ತವನ್ನೇ ತೆಗೆದುಕೊಂಡು ನಮಗೋಸ್ಕರ**

**ನಿತ್ಯವಿಮೋಚನೆಯನ್ನು ಸಂಪಾದಿಸಿಕೊಂಡವನಾಗಿ ಒಂದೇ ಸಾರಿ ದೇವರ ಸನ್ನಿಧಾನಕ್ಕೆ ಪ್ರವೇಶಿಸಿದನು. [13]ಹೋತಹೋರಿಗಳ ರಕ್ತವೂ ಹೊಲೆಯಾದವರ ಮೇಲೆ ಚೆಲ್ಲುವ ಕಡಸಿನ ಬೂದಿಯೂ ಶರೀರದ ಹೊಲೆಯನ್ನು ಹೋಗಲಾಡಿಸಿ ಪವಿತ್ರ ಮಾಡುವದಾದರೆ [14]ನಿತ್ಯಾತ್ಮನಿಂದ ತನ್ನನ್ನು ತಾನೇ ನಿರ್ದೋಷಿಯನ್ನಾಗಿ ದೇವರಿಗೆ ಸಮರ್ಪಿಸಿಕೊಂಡ ಕ್ರಿಸ್ತನ ರಕ್ತವು ಎಷ್ಟೋ ಹೆಚ್ಚಾಗಿ ನಮ್ಮನ್ನು ನಿರ್ಜೀವಕರ್ಮಗಳಿಂದ ಬಿಡಿಸಿ ನಾವು ಜೀವವುಳ್ಳ ದೇವರನ್ನು ಆರಾಧಿಸುವವರಾಗುವಂತೆ ನಮ್ಮ ಮನಸ್ಸನ್ನು ಶುದ್ಧೀಕರಿಸುವದಲ್ಲವೇ.**

**ವಚನಗಳು 11, 12.** ಮೊದಲನೆಯದಾಗಿ, ಕ್ರಿಸ್ತನ ಯಜ್ಞವು ನಿತ್ಯವಿಮೋಚನೆಯನ್ನು ತಂದಿತು ಎಂಬುದನ್ನು ನಾವು ನೋಡುತ್ತೇವೆ. ಈ ವಚನಗಳು ಒಂದು ವಾಕ್ಯವನ್ನು ರೂಪಿಸುತ್ತವೆ, ಆದರೆ ಆ ವಾಕ್ಯವು ಹೊಸ ಯೋಚನೆಗಳನ್ನು ಮತ್ತು ಗಹನವಾದ ವಿಚಾರಗಳನ್ನು ಒಳಗೊಂಡಿದ್ದು, ಅದನ್ನು ನಾವು ಓದಬೇಕೆಂಬುದನ್ನು ಅವಶ್ಯಕಗೊಳಿಸುತ್ತದೆ.

**ಮುಂದೆ ದೊರಕಬೇಕಾಗಿದ್ದ ಮೇಲುಗಳು** ಎಂಬುದು ಅಕ್ಷರಶಃ "ಅದರ ಜೊತೆಯಾಗಿ" (παραγίνομαι, *paraginomai*) ಎಂದಾಗಿರುತ್ತದೆ. ಹಲವಾರು ಆವೃತ್ತಿಗಳು "ಈಗ ದೊರೆತಿರುವ" ಎಂಬುದನ್ನು ಹೊಂದಿರುತ್ತವೆ, ಅದು ಮುಂಚಿನ ಎರಡು ಹಸ್ತಪ್ರತಿಗಳ ಮೇಲೆ ಆಧಾರವಾಗಿರುತ್ತದೆ. ಲೇಖಕನು "ಈಗಾಗಲೇ ಇಲ್ಲಿರುವ ಒಳ್ಳೇ ಕಾರ್ಯಗಳನ್ನು" ಸೂಚಿಸಿ ಹೇಳುತ್ತಿದ್ದಾನೆ.[23] ಕ್ರಿಸ್ತನು ಕೇವಲ ಭವಿಷ್ಯದಲ್ಲಿ ವಾಗ್ದಾನಗಳು ಮಾತ್ರವೇ ಅಲ್ಲ, ಈಗಾಗಲೇ ದೈವಿಕ ಶರತ್ತುಗಳಿಂದ ನೆರವೇರಿಸಲ್ಪಟ್ಟಿರುವ ಮೇಲಾದ ಸಂಗತಿಗಳ ಮಹಾಯಾಜಕನಾಗಿದ್ದಾನೆಂಬುದಾಗಿ B. F. Westcottನು ಒತ್ತಿ ಹೇಳಿದನು. ಆತನು ಮುಂದುವರೆದು ಹೀಗೆ ಹೇಳುತ್ತಾನೆ, "ಮನುಷ್ಯರು ತಮ್ಮ ಬಾಧ್ಯತೆಯನ್ನು ಪ್ರವೇಶಿಸಿಲ್ಲವಾದಾಗ್ಯೂ, ಅದು ಈಗಾಗಲೇ ಸಂಪಾದಿಸಲ್ಪಟ್ಟಿರುತ್ತದೆ."[24] ಕ್ರಿಸ್ತನ ಮೊದಲನೆಯ ಬರೋಣದ ಮೂಲಕ ಮೇಲಾದ ಕಾರ್ಯಗಳು ಬಂದವು, ಅಥವಾ ಆರಂಭಗೊಂಡವು. "ಮುಂದೆ ಬರಬೇಕಾದ ಮೇಲುಗಳು" ಎಂಬ ಪದಗುಚ್ಛವು "ತಿದ್ದುಪಾಟಿನ ಕಾಲ" ಕ್ಕೆ ಸಮಾನವಾಗಿರುತ್ತದೆ (ವ. 10), ಅದು ಪ್ರಯೋಜನಗಳನ್ನೊಳಗೊಂಡ ಕ್ರೈಸ್ತೀಯ ಯುಗವಾಗಿರುತ್ತದೆ.

**ಕ್ರಿಸ್ತನು . . . ಮಹಾಯಾಜಕನಾಗಿ ಬಂದ**ನು, ಅದು ಮೊದಲನೆಯ ಬರೋಣ ಎಂಬುದಕ್ಕಿಂತ ಹೆಚ್ಚಿನ ಅರ್ಥವನ್ನು ಕೊಡಬಹುದಾಗಿದೆ. ಆತನು ಕೇವಲ ಹುಟ್ಟುವದಕ್ಕೆ ವಿರುದ್ಧವಾಗಿ "ಕಾಣಿಸಿಕೊಂಡನು" ಅಥವಾ "ಬಂದನು," ಮತ್ತು ಆ ಮೂಲಕ ನಮ್ಮ ಮಹಾಯಾಜಕನಾಗುವ ಮಹಾನ್ ಉದ್ದೇಶದೊಂದಿಗೆ ಲೋಕವನ್ನು ಪ್ರವೇಶಿಸಿದನು. ಒಬ್ಬ "ಮಹಾಯಾಜಕನು ನಮಗಿದ್ದಾನೆ" ಆದ್ದರಿಂದ (8:1), ನಾವು ಸ್ವಾಭಾವಿಕವಾಗಿಯೇ ಆತನು ನಮಗೋಸ್ಕರ ಸಂಪಾದಿಸಿಕೊಂಡ ಆಶೀರ್ವಾದಗಳನ್ನು ಈಗಾಗಲೇ ಹೊಂದಿರುತ್ತೇವೆ. ಧರ್ಮಶಾಸ್ತ್ರವು ನಮ್ಮ ದಾರಿಯಲ್ಲಿಟ್ಟಿದ್ದ ಅಡಚಣೆಗಳನ್ನು, ಪರಿಪೂರ್ಣತೆ ಸಾಧಿಸಿಕೊಳ್ಳುವದನ್ನು ಅಸಾಧ್ಯಗೊಳಿಸಿದ ಅಗತ್ಯತೆಗಳನ್ನು ಆತನು ತೆಗೆದು ಹಾಕಿದನು. ಆತನು ಇವುಗಳನ್ನು ಇಲ್ಲದಂತಾಗ ಮಾಡಿ ಅವುಗಳನ್ನು ಶಿಲುಬೆಗೆ ಜಡಿದನು (ಕೊಲೊಸ್ಸೆ 2:14).

**ಘನವಾಗಿಯೂ ಉತ್ಕೃಷ್ಟವಾಗಿಯೂ ಇರುವ ಗುಡಾರ** ಯಾವದು? ಹಳೆಯ ಒಡಂಬಡಿಕೆಯು ತನ್ನ "ಲೋಕಸಂಬಂಧವಾದ ದೇವಾಲಯ" ಹೊಂದಿತ್ತು (ವ. 1), ಆದರೆ ಹೊಸ ಒಡಂಬಡಿಕೆಯದ್ದು ಪರಲೋಕದ ದೇವಾಲಯವಾಗಿದೆ. ಲೋಕಸಂಬಂಧವಾದ ಗುಡಾರವು ಪರಲೋಕದ ಒಂದು ಛಾಯೆ ಮಾತ್ರವೇ ಆಗಿತ್ತು. ಅತಿಪವಿತ್ರ ಸ್ಥಳವು ಪರಲೋಕವನ್ನು ಪ್ರತಿನಿಧಿಸುವದಾಗಿ ಮತ್ತು ಪವಿತ್ರ ಸ್ಥಳವು ಗುಡಾರವನ್ನು ಭೂಮಿಯ ಮೇಲೆ ದೇವರ ನಿವಾಸವನ್ನು, ಅಂದರೆ ಸಭೆಯಲ್ಲಿ ಅಡಕವಾಗಿರುವ ತನ್ನ ಜನರಲ್ಲಿ ವಾಸಿಸುದವನ್ನು

ಪ್ರತಿನಿಧಿಸುವದು ಎಂಬದಾಗಿಯೂ ಕಾಣುವದು ಉತ್ತಮವೆಂದು ತೋರುತ್ತದೆ (ನೋಡಿರಿ ಎಫೆಸ 2:19–22; 1 ಪೇತ್ರ 2:5). ಯೇಸು ತನ್ನ ರಾಜ್ಯವು "ಈ ಲೋಕದ್ದಲ್ಲ" ಎಂದು ಹೇಳಿದನು (ಯೋಹಾನ 18:36). ಆತನ ಭೂಲೋಕದ ದೇವಾಲಯದ ಸ್ಥಾನದಲ್ಲಿ **ಕೈಯಿಂದ ಕಟ್ಟಲ್ಪಡದಂಥ**ದ್ದು ಬಂದಿರುತ್ತದೆ.[25] ಕೈಯಿಂದ ಕಟ್ಟಿ ಯಾವ ಕಟ್ಟಡವೂ ಕರ್ತನ ವಾಸಕ್ಕೆ ಸರಿ ಹೊಂದಲಾರದು ಎಂಬುದನ್ನು ಸ್ತೇಫನ ಮತ್ತು ಪೌಲನು ಇಬ್ಬರೂ ಖಂಡಿತವಾಗಿ ಹೇಳುತ್ತಾರೆ (ಅಪೊಸ್ತಲರ ಕೃತ್ಯಗಳು 7:48; 17:24). ಸೊಲೊಮೋನನಿಗೆ ಸಹ ಈ ಸತ್ಯದ ಅರಿವು ಇತ್ತು (1 ಅರಸು 8:27). ಸರಿಯಾದ ಗುಣಸ್ವಭಾವವುಳ್ಳರಲ್ಲಿ ಮತ್ತು ಅವರೊಂದಿಗೆ ದೇವರ ವಾಸಿಸುತ್ತಾನೆ, ಅವರಲ್ಲಿ ಒಂದು ಮುರಿದ ಮತ್ತು ದೀನ ಮನಸ್ಸು ಅತ್ಯಂಥ ಮೂಲಭೂತ ಗುಣಗಳಾಗಿರುತ್ತವೆ (ಯೆಶಾಯ 57:15; ಕೀರ್ತನೆ 51:16, 17).

ಮಹಾಯಾಜಕನು **ರಕ್ತವನ್ನು** ತೆಗೆದುಕೊಂಡು **ದೇವರ ಸನ್ನಿಧಾನಕ್ಕೆ** (ಅತಿಪವಿತ್ರ ಸ್ಥಳಕ್ಕೆ) ಪ್ರವೇಶಿಸಿದ ಹಾಗೆಯೇ, ಯೇಸು **ಸ್ವಂತ ರಕ್ತವನ್ನೇ ತೆಗದುಕೊಂಡು ಪ್ರವೇಶಿಸಿದನು** (ಇಬ್ರಿಯ 9:12).[26] ಆತನು ಪ್ರಾಣಿಗಳ ಅಥವಾ ಬೇರೆ ಮನುಷ್ಯನ ರಕ್ತವನ್ನು ಅರ್ಪಿಸಲಿಲ್ಲ. ಸ್ವಂತ ರಕ್ತವನ್ನು ಅರ್ಪಿಸಿದವನಾಗಿ, ಕ್ರಿಸ್ತನು ನಮಗೋಸ್ಕರ ಪ್ರವೇಶಿಸುವದಕ್ಕೆ ಮತ್ತು ನಿತ್ಯ**ವಿಮೋಚನೆಯನ್ನು ಸಂಪಾದಿಸಿಕೊಂಡವನಾ**ದನು. "ವಿಮೋಚನೆ" (λύτρωσις, *lutrōsis*) ಎಂಬುದು ಗುಲಾಮರನ್ನು ಮತ್ತು ಬಂಧನದಲ್ಲಿರುವವರನ್ನು ಬಿಡಿಸುವದಕ್ಕೆ ಸಂದಾಯ ಮಾಡಿದ ಬಿಡುಗಡೆ ಬೆಲೆಯನ್ನು ಸೂಚಿಸುತ್ತದೆ. ಅದು ಆ ಬೆಲೆಯನ್ನು ತೆತ್ತ ಮೂಲಕವಾಗಿ ಬಿಡುಗಡೆಯನ್ನು ಸಂಪಾದಿಸಿಕೊಂಡದ್ದರಿಂದಾಗುವ ವಿಮೋಚನೆಯ ಯೋಚನೆಯನ್ನು ಒಳಗೊಂಡಿರುತ್ತದೆ (1 ಪೇತ್ರ 1:18–20). ನಮ್ಮ ವಿಮೋಚನೆಯು ಸ್ವಭಾವದಲ್ಲಿ ನಿತ್ಯವಾದದ್ದಾಗಿದೆ ಯಾಕೆಂದರೆ ದೇವರು "[ನಮ್ಮ] ಪಾಪಗಳನ್ನು [ತನ್ನ] ನೆನಪಿಗೆ ಎಂದಿಗೂ ತರುವದಿಲ್ಲ" (8:12). **ಹೋತಗಳ** ಮತ್ತು ಕರುಗಳ ರಕ್ತಕ್ಕೆ ಪಾಪವನ್ನು ನಿವಾರಿಸುವದು ಯಾವಾಗಲೂ ಅಸಾಧ್ಯವಾಗಿಯೇ ಇರುತ್ತದೆ (ನೋಡಿರಿ 10:4).

**ವಚನ 13.** ಎರಡನೆಯದಾಗಿ, ಯೇಸುವಿನ ರಕ್ತವು ಒಂದು ಶುದ್ಧವಾದ ಮನಸ್ಸಾಕ್ಷಿಯನ್ನು ಒದಗಿಸುತ್ತದೆ. ಪುನಃ 13 ಮತ್ತು 14 ವಚನಗಳಲ್ಲಿ, ಇಬ್ರಿಯರಿಗೆ ಪತ್ರಿಕೆಯಲ್ಲಿ ವೈಶಿಷ್ಟ್ಯವಾಗಿರುವ "ಕಡಿಮೆಯಾದದ್ದರಿಂದ ಶ್ರೇಷ್ಟವಾದದ್ದರ ಕಡೆಗೆ ಸಾಗುವ" ಕರ್ತವನ್ನು ನೋಡುತ್ತೇವೆ. ಕೆಂಪು **ಕಡಸಿನ ಬೂದಿಯು** (ನೋಡಿರಿ ಅರಣ್ಯಕಾಂಡ 19:1–10) ಆಚಾರಬದ್ಧವಾಗಿ ಶರೀರವನ್ನು ಶುದ್ಧ ಮಾಡುವದಾದರೆ, ದೇವಕುಮಾರನಾದ ಯೇಸುವಿನ ರಕ್ತವು ಇನ್ನು ಎಷ್ಟೋ ಅಧಿಕವಾಗಿ ನಿಜವಾಗಿಯೂ ಶುದ್ಧೀಕರಿಸಬಲ್ಲದು? ಒಂದು ಹೆಚ್ಚು ಆತ್ಮೀಕ ಧೋರಣೆಯಲ್ಲಿ ಯೋಚಿಸಿದ ಯೆಹೂದಿ ಆರಾಧಕರು ಅವರು ಧಾರ್ಮಿಕ ಆಚಾರದ ಸ್ನಾನಗಳು ಅವರನ್ನು ಆತ್ಮೀಕವಾಗಿ ಸಂಪೂರ್ಣಗೊಳಿಸಲಿಲ್ಲ ವೆಂಬುದನ್ನು ಗ್ರಹಿಸಿಕೊಂಡರು. ದೋಷಪರಿಹಾರಕ ದಿನದ ಸಮರ್ಪಣೆಯು ತಾತ್ಕಾಲಿಕ ಮತ್ತು ಬಾಹ್ಯ ಶುದ್ಧಪಡಿಸುವಿಕೆಯಾಗಿತ್ತಾದರೂ, ಅದರಲ್ಲಿ ಏನೋ ಒಂದು ಪ್ರಯೋಜನವಿತ್ತು. ಯಜ್ಞಗಳ ಫಲಿತವು ಏನಾಗಿತ್ತೆಂದರೆ ವ್ಯಕ್ತಿಯು ದೇವದರ್ಶನ ಗುಡಾರದಿಂದ/ದೇವಾಲಯದಿಂದ ತೆಗೆದು ಹಾಕಲ್ಪಡುತ್ತಿರಲಿಲ್ಲ; ಆತನು ದೇವರೊಂದಿಗೆ ತನ್ನ ಒಡಂಬಡಿಕೆಯ ಸಂಬಂಧವನ್ನು ಕಾಪಾಡಿಕೊಳ್ಳಬಹುದಿತ್ತು.

ಅಂಥ ಯಜ್ಞಗಳನ್ನು ಪದೇ ಪದೇ ಸಮರ್ಪಿಸಬೇಕಾಗಿತ್ತು. ಯಾವನಾದರೂ ಹೊಲೆಯಾಗುವ ಪ್ರತಿ ಸಾರಿಯೂ ಒಂದು ಪ್ರಾಣಿಯನ್ನು ಕೊಲ್ಲುವ ಅಗತ್ಯವಿರಲಿಲ್ಲ, ಯಾಕೆಂದರೆ ಯಾಜಕರು ನೀರಿನಿಂದ ಮಿಶ್ರಿತ ಬೂದಿಯನ್ನು ಸಿದ್ಧವಾಗಿಟ್ಟು ಕೊಂಡಿರುತ್ತಿದ್ದರು. ಅವರು ತಕ್ಷಣವೇ ಹಿಸ್ಸೋಪ್ ಕೊಂಬೆಯೊಂದನ್ನು ಮಿಶ್ರಣದಲ್ಲಿ ಅದ್ದಿ ಹೊಲೆಯಾದ ವ್ಯಕ್ತಿಯ ಮೇಲೆ

ಅದನ್ನು ಚಿಮುಕಿಸಬಹುದಿತ್ತು, ಹೀಗೆ ಆತನು ಸಭೆಯೊಂದಿಗೆ ಕೂಡಿ ಆರಾಧಿಸುವದಕ್ಕೆ ಸಾಧ್ಯವಾಗುತ್ತಿತ್ತು.[27] ಯಜ್ಞಮಾಡಿದ ರಕ್ತವು 21ನೇ ವಚನದಲ್ಲಿ ಪುನಃ **ಪ್ರೋಕ್ಷಿಸ**[ಲ್ಪಟ್ಟಿತು] (ῥαντίζω, *rhantizō*) ಎಂದು ಹೇಳಲಾಗಿರುತ್ತದೆ.[28] **ಶರೀರದ ಹೊಲೆಯನ್ನು ಹೊಗಲಾಡಿಸಿ ಪವಿತ್ರ ಮಾಡುವದಾದರೆ** ಎಂಬುದು ಧಾರ್ಮಿಕ ಆಚರಣೆಯ ಹೊಲೆಯನ್ನು ಪವಿತ್ರಗೊಳಿಸುವದಾಗಿತ್ತು ಹೊರತು ನೈತಿಕ ಹೊಲೆಯನ್ನು ಅಲ್ಲ. ಉದಾಹರಣೆಗೆ, ಹಳೆಯ ಒಡಂಬಡಿಕೆಯ ಅಡಿಯಲ್ಲಿ, ಮೃತ ದೇಹವನ್ನು ಮುಟ್ಟಿದ್ದ ಅಥವಾ ಶವವು ಇಡಲ್ಪಟ್ಟಿದ್ದ ಅದೇ ಕೋಣೆಯಲ್ಲಿದ್ದ ವ್ಯಕ್ತಿಯು ಪವಿತ್ರಗೊಳಿಸಲ್ಪಡಬೇಕಿತ್ತು. ಈ ದಿನ ಸಹ, ಯೆಹೂದಿ ಆಸ್ಪತ್ರೆಗಳು ಸಂಪ್ರದಾಯವಾದಿ ಅಥವಾ ಸಂಪ್ರದಾಯಪಾಲನೆ ಮಾಡುವ ಯೆಹೂದಿಗಳಿಗೆ ಸೂಚನೆಯು ದೊರಕಲಿ ಎಂದು ಹೊರಗಡೆಯಲ್ಲಿ ಇಂದು ಒಂದು ಸಾವು ಸಂಭವಿಸಿರುತ್ತದೆ ಎಂದು ಫಲಕವನ್ನು ಹಾಕಲಾಗುತ್ತದೆ, ಹೀಗೆ ಕಟ್ಟಡವನ್ನು ಪ್ರವೇಶಿಸಿ **ಹೊಲೆ**ಯಾಗದಿರುವಂತೆ ರಬ್ಬಿಗಳು ತಿಳಿದುಕೊಳ್ಳುವರು. ಹಳೆಯ ಒಡಂಬಡಿಕೆಯ ಕೇವಲ "ಸಂಸ್ಕಾರಿಕ ಶುದ್ಧತೆ" ಯ ಆಚಾರಗಳು "ನಿಮ್ಮ ಮನಸ್ಸನ್ನು ಶುದ್ಧೀಕರಿಸುವದಕ್ಕೆ" ಸಾಧ್ಯವಾಗಲಿಲ್ಲ (ವ. 14).

**ವಚನ 14.** ಈ ವಚನದಲ್ಲಿ ಮೂರು ಸತ್ಯಗಳು ಎದ್ದು ಕಾಣುತ್ತವೆ. ಮೊದಲನೆಯದಾಗಿ, ಯೇಸು **ತನ್ನನ್ನು ತಾನೇ ಸಮರ್ಪಿಸಿಕೊಂಡನು**. ಎರಡನೆಯದಾಗಿ, ಆತನು **ನಿರ್ದೋಷಿ**ಯಾಗಿದ್ದದರಿಂದ ಪರಿಪೂರ್ಣವಾದ ಯಜ್ಞವನ್ನು ಮಾಡಿದನು. ಮೂರನೆಯದಾಗಿ, ಆತನು ತನ್ನ ಸಮರ್ಪಣೆಯನ್ನು **ನಿತ್ಯಾತ್ಮನಿಂದ** ಮಾಡಿದನು. ಗ್ರೀಕ್ ಪದಗುಚ್ಛದಲ್ಲಿ ಗುಣವಾಚಿಯು ಇರುವದಿಲ್ಲ, ಆದ್ದರಿಂದ "ನಿತ್ಯಾತ್ಮನಿಂದ" ಎಂಬುದರ ಮುಂದೆ "the" ಎಂಬುದರ ಅವಶ್ಯಕತೆಯಿರುವದಿಲ್ಲ. ಹೇಗೂ, ವಸ್ತುತಃ ಎಲ್ಲಾ ತರ್ಜುಮೆಗಳು ಇದನ್ನು "ಪವಿತ್ರಾತ್ಮನು" ಅಥವಾ "ಕ್ರಿಸ್ತನ ನಿತ್ಯಾತ್ಮನ" ನ್ನು ಸೂಚಿಸಿ ಹೇಳಿರಬೇಕೆಂದು ಪರಿಗಣಿಸುತ್ತವೆ ಮತ್ತು ಆದಕಾರಣ ಗುಣವಾಚಿಯನ್ನು ಸೇರ್ಪಡೆಗೊಳಿಸುತ್ತವೆ ಹಾಗೂ "Spirit" ಎಂಬುದಕ್ಕೆ ದೊಡ್ಡ "S" ನ್ನು ಬಳಸುತ್ತವೆ. ಈ ಹೇಳಿಕೆಯ ಮೂಲಕ ಕಲ್ವಾರಿಯ ಮೇಲೆ ಮರಣಿಸುವದಕ್ಕೆ ಪವಿತ್ರಾತ್ಮನು ಯೇಸುವಿಗೆ ಸಹಾಯ ಮಾಡಿದನೆಂದು ಹೇಳಿಕೊಳ್ಳುವದು ಅಸಮರ್ಪಕವಾಗಿರುತ್ತದೆ. ಅದು ಸತ್ಯವೇ ಆಗಿದ್ದಲ್ಲಿ, ಶಿಲುಬೆಯ ಮೇಲೆ ಆತನು ಕೈಬಿಡಲ್ಪಟ್ಟ ಕುರಿತು ಹೇಳಿದ ಮಾತುಗಳು ಹಳಸಲು ಆಗುತ್ತವೆ (ಮತ್ತಾಯ 27:46). ಖಂಡಿತವಾಗಿಯೂ, ಕ್ರಿಸ್ತನು ಭೂಮಿಯ ಮೇಲೆ ಮಾಡಿದ್ದೆಲ್ಲವೂ ಪವಿತ್ರಾತ್ಮನ ಚಿತ್ತದೊಂದಿಗೆ ಸಾಮರಸ್ಯದಲ್ಲಿರುತ್ತವೆ, ಇಲ್ಲಿ ಆ ಅರ್ಥವು ಇರಬಹುದಾಗಿದೆ.

ಇದನ್ನು ಅರ್ಥೈಸಿಕೊಳ್ಳಲು ಅನುಸರಿಸುವ ಉತ್ತಮ ದಾರಿಯೆಂದರೆ ಆತ್ಮನ ಮಂಡಲದಲ್ಲಿ ಕ್ರಿಸ್ತನ ಸ್ವಂತ ದೈವಿಕ ಸ್ವಭಾವದ ಕುರಿತ ಒಂದು ಉಲ್ಲೇಖನವೆಂಬಂತೆ ಈ ಪದಗುಚ್ಛವನ್ನು ಅಂಗೀಕರಿಸಿಕೊಳ್ಳುವದಾಗಿದೆ.[29] ಶರೀರದಲ್ಲಿ ಯೇಸುವನ್ನು ಪಡೆಯುವದು ಪವಿತ್ರಾತ್ಮನಿಂದ ಪರಿಣಾಮಕರಗೊಳಿಸಲ್ಪಟ್ಟದ್ದಾಗಿತ್ತು (ಲೂಕ 1:35), ಮತ್ತು ತಾನು "ದೇವರ ಆತ್ಮನ" ಬಲದಿಂದ ದೆವ್ವಗಳನ್ನು ಬಿಡಿಸಿದನೆಂದು ಯೇಸು ಹೇಳುತ್ತಾನೆ (ಮತ್ತಾಯ 12:28). ಇನ್ನೊಂದು ಸಂಭಾವ್ಯವಾದ ಅರ್ಥವೆಂದರೆ ಆತನ ಯಜ್ಞವು ಶರೀರಸಂಬಂಧವಾದದ್ದು ಆಗಿರಲಿಲ್ಲ, ಆದರೆ ಸಾರಭೂತವಾಗಿ ಆತ್ಮೀಕವಾಗಿತ್ತು.[30] ಈ ವಚನವು ಯೆಶಾಯ 42:1ನ್ನು ಪರೋಕ್ಷವಾಗಿ ಸೂಚಿಸುತ್ತಿರಬಹುದಾಗಿದೆ: "ಇವನಲ್ಲಿ ನನ್ನ ಆತ್ಮವನ್ನು ಇರಿಸಿದ್ದೇನೆ."[31] ಇಲ್ಲಿ ವಿಷಯವು ಏನೆಂದರೆ ಕ್ರಿಸ್ತನು ತಾನೇನು ಮಾಡುತ್ತಿದ್ದೇನೆಂಬುದನ್ನು ಪೂರ್ಣವಾಗಿ ಅರ್ಥಮಾಡಿಕೊಂಡವನಾಗಿ ತನ್ನ ಯಜ್ಞವನ್ನು ಸಮರ್ಪಿಸಿದನು, ಅದನ್ನು ಯಾವ ಪ್ರಾಣಿಯೂ ಎಂದೂ ಮಾಡುವದಕ್ಕೆ ಸಾಧ್ಯವಾಗಿರಲಿಲ್ಲ. ಆತನು ತನ್ನನ್ನು ತಾನೇ ಸಮರ್ಪಿಸಿಕೊಂಡನು.

"ಬೇರೆ ಯಾವ ಬಲಿಯಾದವನಾಗಲಿ ಮತ್ತು ಖಂಡಿತವಾಗಿಯೂ ಯಾವ ಮಹಾಯಾಜಕನು ಸಹ ಆಗಲಿ ಇದನ್ನು ಮಾಡಿರಲಿಲ್ಲ. ಇದು ಸ್ವಯಂಪ್ರೇರಿತ ಮತ್ತು ಪೂರ್ವಚಿಂತನೆ ಮಾಡಿದ್ದು ಎರಡೂ ಆಗಿತ್ತು."[32] ಪ್ರಾಣಿಗಳು ತಮ್ಮ ದೇಹಗಳನ್ನು ಯಜ್ಞವಾಗಿ ಅರ್ಪಿಸುವದಕ್ಕೆ ತಮ್ಮನ್ನು ಸಮರ್ಪಿಸಿಕೊಳ್ಳಲು ತಮ್ಮಲ್ಲಿ ಯಾವ "ಆತ್ಮ"ವನ್ನೂ ಹೊಂದಿರುವದಿಲ್ಲ, ಆದರೆ ಯೇಸು ಹೊಂದಿದ್ದನು. ಆತನು ಮನಃಪೂರ್ವಕವಾಗಿ ಶಿಲುಬೆಗೆ ಹೋದನು.

ಆತನು "ನಿರ್ದೋಷಿ" ಯಾಗಿದ್ದನು, ಅಂದರೆ ಆತನು ತನ್ನ ಆತ್ಮದ ಮೇಲೆ ಯಾವ ಪಾಪ ಕಲೆಗಳನ್ನೂ ಹೊಂದಿರಲಿಲ್ಲ. "ನಿರ್ದೋಷಿ" ಎಂಬುದಕ್ಕಿರುವ ἄμωμος (*amōmos*) ಪದವು, LXXನಲ್ಲಿ ಒಂದು "ನಿಷ್ಕಳಂಕವಾದ" ಪ್ರಾಣಿಯೆಂಬುದಕ್ಕೆ ಬಳಸಲಾಗಿರುವ ಅದೇ ಪದವಾಗಿರುತ್ತದೆ (ಯಾಜಕಕಾಂಡ 1:3, 10; ನೋಡಿರಿ 1 ಪೇತ್ರ 1:19). **ಮನಸ್ಸನ್ನು ಶುದ್ಧೀಕರಿಸುವದು** ಎಂದರೆ ಆತ್ಮವನ್ನು ಪಾಪದ ಅಪರಾಧದಿಂದ ಶುದ್ಧಗೊಳಿಸುವದು ಎಂದರ್ಥವಾಗಿತ್ತು. ಕ್ರಿಸ್ತನ ರಕ್ತವು ಅದನ್ನು ಈ ದಿನದ ವರೆಗೆ ಸಹ ಸಾಧಿಸುತ್ತಲೇ ಇರುತ್ತದೆ (1 ಯೋಹಾನ 1:7).[33]

**ಕ್ರಿಸ್ತನ ರಕ್ತವು** ಇಬ್ರಿಯರಿಗೆ ಪತ್ರಿಕೆಯಲ್ಲಿ ಇಲ್ಲಿ ಮಾತ್ರವೇ ಬಳಸಲ್ಪಟ್ಟಿದೆ (ಆದರೂ "ಯೇಸುವಿನ ರಕ್ತ" ಎಂದು 10:19ರಲ್ಲಿ ಬಳಸಲ್ಪಟ್ಟಿರುತ್ತದೆ). ಪಾಪದ ಅಪರಾಧವು ನಿವಾರಿಸಲ್ಪಟ್ಟಾಗ ಮತ್ತು ಒಬ್ಬನು ತಾನು ಕ್ಷಮಿಸಲ್ಪಟ್ಟಿದ್ದೇನೆಂಬುದನ್ನು ಅರ್ಥಮಾಡಿಕೊಳ್ಳುವಾಗ, ಆತನು ಕ್ರಮೇಣದಲ್ಲಿ ಮರಣದ ಮೂಲಕ ದೇವರನ್ನು ಎದುರುಗೊಳ್ಳುವದಕ್ಕೆ ಇರುವ ಭಯವನ್ನು ಹೋಗಲಾಡಿಸಿಕೊಳ್ಳಬಲ್ಲನು. ನಿರಪರಾಧಿಗಳಿಗೆ ಭಯ ಪಡುವದಕ್ಕೆ ಏನಿರುತ್ತದೆ? ತಾನು ದೇವರ ಮುಂದೆ ಅಪರಾಧವನ್ನು ಹೊಂದಿಲ್ಲ ಎಂಬುದರ ಅರಿವನ್ನು ನಂಬಿಕೆಯ ಮೂಲಕ ಹೊಂದಿರುವಾಗ ಆತನು ಎಲ್ಲಾ ವಿನಾಶಗಳಲ್ಲಿಯೂ ಪ್ರಶಾಂತತೆಯಿಂದ ಇರಬಲ್ಲನು.

ಒಬ್ಬನು ಒಡಂಬಡಿಕೆಯ ಹೊರಗೆ ಮಾಡುವ ಎಲ್ಲಾ ಕ್ರಿಯೆಗಳು, ಮತ್ತು ಹೊಸ ಒಡಂಬಡಿಕೆಯ ಮೂಲಕವಾಗಿ ಒಬ್ಬನು ದೇವರ ಸಂಗಡ ಸಂಬಂಧವನ್ನು ಹೊಂದಿಕೊಳ್ಳುವದು ಸಹ ಸೇರಿದಂತೆ, ಎಲ್ಲವುಗಳು **ನಿರ್ಜೀವಕರ್ಮಗಳು** ಆಗಿರುತ್ತವೆ (6:1ರ ಮೇಲಿನ ಚರ್ಚೆಯನ್ನು ನೋಡಿರಿ). ನಮಗೆ ಕ್ರಿಸ್ತನಲ್ಲಿ ಲೆಕ್ಕಕ್ಕೆ ಎಣಿಸಲ್ಪಟ್ಟಿರುವ ನೀತಿಗೆ ಹೋಲಿಸಿದರೆ ಕ್ರಿಯೆಗಳಿಗೆ ಯಾವ ಮೌಲ್ಯವೂ ಇರುವದಿಲ್ಲ. ಈ "ನಿರ್ಜೀವ"ತೆಗೆ ವಿವಿಧ ಕಾರಣಗಳು ಕೊಡಲ್ಪಟ್ಟಿರುತ್ತವೆ. (1) ಪಾಪದಲ್ಲಿರುವ ಒಬ್ಬನು ದೇವರ ಸಂಬಂಧದಲ್ಲಿ ಸತ್ತವನಾಗಿದ್ದಾನೆ ಯಾಕೆಂದರೆ ಆತನು ನಾಶನದಲ್ಲಿರುತ್ತಾನೆ, ಕ್ರಿಸ್ತನ ಹೊರಗೆ ಇರುತ್ತಾನೆ. ಅಂಥ ವ್ಯಕ್ತಿಯು ದೇವರಿಗೆ ಅಂಗೀಕಾರವಾಗುವ "ಸಜೀವ" ಕ್ರಿಯೆಗಳನ್ನು ನಡಿಸುವದಕ್ಕೆ ಆಗುವದಿಲ್ಲ. (2) ಕ್ರೈಸ್ತೇತರ ವ್ಯಕ್ತಿಯಿಂದ ನಡಿಸಲ್ಪಡುವ ಕ್ರಿಯೆಗಳು ಯಾವದೇ "ಸಜೀವ ಬೆಳೆ"ಯನ್ನು ಉತ್ಪಾದಿಸುವದಕ್ಕೆ ಸಾಧ್ಯವಿಲ್ಲ, ಆದರೆ ಮರಣದಲ್ಲಿ ಅಂತ್ಯಗೊಳ್ಳುತ್ತವೆ. (3) ಕ್ರಿಯೆಗಳು ನ್ಯಾಯತೀರ್ಪಿಗೆ ಮತ್ತು ನಿತ್ಯವಾದ ಮರಣಕ್ಕೆ ಮಾತ್ರವೇ ನಡಿಸುತ್ತವೆ.[34] "ನಿರ್ಜೀವ ಕರ್ಮಗಳು" ಜೀವವನ್ನುಂಟು ಮಾಡುವದಕ್ಕೆ ಆಶಕ್ತವಾದ ಹಳೆಯ ಒಡಂಬಡಿಕೆಯ ಅಡಿಯಲ್ಲಿ ಮಾಡಿದ ಕ್ರಿಯೆಗಳನ್ನು ಸೂಚಿಸುತ್ತವೆ. ಅದೇ ಮಾತು 6:1ರಲ್ಲಿ ಸಿಕ್ಕುತ್ತದೆ, "ನಿರ್ಜೀವ" (νεκρός, *nekros*) ಮತ್ತು "ಕರ್ಮಗಳು" (ἔργον, *ergon*) ಎಂಬುದಕ್ಕೆ ಎರಡು ಸಾಮಾನ್ಯ ಪದಗಳನ್ನು ಬಳಸಲಾಗಿರುತ್ತದೆ.

ನಿರ್ಜೀವಕರ್ಮಗಳು ತೆಗೆದು ಹಾಕಲ್ಪಟ್ಟರೆ, ಒಬ್ಬನು **ಜೀವವುಳ್ಳ ದೇವರನ್ನು ಆರಾಧಿಸ**ಬಹುದು. ಒಬ್ಬ ವ್ಯಕ್ತಿಯು ಆ ತೆಗೆದು ಹಾಕಲ್ಪಡುವಿಕೆಯನ್ನು ಹೊಂದಿಕೊಳ್ಳುವ

ಹೊರತು ದೇವರನ್ನು ಸರಿಯಾಗಿ ಸೇವಿಸಲಾರನು ಅಥವಾ ಆರಾಧಿಸಲಾರನು. "ಸೇವಿಸು" ಎಂಬುದಕ್ಕಿರುವ ಪದವು λατρεύω (*latreuō*) ಎಂದಾಗಿದ್ದು ಅದು "ಯಾವಾಗಲೂ '*ಧಾರ್ಮಿಕ* ಕರ್ತವ್ಯಗಳನ್ನು ನೆರವೇರಿಸುವದು'" ಎಂಬರ್ಥವನ್ನು ಕೊಡುತ್ತದೆ.[35] ಆ ಕರ್ತವ್ಯಗಳು "ಆರಾಧನೆಯಯ ಕ್ರಿಯೆ"ಯನ್ನು ಒಳಗೊಂಡಿಲ್ಲದೆ ಇರಬಹುದಾಗಿದೆ.

## ಒಂದು ತ್ಯಾಗಕರವಾದ ಮರಣ ಮತ್ತು ನಿತ್ಯಬಾಧ್ಯತೆ (9:15)

**[15]ಮತ್ತು ಈ ಕಾರಣದಿಂದ ಆತನು ಒಂದು ಹೊಸ ಒಡಂಬಡಿಕೆಗೆ ಮಧ್ಯಸ್ಥನಾಗಿದ್ದಾನೆ. ಮೊದಲನೆಯ ಒಡಂಬಡಿಕೆಗೆ ಕಾಲದಲ್ಲಿ ನಡೆದ ಅಕ್ರಮಗಳ ಪರಿಹಾರಕ್ಕಾಗಿ ಆತನು ಮರಣವನ್ನು ಅನುಭವಿಸಿದ್ದರಿಂದ ದೇವರಿಂದ ಕರೆಯಿಸಿಕೊಂಡವರು ವಾಗ್ದಾನವಾಗಿದ್ದ ನಿತ್ಯಬಾಧ್ಯತೆಯನ್ನು ಹೊಂದುವದಕ್ಕೆ ಆತನ ಮೂಲಕ ಮಾರ್ಗವಾಯಿತು.**

**ವಚನ 15.** ಮೂರನೆಯದಾಗಿ, ಯೇಸು ತನ್ನ ರಕ್ತದಿಂದ ನಮಗೆ **ಒಂದು ಹೊಸ ಒಡಂಬಡಿಕೆಯನ್ನು** ಕೊಟ್ಟಿದ್ದಾನೆ. ಯೇಸು **ಹೊಸ ಒಡಂಬಡಿಕೆಯ** ಮಧ್ಯಸ್ಥನೆಂಬುದನ್ನು ನಾವು ಈಗಾಗಲೇ ನೋಡಿದ್ದೇವೆ (8:6), ಆದರೆ ಈ ಪಾತ್ರದ ತಳಹದಿಯು ಆತನ ತ್ಯಾಗಕರವಾದ **ಮರಣವೇ** ಎಂಬುದನ್ನು ಈಗ ನಾವು ಕಲಿಯಲಿದ್ದೇವೆ. **ಮೊದಲನೆಯ ಒಡಂಬಡಿಕೆಯ ಕಾಲದಲ್ಲಿ** ಮರಣಿಸಿದ ಪಶ್ಚಾತ್ತಾಪ ಪಟ್ಟವರಿಗೆ ಏನು ಸಂಭವಿಸಿತೆಂಬುದನ್ನು ತಿಳಿದುಕೊಳ್ಳಲು ನಾವು, ಮತ್ತು ನಮಗಿಂತ ಮುಂಚೆ ಅನೇಕರು ಕುತೂಹಲದಿಂದ ಇದ್ದೇವೆ. ಮೋಶೆ ಮತ್ತು ಎಲೀಯ ಮಹಿಮೆಗೆ ಸೇರಿದರೆ, ಯಾವನೋ ಒಬ್ಬ ಐಶ್ವರ್ಯವಂತನು ಯಾತನೆಯಲ್ಲಿ ಸೇರಿಸಲ್ಪಟ್ಟನೆಂಬುದನ್ನು ನಾವು ಬಲ್ಲೆವು (ಲೂಕ 9:28-36; 16:23-26). ನಂಬಿಗಸ್ತರಾದವರು ನಂಬಿಕೆ ಮತ್ತು ವಿಧೇಯತೆಯ ಮೂಲಕ ನೀತಿವಂತರೆಂದು ನಿರ್ಣಯಿಸಲ್ಪಟ್ಟರು, ಅದೇ ರೀತಿಯಲ್ಲಿ ನಾವು ಸಹ ಆಗಿದ್ದೇವೆ (ರೋಮಾ 4:3, ಆದಿಕಾಂಡ 15:6ರಿಂದ; ಯಾಕೋಬ 2:21-23). *ಹೇಗೆ* ಎಂಬ ಕುರಿತಾದ ಉತ್ತರವು ಈ ವಾಕ್ಯಭಾಗದಲ್ಲಿ ಸಿಕ್ಕುತ್ತದೆ: ಯೇಸು ಅವರ ಅಕ್ರಮಗಳ (ಪಾಪಗಳ), ಮಾತ್ರವಲ್ಲದೆ ನಮ್ಮ ಅಕ್ರಮಗಳ **ಪರಿಹಾರಕ್ಕಾಗಿ** ಮರಣವನ್ನು ಅನುಭವಿಸಿದನು. ನಮ್ಮ ಹಾಗೆಯೇ, ಅವರು ಧರ್ಮಶಾಸ್ತ್ರವನ್ನು ಮೀರಿದವರೆಲ್ಲರ ವಿರುದ್ಧ ಧರ್ಮಶಾಸ್ತ್ರವು ತೀರ್ಪು ಮಾಡಿದ ಅಪರಾಧಿತ್ವದಿಂದ ವಿಮೋಚಿಸಲ್ಪಟ್ಟಿದ್ದಾರೆ. ಶಿಲುಬೆಯು ಸರ್ವಕಾಲದ ಎಲ್ಲಾ ವಿಧೇಯತೆಯುಳ್ಳ ವಿಶ್ವಾಸಿಗಳಿಗೆ ರಕ್ಷಣೆಯನ್ನು ಒದಗಿಸುತ್ತದೆ. ಹಳೆಯ ಒಡಂಬಡಿಕೆಯಲ್ಲಿನ ದೇವರ ಹಿಂಬಾಲಕರ ಜೊತೆಯಲ್ಲಿ – ಉದಾಹರಣೆಗೆ, "ಅಬ್ರಹಾಮ, ಇಸಾಕ ಮತ್ತು ಯಾಕೋಬ" (ಮತ್ತಾಯ 8:10, 11) – ನಾವು ಪರಲೋಕ ರಾಜ್ಯದಲ್ಲಿ ಕೂತುಕೊಳ್ಳುವೆವು ಎಂದು ಯೇಸು ಹೇಳಿದನು. ಯೇಸು ನಮ್ಮ ಪಾಪಗಳಿಗಾಗಿ ಮತ್ತು ಮುಂಚಿನ ಪೀಳಿಗೆಯವರಿಗಾಗಿ ತನ್ನ ರಕ್ತವನ್ನು ಸುರಿಸಿದನೆಂಬ ಸತ್ಯವು ಮತ್ತಾಯ 26:28 ಮತ್ತು 1 ಕೊರಿಂಥ 11:25ರಲ್ಲಿ ಸರಳವಾಗಿ ವಿವರಿಸಲ್ಪಟ್ಟಿದೆ.

ಒಂದು ಅರ್ಥದಲ್ಲಿ, ದೇವರು ಸ್ವಲ್ಪ ಕಾಲ ಹಿಂದಿನ ಪಾಪಗಳನ್ನು ಸಹಿಸಿಕೊಂಡಿದ್ದನು (ರೋಮಾ 3:25, 26). ಹೇಗೂ, ಅವರ ಪರಲೋಕದ ಬಿಡಾರವು ಅಂತಿಮವಾಗಿ ಕ್ರಿಸ್ತನ ಮರಣದಿಂದ ದೊರಕಿಸಿಕೊಳ್ಳಲ್ಪಟ್ಟಿತು. ಕ್ರಿಸ್ತನು ಸ್ವಯಂಪ್ರೇರಿತವಾಗಿ ತನ್ನ ರಕ್ತವನ್ನು ಅರ್ಪಿಸಿದ ಆ ಮರಣವೇ "ಒಡಂಬಡಿಕೆ" ಯನ್ನು ದೃಢೀಕರಿಸಿತು (ಮತ್ತಾಯ 26:28). ಮರಣವನ್ನು ಒಂದು ಒಡಂಬಡಿಕೆಯೊಂದಿಗೆ ಸಂಬಂಧಗೊಳಿಸುವದು ಆರಂಭಿಕ ಸಮಯಗಳಿಂದಲೂ ಇದ್ದದ್ದಾಗಿತ್ತು. ಇದು ನಮಗೆ ಒಂದು ಹೊಸ ಒಡಂಬಡಿಕೆಯಾಗಿತ್ತು, ಆದರೆ

ದೇವರಿಗೆ ಹೊಸದಾಗಿರಲಿಲ್ಲ.[36] ಅಬ್ರಹಾಮನಿಗೆ ಮಾಡಿದ ವಾಗ್ದಾನವು – ಆತನಿಂದ ಮತ್ತು ನಮ್ಮಿಂದ – ಕ್ರಿಸ್ತನಲ್ಲಿ ಸ್ವೀಕರಿಸಿಕೊಳ್ಳಲ್ಪಟ್ಟಿದೆ.

"ಒಡಂಬಡಿಕೆ" ಎಂಬುದಕ್ಕಿರುವ ಪದ (διαθήκη, *diathēkē*), ಅಥವಾ "ಒಪ್ಪಂದ" ಎಂಬುದರ ಅರ್ಥನಿರೂಪಣೆ ಮಾಡತಕ್ಕದ್ದು. ಇದು ಇಬ್ರಿಯರಿಗೆ ಪತ್ರಿಕೆಯಲ್ಲಿ ಮುಖ್ಯ ಪದವಾಗಿದೆ, ಗ್ರೀಕ್ ವಾಕ್ಯದಲ್ಲಿ ಹದಿನೇಳು ಸಾರಿ ಕಾಣಿಸಿಕೊಳ್ಳುತ್ತದೆ. ಲೇಖಕನು ಮನಸ್ಸಿನಲ್ಲಿ ದೇವರು ಸಿನಾಯ್ ಪರ್ವತದ ಮೇಲೆ ಕೊಟ್ಟ ಒಡಂಬಡಿಕೆಯನ್ನು ಹೊಂದಿದ್ದನು (8:8–12; ವಿಮೋಚನಕಾಂಡ 24:6–8). "ಸ್ವತಃ ಈ ಪದವು *diatithēmi* ಎಂಬುದರಿಂದ ಬಂದಿರುತ್ತದೆ, *dia* ಎಂಬುದರ ಮೂಲ ಅರ್ಥವು 'ಎರಡು,' ಮತ್ತು *tithēmi* ಎಂಬುದು 'ಇಡು' ಎಂಬರ್ಥವಿರುತ್ತದೆ, ಈ ಪದದ ಒಟ್ಟು ಅರ್ಥವು ಅಕ್ಷರಶಃ 'ಇಬ್ಬರ ನಡುವೆ ಇಡು' ಎಂದಾಗಿರುತ್ತದೆ."[37] LXX ಅನುವಾದಕರು ಆದಿಕಾಂಡ 6:18ರಿಂದ ಆರಂಭಿಸಿ ಶಾಸ್ತ್ರಗಳುದ್ದಕ್ಕೂ ಇಬ್ರಿಯ ಭಾಷೆಯ בְּרִית (*b<sup>e</sup>rith*) ಎಂಬುದಕ್ಕೆ *diathēkē* ಎಂದು ಬಳಸಿದರು. ಈ ಪದವು ಸಾಮಾನ್ಯವಾಗಿ ಎರಡು ಪಕ್ಷಗಳ ನಡುವಿನ ಒಪ್ಪಂದ ಎಂಬ ಅರ್ಥವನ್ನು ಕೊಡುವದಾಗಿತ್ತು. ಅಂಥ ಒಪ್ಪಂದವು ಅನೇಕ ಸಾರಿ ಒಂದು ಪ್ರಾಣಿಯ ರಕ್ತದಿಂದ ದೃಢಪಡಿಸಲ್ಪಡುತ್ತಿತ್ತು.

ಸಾಮಾನ್ಯವಾಗಿ, ಒಂದು ಒಡಂಬಡಿಕೆಗೆ ಒಬ್ಬ "ಮಧ್ಯಸ್ಥನು" (μεσίτης, *mesitēs*), ಒಬ್ಬ "ನಡುವೆ ಹೋಗುವವನು" ಅವಶ್ಯಕವಾಗಿರುತ್ತಿತ್ತು. ಆ ಪದವು ಸರಿಹೊಂದುವಂಥದ್ದು ಯಾಕೆಂದರೆ ಯೇಸು ನಮ್ಮ ಏಕೈಕ "ಮಧ್ಯಸ್ಥನು" (1 ತಿಮೊಥೆ 2:5).[38] ಪ್ರೇರಿತ ಲೇಖಕನು *diathēkē* ಎಂಬುದನ್ನು ಒಂದು ಕಾರಣಕ್ಕಾಗಿ ಬಳಸಿರುವ ಸಾಧ್ಯತೆಯಿರುತ್ತದೆ. ಇಬ್ರಿಯ 9:15–17ರ ವಾಕ್ಯಭಾಗವು ಒಬ್ಬ ವ್ಯಕ್ತಿಯ ಕಡೇ "ಉಯಿಲು ಮತ್ತು ಒಡಂಬಡಿಕೆ" ಯನ್ನು ಮುಂದಿಡುತ್ತದೆ. ಈ ಪದವು ಇಬ್ರಿಯರಿಗೆ ಪತ್ರಿಕೆಯಲ್ಲೆಲ್ಲಾ "ಕರಾರು" ಎಂದು ಅನುವಾದಿಸಲ್ಪಡಬೇಕೆಂದು ಕೆಲವು ಬೇಡಿಕೊಳ್ಳುತ್ತಾರೆ; ಆದರೆ ಇನ್ನು ಕೆಲವರು ಎರಡೂ ಪದಗಳನ್ನು ಬಳಸುವರು: NEBಯು "ಹೊಸ ಕರಾರು, ಅಥವಾ ಒಡಂಬಡಿಕೆ" ಎಂದು ಹೊಂದಿದೆ, ಅದು ಅಕ್ಷರಶಃ ಅನುವಾದ ಅಲ್ಲವೇ ಅಲ್ಲ. ಹೊಸ ಒಡಂಬಡಿಕೆಯು ಆ ಪದವನ್ನು ಬಳಸುವದು "ಒಬ್ಬ ವ್ಯಕ್ತಿಯ ಉಯಿಲನ್ನು ಘೋಷಿಸುವದು ಆಗಿರುತ್ತದೆ, ಹೊರತು ಎರಡು ಪಕ್ಷಗಳ ನಡುವಿನ ಮುಚ್ಚಳಿಕೆ ಅಥವಾ ಒಪ್ಪಂದಂತಹ ಒಂದು ಕರಾರಿನ ಫಲಿತವಲ್ಲ."[39] ಉಯಿಲು ಬರೆಯುವವನು ಬಾಧ್ಯತೆಗಾರರು ಅನುಸರಿಸಬೇಕಾದ ನಿಯಮಗಳನ್ನು ಬರೆದಿಡುವ ಯೋಚನೆಯು ಇಲ್ಲಿರುತ್ತದೆ. ಬೇರೆ ಕಡೆಗಳಲ್ಲಿ ಅದರ ಅರ್ಥವು ಏನೇ ಇದ್ದರೂ ಸರಿಯೇ, "ಒಡಂಬಡಿಕೆ" ಎಂಬುದನ್ನು 9:16, 17ರಲ್ಲಿ ಒಪ್ಪಿಕೊಳ್ಳತಕ್ಕದ್ದು. ಯೇಸು ನಿಮಯ-ಮಾಡುವವನು ಮತ್ತು ನಿಯಮ-ದಾಯಕನು ಆಗಿದ್ದಾನಾದರೂ, ಆತನು ನಮ್ಮ ಪರವಾಗಿ ವಿಜ್ಞಾಪನೆ ಮಾಡುವವನಾಗಿ ಸಹ ಮುಂದುವರೆದಿರುತ್ತಾನೆ (ಇಬ್ರಿಯ 7:25). ಸನ್ನಿವೇಶದಲ್ಲಿ ಒಂದು ಕರಾರು ಮತ್ತು ಒಂದು ಒಡಂಬಡಿಕೆ ಎರಡೂ ಅರ್ಥಗಳು ಕಂಡು ಬರುವಂತೆ ತೋರುತ್ತದೆ. ಅತ್ಯಂಥ ಸೂಕ್ತವಾದ ಅಭಿಪ್ರಾಯವು ಬಹುಶಃ ಯಾವದೆಂದರೆ "ಲೇಖಕನು ಹೊಸ ಒಡಂಬಡಿಕೆಯನ್ನು ಮಾಡುವದರಲ್ಲಿ ಯೇಸುವಿನ ಮರಣದ ಅವಶ್ಯಕತೆಯನ್ನು ದೃಷ್ಟಾಂತ ಪಡಿಸುವದಕ್ಕೆ *diathēkē*ಯ ಎರಡೂ ಅರ್ಥವನ್ನು ಬಳಸುತ್ತಾನೆ."[40]

**ಕರೆಯಿಸಿಕೊಂಡವರು** ಸುವಾರ್ತೆಯ ಮೂಲಕ ಒದಗಿಸಲ್ಪಟ್ಟ ಕರೆಗೆ ಸ್ಪಂದನೆ ಮಾಡಿರುವವರು ಆಗಿರುತ್ತಾರೆ (2 ಥೆಸಲೋನಿಕ 2:14). ಇಂದು ಯಾವನೂ ಕರ್ತನಿಂದಾಗಲಿ ಅಥವಾ ಪವಿತ್ರಾತ್ಮನಿಂದಾಗಲಿ ನೇರವಾಗಿ ಅಥವಾ ವೈಯಕ್ತಿಕವಾಗಿ ಕರೆಯಲ್ಪಡುವದಿಲ್ಲ.

ಪೌಲನು ಅಂಥ ಕರೆಯನ್ನು ಸ್ವೀಕರಿಸಿದನು, ಆದರೆ ಅದು ಆತನನ್ನು ಅಪೊಸ್ತಲನಾಗಿ ಅರ್ಹಗೊಳಿಸುವದಕ್ಕಾಗಿ ಆಗಿತ್ತು, ಹೊರತು ಕೇವಲ ಆತನನ್ನು ವಿಧೇಯನಾಗುವಂತೆ ಕರೆಯುವದಕ್ಕಾಗಿ ಅಲ್ಲ. ದೇವರಿಗೆ ಇಪ್ಪತ್ತೊಂದನೆಯ ಶತಮಾನದ ಅಪೊಸ್ತಲರು ಬೇಕಾಗಿದ್ದರೆ, ಆತನು ಅವರನ್ನು ಈಗ ನೇರವಾಗಿ ಕರೆಯಬಲ್ಲನು; ಆದರೆ ಆಗ ಸಭೆಯು "ಅಪೊಸ್ತಲರು ಮತ್ತು ಪ್ರವಾದಿಗಳ ಅಸ್ತಿವಾರದ" ಮೇಲೆ ಕಟ್ಟಲ್ಪಡಲಾರದು (ಎಫೆಸ 2:20; ಒತ್ತಿ ಹೇಳಿದ್ದು ನನ್ನದು). ಇಂದು ಯಾವನಾದರೂ ದೈವಿಕವಾಗಿ ಕರೆಯಲ್ಪಡಬೇಕೆಂದು ಎದುರು ನೋಡುತ್ತಿರುವದಾದರೆ ಆತನು ಕಾಯುವದು ವ್ಯರ್ಥವೇ ಆಗಿರುತ್ತದೆ.

ಸುವಾರ್ತೆಯ ಕರೆಗೆ ಓಗೊಟ್ಟವರು **ನಿತ್ಯಬಾಧ್ಯತೆಯನ್ನು ಹೊಂದುವರು**. "ಬಾಧ್ಯತೆ" ಯು ಇಬ್ರಿಯರಿಗೆ ಪತ್ರಿಕೆಯಲ್ಲಿನ ಒಂದು ಸಾಮಾನ್ಯ ಭಾವನೆಯಾಗಿರುತ್ತದೆ.[41] ಗ್ರೀಕ್ ಪದವು κληρονομία (*klēronomia*) ಮತ್ತು ಇದು ಪೌಲನ ಬರಹಗಳಲ್ಲಿ ಅನೇಕ ಸಾರಿ ಕಾಣಿಸಿಕೊಳ್ಳುತ್ತದೆ.[42] ಅದು ಕ್ರಿಸ್ತನಲ್ಲಿ ನಮ್ಮದಾಗಿರುವ ಯಾವದೇ ನಿತ್ಯವಾದ ಆಶೀರ್ವಾದತೆಯನ್ನು ಒಳಗೊಂಡಿರುತ್ತದೆ. ಆತನು "ಎಲ್ಲಕ್ಕೂ ಬಾಧ್ಯನು" (1:2), ಮತ್ತು ರೋಮಾ 8:17 ರಲ್ಲಿನ "ಜೊತೆಯಲ್ಲಿ ಬಾಧ್ಯರು" ಎಂಬ ಪದಗುಚ್ಛದಲ್ಲಿ ಪರೋಕ್ಷವಾಗಿ ಸೂಚಿಸಲ್ಪಟ್ಟಿರುವ ಪ್ರಕಾರ, ನಾವು ಆತನಲ್ಲಿ ದೇವರಿಗೆ ಸಮಾನ ಬಾಧ್ಯಸ್ಥರು ಆಗಿರುತ್ತೇವೆ. ಯೆಹೂದಿ (ಇಬ್ರಿಯ) ಕ್ರೈಸ್ತರಿಗಾದರೋ, ಇದು ಅಬ್ರಹಾಮನಿಗೆ ಮಾಡಲ್ಪಟ್ಟ ವಾಗ್ದಾನದ ಒಂದ ಮಹತ್ವಪೂರ್ಣವಾದ ನೆರವೇರಿಕೆಯಾಗಿತ್ತು (ಇಬ್ರಿಯ 6:12, 15, 17). ಈ ಯೋಚನೆಯು ಗಲಾತ್ಯ 3:6–9, 17, 18, 26–29ರಲ್ಲಿನ ಯೋಚನೆಯಂತೆಯೇ ಇರುತ್ತದೆ. ಅದರಲ್ಲಿ "ಅಬ್ರಹಾಮನಿಗೆ ಆತನು ಮಾಡಿದ ವಾಗ್ದಾನಗಳೊಂದಿಗೆ ಆರಂಭವಾದ ದೇವರ ವಿಮೋಚನೆಯ ಯೋಜನೆಯ ಪೂರ್ಣ ವ್ಯಾಪ್ತಿಯನ್ನು ಒಳಗೊಂಡಿರುತ್ತದೆ."[43]

ಹಾಗಾದರೆ, ಕ್ರಿಸ್ತನು ತನ್ನ ರಕ್ತದಿಂದ ಏನು ತಂದಿರುತ್ತಾನೆ? ಆತನು ನಮಗೆ ನಿತ್ಯವಿಮೋಚನೆಯನ್ನು, ಒಂದು ಶುದ್ಧ ಮನಸ್ಸಾಕ್ಷಿಯನ್ನು, ಮತ್ತು ಒಂದು ಹೊಸ ಒಡಂಬಡಿಕೆಯನ್ನು ಕೊಟ್ಟಿದ್ದಾನೆ. ಈ ಮಹಾನ್ ರಕ್ಷಣೆಯನ್ನು ಹರ್ಷಿಸಿ ಸಂತೋಷದಿಂದಿರೋಣ.

## ಹೊಸ ಒಡಂಬಡಿಕೆಯ ಉಯಿಲುಗಾರನಾಗಿ ಕ್ರಿಸ್ತನು (9:16-22)

ಈ ವಾಕ್ಯಭಾಗದಲ್ಲಿ ನಾಲ್ಕು ದೈವಿಕ ಅವಶ್ಯಕತೆಗಳು ನಮ್ಮ ಮುಂದೆ ತರಲ್ಪಡುತ್ತವೆ. "ಅವಶ್ಯಕ" ಎಂಬುದಕ್ಕೆ ಗ್ರೀಕ್ ಪದವು ಈ ವಚನಗಳಲ್ಲಿ (ವಚನಗಳು 16, 23) ಎರಡು ಸಾರಿ ಬಳಸಲ್ಪಟ್ಟಿದೆ. ವರ್ಷಗಳ ಹಿಂದೆ, ಒಬ್ಬ ಪ್ರಸಂಗಿಯು "ದೇವರು ಏನು ಮಾಡಲು ಸಾಧ್ಯವಿಲ್ಲ" ಎಂಬ ಶಿರೋನಾಮೆಯಲ್ಲಿ ಸಂದೇಶವೊಂದನ್ನು ಹೊಂದಿದ್ದನು. ಆತನು ತಿಳಿಸಿದ ಒಂದು ಅಂಶವೆಂದರೆ "ಯೇಸುವಿನ ರಕ್ತವಿಲ್ಲದೆ ದೇವರು ನಮ್ಮನ್ನು ರಕ್ಷಿಸಲು ಸಾಧ್ಯವಿಲ್ಲ." ಆತನು ಇಬ್ರಿಯರಿಗೆ ಪತ್ರಿಕೆಯ ಈ ಚರ್ಚೆಯನ್ನು ಪರೋಕ್ಷವಾಗಿ ಸೂಚಿಸಿದನು. ಹೊಸ ಕರಾರು, ಅಥವಾ ಒಡಂಬಡಿಕೆಯು ಪರಿಣಾಮಕ್ಕೆ ಬರಬೇಕೆಂದರೆ ಕೆಲವೊಂದು ಶರತ್ತುಗಳು ಸಂಧಿಸಲ್ಪಡತಕ್ಕದ್ದು.

### ಒಂದು ಒಡಂಬಡಿಕೆಯು ಜಾರಿಯಲ್ಲಿರುವಾಗ (9:16, 17)

**16ಮರಣಶಾಸನವು ಇರುವಲ್ಲಿ ಅದನ್ನು ಬರೆಯಿಸಿದವನ ಮರಣವು ಪ್ರಸಿದ್ಧವಾಗಿರಬೇಕಷ್ಟೆ. 17ಮರಣಶಾಸನವು ಮರಣವಾದ ಮೇಲೆ ನಡೆಯುವದೇ ಹೊರತು ಬರೆಯಿಸಿದವನು ಜೀವದಿಂದಿರುವಾಗ ಎಂದಿಗೂ ಸಲ್ಲುವದಿಲ್ಲ.**

**ವಚನಗಳು 16, 17.** ಮೊದನೆಯದಾಗಿ, **ಮರಣಶಾಸನ** διαθήκη (*diathēkē*) ಅಥವಾ ಒಡಂಬಡಿಕೆಯೊಂದನ್ನು ಮಾಡಿದಾತನ, "ಉಯಿಲುಗಾರ"ನ (KJV) **ಮರಣವು ಪ್ರಸಿದ್ಧವಾಗಿರಬೇಕು** (ಅವಶ್ಯಕ) ಎಂಬುದನ್ನು ನೋಡುತ್ತೇವೆ. ಉಯಿಲು ಬರೆದಿರುವವನು ಮರಣಿಸಿದ ಬಳಿಕವಷ್ಟೇ ಉಯಿಲು ಜಾರಿಗೆ ಬರುತ್ತದೆಂಬುದನ್ನು ಲೋಕವು ಮನ್ನಣೆ ಮಾಡುತ್ತದೆ. ಒಂದು ಉಯಿಲು ಪರಿಣಾಮತೆಗೆ ಬರಬೇಕೆಂದರೆ ಉಯಿಲುಗಾರನ ಮರಣವಾಗಿರುವ ಪುರಾವೆ ಇರತಕ್ಕದ್ದು; "ಅವಶ್ಯಕ" ಎಂಬ ಪದವು (ἀνάγκη, *anagkē*) ಬಳಸಲ್ಪಟ್ಟಿದೆ. ಜೊತೆಯಲ್ಲಿ φέρω (*pherō*) ಎಂಬುದಿದ್ದು "ನಡಿಸು" ಎಂದರ್ಥವನ್ನು ಹೊಂದಿದೆ, ಆ ಪದದ ಅರ್ಥವು, ಪುರಾವೆಯು ಕೊಡಲ್ಪಡುವ ವಿಷಯದಲ್ಲಿರುವಂತೆ "ಫಲ ಕೊಡು" ಎಂಬ ಅರ್ಥವನ್ನು ಹೊಂದಿರುತ್ತದೆ.[44] ಉಪಲಬ್ಧವಿರುವ ಜಂಬು ಕಾಗದಗಳು ಒಬ್ಬ ಉಯಿಲುಗಾರನ ಮರಣವನ್ನು ಸಾಭಿತುಪಡಿಸುವ ಅವಶ್ಯಕತೆಯ ಕುರಿತಾದ ಪುರಾತನ ದಸ್ತಾವೇಜನ್ನು ಒದಗಿಸುತ್ತವೆ.

ಯೇಸು ಕ್ರಿಸ್ತನ ಹೊಸ ಒಡಂಬಡಿಕೆ, ಅಥವಾ ಕರಾರು ಅದರ ಸ್ಥಾಪಕನಾದ ಯೇಸುವಿನ ಮರಣದ ಬಳಿಕ ಜಾರಿಗೆ ಬಂದಿತು. ಆತನು ತನ್ನ ಸಭೆಯನ್ನು ಕಟ್ಟುತ್ತೇನೆಂದು ವಾಗ್ದಾನ ಮಾಡಿದನು (ಮತ್ತಾಯ 16:18) ಮತ್ತು ತನ್ನ ಒಡಂಬಡಿಕೆಯನ್ನು ಕಾರ್ಯರೂಪಕ್ಕೆ ತರುವ ವಾಗ್ದಾನವನ್ನು ಸಹ ಮಾಡಿದನು. ಆತನ ಮರಣದ ಫಲಿತವಾಗಿ ಎರಡೂ ವಾಗ್ದಾನಗಳು ನೆರವೇರಿಸಲ್ಪಟ್ಟವು (ನೋಡಿರಿ ಮತ್ತಾಯ 26:28). ಇಬ್ರಿಯರು ತಮ್ಮ ಮೆಸ್ಸೀಯನ ಮರಣದ ಅವಶ್ಯಕತೆಯನ್ನು ಗ್ರಹಿಸಿಕೊಳ್ಳಲು ಕಷ್ಟಪಟ್ಟರು, ಮತ್ತು ಈ "ವಿಘ್ನವನ್ನು ಜಯಿಸುವಂತೆ" ಅವರಿಗೆ ಈ ದೃಷ್ಟಾಂತವು ಕೊಡಲ್ಪಟ್ಟಿರಬಹುದಾಗಿದೆ (1 ಕೊರಿಂಥ 1:22, 23).

ಕ್ರಿಸ್ತನ ಒಡಂಬಡಿಕೆಯ ಮೇಲಿನ ಒತ್ತು ಪುನಃ ಹಳೆಯ ಒಡಂಬಡಿಕೆಯು ನೆರವೇರಿಸಲ್ಪಟ್ಟಿದೆ ಎಂಬುದರ ಮೇಲೆ ಎದ್ದ ಕಾಣುತ್ತದೆ. ಮೋಶೆಯ ಹಳೆಯ ಹಳೆಯ ಒಡಂಬಡಿಕೆಯನ್ನು ಅನುಸರಿಸುವ ಬದಲಾಗಿ, ನಾವು ವಿಧೇಯರಾಗಬೇಕಾಗಿರುವ ಹೊಸ ಒಡಂಬಡಿಕೆ ಇರುತ್ತದೆಂದು ನಾವು ಬಲ್ಲೆವು. ಯೇಸು ಪಸ್ಕ ಹಬ್ಬದ ವೇಳೆಯಲ್ಲಿ ಮರಣಿಸಿದನು; ಏಳು ವಾರಗಳ ನಂತರದಲ್ಲಿ, ಪಂಚಾಶತ್ತಮದ ದಿನದಂದು ಸಭೆಯು ಆರಂಭಗೊಂಡಿತು. ಯೇಸು ತನ್ನ ಯಜ್ಞವನ್ನು ಪೂರ್ಣಗೊಳಿಸುವದಕ್ಕೆ ಮುನ್ನ ಬೇರೆ ಯಾವ ಪ್ರತಿಷ್ಠಾಪಣೆಯೂ ರಕ್ಷಣೆಯನ್ನು ಕೊಡಲಿಲ್ಲ. ಅಂದರೆ, ಆತನ ಮರಣದ ಸಮಯಕ್ಕೆ ಮುಂಚೆ ಸಭೆಯು ಇರಲಿಲ್ಲ. ಹೇಗೂ, ಆತನ ರಕ್ತದ ಮೂಲಕ, ಆತನ ದೇಹವಾದ ಸಭೆಯು (ಎಫೆಸ 1:22, 23; 5:23-25) ಈಗ ಅಸ್ತಿತ್ವದಲ್ಲಿರುತ್ತದೆ. ಅದರ ಸದಸ್ಯರು ರಕ್ಷಣೆ ಹೊಂದಿರುತ್ತಾರೆ.

ಇಬ್ರಿಯರಿಗೆ ಪತ್ರಿಕೆಯ ಲೇಖಕನು ಒಂದು "ನಿತ್ಯಬಾಧ್ಯತೆಯ" ಬಗ್ಗೆ ಮಾತಾಡಿದನು (ವ. 15). ಒಂದು ಬಾಧ್ಯತೆಯು ಸಾಮಾನ್ಯವಾಗಿ ಒಂದು ಉಯಿಲು ಇಲ್ಲದೆ ಸ್ವೀಕರಿಸಿಕೊಳ್ಳಲಾಗದ್ದಾಗಿರುತ್ತದೆ. ಯಾರಾದರೂ ಯೇಸುವಿನ ಉಯಿಲಿನ ಶರತ್ತುಗಳನ್ನು ನೆರವೇರಿಸದೆಯೇ ರಕ್ಷಿಸಲ್ಪಡಬೇಕೆಂದು ಅಪೇಕ್ಷಿಸುವದಾದರೆ ಅವರು ಆತನ ಒಡಂಬಡಿಕೆಯ ಹೊರತಾದ ರೀತಿಯಲ್ಲಿ ರಕ್ಷಣೆಯನ್ನು ಹೊಂದಿಕೊಳ್ಳಲು ಪ್ರಯತ್ನಿಸುವವರಾಗುತ್ತಾರೆ. ಶಿಲುಬೆಯ ಮೇಲಿನ ಕಳ್ಳರಲ್ಲೊಬ್ಬನನ್ನು ಯೇಸುವು ತನ್ನ ಮರಣಕ್ಕೆ *ಮುಂಚೆ* ರಕ್ಷಿಸಿದನು. ಕ್ರಿಸ್ತನು ಜೀವಂತವಾಗಿದ್ದನಾದ್ದರಿಂದ, ಆತನು ಕಳ್ಳನಿಗೆ ಒಂದು ವಿಶೇಷವಾದ ರಕ್ಷಣೆಯನ್ನು ಕೊಡುವದಕ್ಕೆ ಶಕ್ತನಾದನು. ಕಳ್ಳನು ಯೇಸುವಿನ ಕಡೇ ಉಯಿಲು ಮತ್ತು ಒಡಂಬಡಿಕೆಗೆ ವಿಧೇಯನಾಗುವ ಮೂಲಕ ರಕ್ಷಿಸಲ್ಪಡಲಿಲ್ಲ. ಈ ತತ್ವವನ್ನು ಅರ್ಥಮಾಡಿಕೊಳ್ಳತಕ್ಕದ್ದು; ಆತನು ಪರಲೋಕವನ್ನು ಪ್ರವೇಶಿಸಿದ ರೀತಿಯನ್ನು ನಾವು ಪ್ರವೇಶಿಸುವ ರೀತಿಯೊಂದಿಗೆ

ಗೊಂದಲಕ್ಕೊಳಪಡಿಸಿಕೊಳ್ಳಲು ಸಾಧ್ಯವಿಲ್ಲ. ಇಂದು ರಕ್ಷಣೆ ಹೊಂದುವದಕ್ಕೆ ಏನು ಮಾಡಬೇಕೆಂದು ತಿಳುಕೊಳ್ಳಲು ಬಯಸುವವರಿಗೆ ಹೊಸ ಒಡಂಬಡಿಕೆಯು ಸ್ಪಷ್ಟವಾಗಿ ರಕ್ಷಣೆಯ ಯೋಜನೆಯನ್ನು ಮುಂದಿಡುತ್ತದೆ.

ಶಿಲುಬೆಯ ಮೇಲಿನ ತನ್ನ ಮರಣದ ಮುಂಚೆ, ಯೇಸು ಹೊಸ ಜನ್ಮದ ರೂಪಕವನ್ನು ಬಳಸಿದನು; ಆದರೆ ಆತನ ಮರಣದ ನಂತರದಲ್ಲಿ ಪರಿವರ್ತನೆಗೊಳ್ಳದ ಪಾಪಿಗಳಿಗೆ ಬೋಧಿಸುವ ವೇಳೆಯಲ್ಲಿ ಅಪೊಸ್ತಲಿಕ ಬೋಧಕರಲ್ಲಿ ಯಾರೂ ಆ ಪದವನ್ನು ಬಳಸಲಿಲ್ಲ. ಕರ್ತನ ಮರಣದ ಬಳಿಕ, ಕರ್ತನ ಉಯಿಲಿನಲ್ಲಿದ್ದ ಕ್ಷಮಾಪಣೆಯ ಶರತ್ತುಗಳನ್ನು ಸ್ಪಷ್ಟವಾದ ರೀತಿಯಲ್ಲಿ, ಯಾವದೇ ಸಾಂಕೇತಿಕ ಭಾಷೆಯನ್ನು ಬಳಸದೆ ತಿಳಿಯಪಡಿಸುವದು ಅವಶ್ಯಕವಾಗಿತ್ತು (ಮತ್ತಾಯ 28:18–20; ಮಾರ್ಕ 16:15, 16; ಲೂಕ 24:46, 47).

ಯೇಸು ನಮ್ಮ ರಕ್ಷಕನು, ಮತ್ತು ನಾವು ಆತನ ಚಿತ್ತವನ್ನು ಸಾರಬೇಕು. ನಾವು ಮಾಡಬೇಕಾದದ್ದೆಲ್ಲಾ ಏನೆಂದರೆ ಹೊಸ ಉಯಿಲಿನ ಶರತ್ತುಗಳು ಸಾರಿ ಅವುಗಳಿಗೆ ವಿಧೇಯರಾಗುವಂತೆ ಜನರನ್ನು ಬೇಡಿಕೊಳ್ಳುವದೇ ಆಗಿದೆ. ಈ "ಪ್ರಮಾಣಿತ ಮೃತಿ ಪತ್ರ"[45] ಕ್ಕೆ ವಿಧೇಯರಾಗುವದರ ಹೊರತಾಗಿ ರಕ್ಷಣೆಯು ಸಿಕ್ಕುವದೆಂಬ ಯಾವ ಭರವಸೆಯನ್ನೂ ನಾವು ಕೊಡುವದಕ್ಕಾಗುವದಿಲ್ಲ.

ನಮ್ಮ ಉಯಿಲುಗಾರನಾದ ಯೇಸುವಿನ ಉಯಿಲು ಏನಾಗಿರುತ್ತದೆ? ಆತನು ಮಾರ್ಕ 16:15, 16ರಲ್ಲಿ "ನಂಬಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವವನು ರಕ್ಷಣೆ ಹೊಂದುವನು" ಎಂಬದನ್ನು ಹೊರತು ಪಡಿಸಿ ಬೇರೆ ಇನ್ನೇನು ಆತನ ಅರ್ಥವಿರಬಹುದು? ಅದೇ ಆತನ ಉಯಿಲು! ಒಬ್ಬನು ಸುವಾರ್ತೆಗೆ ವಿಧೇಯನಾಗಲು ನಿರಾಕರಿಸಿದರೆ ಏನು ಮಾಡುವದು? ಆ ಪ್ರಶ್ನೆಯು 1 ಪೇತ್ರ 4:16, 17ರಲ್ಲಿ ಕೇಳಲ್ಪಟ್ಟಿದೆ, ಮತ್ತು 2 ಥೆಸಲೋನಿಕ 1:6–10ರಲ್ಲಿ ಉತ್ತರವು ಕೊಡಲ್ಪಟ್ಟಿದೆ: ಪರಿಣಾಮವು ನಿತ್ಯವಾದ ನಾಶನವಾಗಿರುತ್ತದೆ. ರಕ್ಷಣೆ ಹೊಂದಬೇಕಾದರೆ ನಂಬಿಕೆಯೊಂದೇ ಅಗತ್ಯವಿರುತ್ತದೆಂದು ಸಾರುವಂತೆ ಕ್ರಿಸ್ತನ ಉಯಿಲು ನಮಗೆ ಅನುಮತಿಯನ್ನು ಕೊಡುವದಿಲ್ಲ. ಹೊಸ ಒಡಂಬಡಿಕೆಯು ಒಬ್ಬ ದೀಕ್ಷಾಸ್ನಾನ ಮಾಡಿಸಿಕೊಳ್ಳದ ಶಿಷ್ಯನ ಬಗ್ಗೆ ಏನನ್ನೂ ತಿಳಿದಿದ್ದಾಗಿರುವದಿಲ್ಲ ಎಂದು F. F. Bruceನು ತೋರಿಸಿದ್ದು ಸರಿಯಾಗಯೇ ಇರುತ್ತದೆ.[46]

## ಹಳೆಯ ಒಸಂಬಡಿಕೆಯ ರಕ್ತ (9:18-20)

**18ಹೀಗಿರಲಾಗಿ ಮೊದಲನೆಯ ಒಡಂಬಡಿಕೆಯಾದರೂ ರಕ್ತವಿಲ್ಲದ ಸ್ಥಾಪಿತವಾಗಲಿಲ್ಲ. 19ಮೋಶೆಯು ದೇವರ ವಿಧಿಗಳನ್ನೆಲ್ಲಾ ಧರ್ಮಶಾಸ್ತ್ರದ ಪ್ರಕಾರ ಜನರೆಲ್ಲರಿಗೆ ಹೇಳಿದ ಮೇಲೆ ನೀರು, ಕೆಂಪು ಉಣ್ಣೆ. ಹಿಸ್ಸೋಪು ಕಡ್ಡಿ ಇವುಗಳೊಂದಿಗೆ ಹೋರಿಕರಗಳ ಮತ್ತು ಹೋತಗಳ ರಕ್ತವನ್ನು ತೆಗೆದುಕೊಂಡು – 20ಇದು ದೇವರು ನಿಮಗೋಸ್ಕರ ವಿಧಿಸಿದ ಒಡಂಬಡಿಕೆಯನ್ನು ಸ್ಥಿರಪಡಿಸಿದ ರಕ್ತವಾಗಿದೆ ಎಂದು ಹೇಳಿ ಅದನ್ನು ಗ್ರಂಥದ ಮೇಲೆಯೂ ಎಲ್ಲಾ ಜನರ ಮೇಲೆಯೂ ಪ್ರೋಕ್ಷಿಸಿದನು.**

**ವಚನಗಳು 18-20.** ಪ್ರಸ್ತಾಪಿಸಲಾಗಿರುವ ಇನ್ನೊಂದು ಅವಶ್ಯಕತೆಯು ಏನೆಂದರೆ ಹಳೆಯ ಒಡಂಬಡಿಕೆಯನ್ನು ಊರ್ಜಿತಗೊಳಿಸಲು ರಕ್ತವು ಬಳಸಲ್ಪಡುವದು: **ಹೀಗಿರಲಾಗಿ ಮೊದಲನೆಯ ಒಡಂಬಡಿಕೆಯು ರಕ್ತವಿಲ್ಲದೆ ಸ್ಥಾಪಿತವಾಗಲಿಲ್ಲ** (ವ. 18).

ರಕ್ತದಿಂದ "ಸ್ಥಾಪಿತವಾದ" ಆ "ಮೊದಲನೆಯ ಒಡಂಬಡಿಕೆ" ಯಾವದು?[47] ಅದು **ಮೋಶೆಯ** ಒಡಂಬಡಿಕೆ ಎಂಬುದು ಸ್ಪಷ್ಟವಾಗಿರುತ್ತದೆ. ವಿಮೋಚನಕಾಂಡ 24:1–8 ಈ ಸತ್ಯವನ್ನು

ರುಜುವಾತು ಪಡಿಸುತ್ತದೆ. ಮೋಶೆಯು ಸಮರ್ಪಿಸಲ್ಪಟ್ಟವುಗಳಿಂದ ಅರ್ಧ **ರಕ್ತವನ್ನು** ತೆಗೆದುಕೊಂಡು "ಆತನು ಸಿನಾಯ್ ಪರ್ವತದ ತಪ್ಪಲಲ್ಲಿ ನಿರ್ಮಿಸಿದ್ದ ಯಜ್ಞವೇದಿಗೆ ಅದನ್ನು ಎಸೆದನು."[48] ಯೇಸು, ಈ ಯೋಚನೆಯೊಂದಿಗೆ ಸಾಮರಸ್ಯವುಳ್ಳವನಾಗಿ, ತನ್ನ ರಕ್ತವು ಹೊಸ ಒಡಂಬಡಿಕೆಯನ್ನು ಸ್ಥಾಪಿಸುವದೆಂದು ಒತ್ತಿ ಹೇಳಿದನು (ಮತ್ತಾಯ 26:28).

ಯೇಸುವಿನ ಶಿಲುಬೆಯ ಮೇಲೆ ಸುರಿಸಲ್ಪಟ್ಟ ರಕ್ತವು ಆತನ ನಂಬಿಗಸ್ತ ಶಿಷ್ಯರು ಕರ್ತನ ಭೋಜನದಲ್ಲಿ ಆತನ ಮರಣವನ್ನು ನೆನಸಿಕೊಳ್ಳುವ ವೇಳೆಯಲ್ಲಿ ಪ್ರತಿ ವಾರವೂ ಸ್ಮರಿಸಲ್ಪಡುತ್ತದೆ (1 ಕೊರಿಂಥ 11:23-29).[49] ನಾವು ನಮ್ಮ ಪಾಪಗಳಿಗಾಗಿ ತೆತ್ತ ಬೆಲೆಯನ್ನು ನೆನಸಿಕೊಳ್ಳುತ್ತೇವೆ, ಅದು ಹೊಸ ಒಡಂಬಡಿಕೆಯನ್ನು ಒದಗಿಸಿದ ರಕ್ತವೇ ಆಗಿತ್ತು; ಮತ್ತು ಒಂದು ಆ ಒಡಂಬಡಿಕೆಯನ್ನು ಮಾಡಿದಾತನನ್ನು ಕಾಣುವ ದಿನವನ್ನು ಎದುರುನೋಡುತ್ತೇವೆ.

**ಒಡಂಬಡಿಕೆಯನ್ನು ಸ್ಥಿರಪಡಿಸುವ ರಕ್ತ** (ವ. 20) ಎಂಬುದು ವಿಮೋಚನಕಾಂಡ 24:3-8ರಿಂದ ಎರವಲು ಪಡೆದ ಪದಗುಚ್ಛವಾಗಿರುತ್ತದೆ. ವಿಮೋಚನಕಾಂಡವು **ಗ್ರಂಥದ ಮೇಲೆ** ರಕ್ತದಿಂದ **ಪ್ರೋಕ್ಷಿಸುವದನ್ನು** ಪ್ರಸ್ತಾಪಿಸುವದಿಲ್ಲ (ವ. 19), ಆದರೆ ಇದು ಆ ದಿನಗಳಲ್ಲಿದ್ದ ಸಾಮಾನ್ಯವಾದ ಆಚಾರವಾಗಿತ್ತು. ನಾವು ಬೈಬಲಿನ ಪ್ರತಿಯೊಂದು ಪುಟವೂ ಸಾಂಕೇತಿಕವಾಗಿ ರಕ್ತದಿಂದ ಪ್ರೋಕ್ಷಿಸಲ್ಪಟ್ಟದ್ದಾಗಿ ಯೋಚಿಸಬಹುದು. ಶಿಲುಬೆಯ ಕಥೆಯು ಹಳೆಯ ಒಡಂಬಡಿಕೆಯ ಹಲವಾರು ಪುಟಗಳಲ್ಲಿ ಪರೋಕ್ಷವಾಗಿ ಸೂಚಿತವಾಗಿರಬಹುದಾಗಿದೆ. ಪಾಪದ ಪ್ರತಿಯೊಂದು ದಂಡಿಸುವಿಕೆಯ ಹಿಂದೆ ಕರುಣೆಯು ಕಾಣುತ್ತದೆ, ಇತರರು ಅದೇ ಪಾಪ ಮಾಡುವದರಿಂದ ದೂರವಿದ್ದು ದಂಡನೆಯನ್ನು ತಪ್ಪಿಸಿಕೊಳ್ಳುವ ಒಂದು ಎಚ್ಚರಿಕೆಯಾಗಿಯೇ ಇದ್ದಿರಬಹುದು (ಉದಾಹರಣೆಗೆ, ಯಾಜಕಕಾಂಡ 10:1-11ರಲ್ಲಿರುವಂತೆ). ವಿಮೋಚನಕಾಂಡವು **ನೀರು**, **ಕೆಂಪು ಉಣ್ಣೆ**, ಮತ್ತು **ಹಿಸ್ಸೋಪು**ಗಳ ಬಗ್ಗೆ ಪ್ರಸ್ತಾಪಿಸುತ್ತದೆ (ವ. 19). ಈ ವ್ಯತ್ಯಾಸಗಳ ಮೂಲ ಯಾವದೆಂದು ನಮಗೆ ಗೊತ್ತಿರುವದಿಲ್ಲ; ಇಬ್ರಿಯರಿಗೆ ಪತ್ರಿಕೆಯ ಲೇಖಕನು ನಮಗೆ ಈಗ ಲಭ್ಯವೇ ಇರದಂಥ ಯಾವದೋ ಮೂಲದಿಂದ ಇದನ್ನು ತೆಗೆದುಕೊಂಡು ಬಳಸಿರಬಹುದು.[50] ಬೈಬಲಿನ ಪ್ರತಿಯೊಬ್ಬ ಲೇಖಕನು, ಪವಿತ್ರಾತ್ಮನ ಮಾರ್ಗದರ್ಶನದಡಿಯಲ್ಲಿ ತನ್ನ ಉದ್ದೇಶಕ್ಕೆ ಸಂಬಂಧ ಪಡುವದನ್ನು ಆರಿಸಿಕೊಂಡನು.

ಸಾಮಾನ್ಯವಾಗಿ ಉಣ್ಣೆಯನ್ನು ಪ್ರೋಕ್ಷಿಸಬೇಕಿದ್ದ ರಕ್ತವನ್ನು ಹಿಡಿದಿಟ್ಟುಕೊಳ್ಳುವದಕ್ಕೆ ಬಳಸಲಾಗುತ್ತಿತ್ತು. ಮೋಶೆಯ ಹೇಳಿಕೆಯು (ವ. 20ರಲ್ಲಿ ಸೂಚಿಸಲ್ಪಟ್ಟಿರುವ ಪ್ರಕಾರ) ಬಹಳ ಮಟ್ಟಿಗೆ ಮತ್ತಾಯ 26:28ರಲ್ಲಿನ ಯೇಸುವಿನ ಮಾತುಗಳಂತೆಯೇ ಇರುತ್ತವೆ. Josephusನು ಪ್ರತಿಷ್ಠಿಸಲ್ಪಡುವಿಕೆಯ ಕುರಿತು ಬರೆಯುವಾಗ ಇಬ್ರಿಯರಿಗೆ ಪತ್ರಿಕೆಯಲ್ಲಿ ಹೆಸರಿಸಲಾಗಿರುವ ಅದೇ ವಸ್ತುಗಳನ್ನು ನಿರ್ದಿಷ್ಟವಾಗಿ ಉಲ್ಲೇಖಿಸಿದನೆಂಬುದು ಗಮನಾರ್ಹವಾಗಿರುತ್ತದೆ.[51]

## ರಕ್ತವಿಲ್ಲದೆ ಯಾವದೂ ಪರಿಹಾರವಾಗುವದಿಲ್ಲ (9:21, 22)

**[21]ಇದಲ್ಲದೆ ಗುಡಾರದ ಮೇಲೆಯೂ ದೇವರ ಸೇವೆಗೆ ಬೇಕಾಗಿರುವ ಎಲ್ಲಾ ಉಪಕರಣಗಳ ಮೇಲೆಯೂ ಅದೇ ರೀತಿಯಾಗಿ ರಕ್ತವನ್ನು ಪ್ರೋಕ್ಷಿಸಿದನು. [22]ಧರ್ಮಶಾಸ್ತ್ರದ ಪ್ರಕಾರ ಸ್ವಲ್ಪ ಕಡಿಮೆ ಎಲ್ಲಾ ವಸ್ತುಗಳು ರಕ್ತದಿಂದಲೇ ಶುದ್ಧೀಕರಿಸಲ್ಪಡುವವು; ರಕ್ತಧಾರೆಯಿಲ್ಲದೆ ಪಾಪಪರಿಹಾರ ಉಂಟಾಗುವದಿಲ್ಲ.**

**ವಚನಗಳು 21, 22.** ಈ ವಾಕ್ಯಭಾಗದಲ್ಲಿ ನಾವು ನೋಡುವ ಮೂರನೆಯ ಅವಶ್ಯಕತೆಯೆಂದರೆ ಪಾಪಗಳ **ಪರಿಹಾರಕ್ಕಾಗಿ ರಕ್ತಧಾರೆ** ಮಾಡುವದು. ಯೇಸುವಿನ

ಮರಣವಿಲ್ಲದೆ ನಮ್ಮ ಪಾಪಗಳು ಕ್ಷಮಿಸಲ್ಪಟ್ಟಿರುವದಕ್ಕೆ ಸಾಧ್ಯವೇ ಇರಲಿಲ್ಲ.

**ಗುಡಾರದ** ಮೇಲೆ **ಪ್ರೋಕ್ಷಿಸು** [ವದು] 9:19, 20ರಲ್ಲಿ ಪ್ರಸ್ತಾಪಿಸಲಾಗಿರುವ ಘಟನೆಗಳಾದ ಸ್ವಲ್ಪ ಕಾಲದ ಬಳಿಕ ಸಂಭವಿಸಿತು, ಯಾಕೆಂದರೆ **ಧರ್ಮಶಾಸ್ತ್ರ**ವನ್ನು ಕೊಡುವ ವೇಳೆಯಲ್ಲಿ ಅದು ಅಸ್ತಿತ್ವದಲ್ಲಿರಲಿಲ್ಲ (ನೋಡಿರಿ ವಿಮೋಚನಕಾಂಡ 24:1-8; 40:9-11). ಮೋಶೆಯು ಆ ಸಮಯದಲ್ಲಿ **ಉಪಕರಣಗಳ** ಮೇಲೆ ಪ್ರೋಕ್ಷಿಸುವ ಬಗ್ಗೆ ಮೌನವಾಗಿದ್ದನು, ಆದರೆ ಅದು ನಡೆಯಲಿಲ್ಲವೆಂಬುದಕ್ಕೆ ಮೌನವು ಪುರಾವೆಯಾಗಿರುವದಿಲ್ಲ.[52] ಯೆಹೂದ್ಯರು ಅನೇಕ ಮೌಖಿಕ ಮತ್ತು ಲಿಖಿತ ಸಂಪ್ರದಾಯಗಳನ್ನು ಹೊಂದಿದ್ದರು, ಕೆಲವು ವಿಶ್ವಾಸರ್ಹವಾದವುಗಳಿದ್ದವು, ಅವುಗಳನ್ನು ಲೇಖಕನು ಬಳಸಿರಬಹುದಾಗಿದೆ. ದೋಷಪೂರಿತವಾಗಿ ಬರೆಯದಂತೆ ಆತನು ದೈವಿಕ ಸುರಕ್ಷಾಕವಚವನ್ನು ಹೊಂದಿದ್ದನು.

ಹಳೆಯ ಒಡಂಬಡಿಕೆಯ ಅಡಿಯಲ್ಲಿ ವಸ್ತುಗಳು ರಕ್ತವಿಲ್ಲದೆ **ಶುದ್ಧೀಕರಿಸಲ್ಪಡು**ವದಕ್ಕೆ ಸಾಧ್ಯವಿರಲಿಲ್ಲವಾದರೆ, ನಮ್ಮ ಪಾಪಗಳನ್ನು ಶುದ್ಧೀಕರಿಸುವದಕ್ಕಾಗಿ ನಮಗೆ ಖಂಡಿತವಾಗಿಯೂ ರಕ್ತವು ಇರತಕ್ಕದ್ದು. ಇಲ್ಲಿ ನಾವು "ಕಡಿಮೆಯಾದದ್ದರಿಂದ ಶ್ರೇಷ್ಠವಾದದ್ದರ ಕಡೆಗೆ ಸಾಗುವ" ಇನ್ನೊಂದು ತರ್ಕವನ್ನು ಕಾಣುತ್ತೇವೆ, ಅದು ಪ್ರಾಣಿಗಳ ರಕ್ತ ಮತ್ತು ಯೇಸುವಿನ ರಕ್ತ ನಡುವೆ ಹೋಲಿಕೆಯನ್ನು ಮಾಡುವದೇ. ಧರ್ಮಶಾಸ್ತ್ರದಡಿಯಲ್ಲಿ, ಹೆಚ್ಚು ಕೆಳದರ್ಜೆಯ ಯಜ್ಞವು ಪೂರ್ಣ ಪ್ರಮಾಣಕ್ಕಿಂತಲೂ ಕಡಿಮೆಯಾದ ರಕ್ಷಣೆಯನ್ನು ದೊರಕಿಸಿ ಕೊಡುವದಾಗಿತ್ತು; ಹೊಸ ಒಡಂಬಡಿಕೆಯ ಅಡಿಯಲ್ಲಿ, ಶಿಲುಬೆಗೇರಿಸಲ್ಪಟ್ಟ ಮಗನ ರಕ್ತವು ನಮ್ಮನ್ನು ಸಂಪೂರ್ಣವಾಗಿ ರಕ್ಷಿಸುವದು. ಕ್ರಿಸ್ತನ ರಕ್ತದ ಅತ್ಯಂಥ ದೊಡ್ಡ ಪ್ರಯೋಜನವೆಂದರೆ ನಮ್ಮನ್ನು ನಮ್ಮ ಪಾಪಗ*ಳಿಂದ* ಬಿಡಿಸಿ ರಕ್ಷಿಸುವದು, ಹೊರತು ಅವರಲ್ಲಿದ್ದ ಪಾಪದಿಂದಲ್ಲ. ಈ ಮಹಾನ್ ಯಜ್ಞವಿಲ್ಲದೆ ಒಂದೇ ಒಂದು ಆತ್ಮ ಸಹ ರಕ್ಷಿಸಲ್ಪಡಲಾರದು. ಈ ರಕ್ತದ ಶಕ್ತಿಯು ವಿಮೋಚನೆಗಾಗಿ ಯೇಸುವಿನ ಬಳಿಗೆ ಬರುವವರಿಗೆ ಮಾತ್ರವೇ ಲಭ್ಯವಿರುತ್ತದೆ (ಪ್ರಕಟನೆ 1:5); ನಾವು "ಬೆಳಕಿನಲ್ಲಿ ನಡೆಯುತ್ತಿರುವ" ವೇಳೆ ಅದು ನಿರಂತರವಾಗಿ ನಮ್ಮ ಶುದ್ಧ ಮಾಡುವದರಲ್ಲಿ ಕ್ರಿಯಾಶೀಲವಾಗಿರುತ್ತದೆ (1 ಯೋಹಾನ 1:7).

ಶಾಸ್ತ್ರವು 22ನೇ ವಚನದ ನಿಯಮಕ್ಕೆ – ರಕ್ತವು ಯಾವಾಗಲೂ ಶುದ್ಧೀಕರಿಸುವ ವಸ್ತು – ಒಂದನ್ನು ಹೊರತು ಪಡಿಸುತ್ತದೆ ಆದರೆ ಅದು ಸಾಮಾನ್ಯವಾಗಿರುವ ನಿಯಮವಾಗಿ ಉಳಿಯುತ್ತದೆ. ಯಾಜಕಕಾಂಡ 17:11ನೇ ವಚನವು ದೋಷಪರಿಹಾರ ಯಜ್ಞಕ್ಕಾಗಿ ಎರಡು ಬೆಳವಕ್ಕಿಗಳನ್ನು ತರುವದಕ್ಕಾಗದಷ್ಟು ಕಡು ಬಡವನಾಗಿರುವವನಿಗೆ ಸವಲತ್ತನ್ನು ಮಾಡಲಾಗಿತ್ತು: ಅದರ ಬದಲಾಗಿ ಆತನು ಮೂರು ಸೇರು ಗೋಧಿಹಿಟ್ಟನ್ನು ತರೇಕಾಗಿತ್ತು (ನೋಡಿರಿ ಯಾಜಕಕಾಂಡ 5:11-13). ಹೇಗೂ, ಪಾಪಗಳ ಪೂರ್ಣ ಪರಿಹಾರದ ವಿಷಯದಲ್ಲಿ, ಯಾವ ವಿನಾಯಿತಿಯೂ ಇರಲಿಲ್ಲವೆಂದು ತೋರುತ್ತದೆ – ಪಾಪದಿಂದ ರಕ್ಷಣೆಯನ್ನು ಸಾಧಿಸಿಕೊಳ್ಳಬೇಕೆಂದರೆ ರಕ್ತಧಾರೆಯು ಯಾವಾಗಲೂ ಅಗತ್ಯವಾಗಿತ್ತು. ಹಿಟ್ಟನ್ನು ಮಾತ್ರವೇ ಅರ್ಪಿಸುವದಕ್ಕೆ ಶಕ್ತರಾಗಿರುತ್ತಿದ್ದ ಬಡ ಯೆಹೂದಿಗಳಿಗೆ ಬೇರೆಯವರು ಮಾಡಿದ ರಕ್ತದ ಸಮರ್ಪಣೆಗಳು ಯಜ್ಞವಾಗಿ ಎಣಿಸಲ್ಪಡುತ್ತಿದ್ದವೋ? ವೇದಿಯ ಮೇಲೆ ಈಗಾಗಲೆ ಇರುತ್ತಿದ್ದ ರಕ್ತದ ಸಮರ್ಪಣೆಗಳ ಮೇಲೆ ಅವರ ಹಿಟ್ಟಿನ ಕಾಣಿಕೆಗಳನ್ನು ಇಡಲಾಗುತ್ತಿದ್ದ ಸಾಧ್ಯತೆಯು ಇರುತ್ತದೆ (ಯಾಜಕಕಾಂಡ 5:12).

ಒಂದು ಪ್ರಾಣಿಯ ಜೀವಧಾರವಾದ ರಕ್ತವನ್ನು ಸಮರ್ಪಿಸುವಿಕೆಯು ಪಾಪವು ಒಂದು ಗಂಭೀರವಾದ ವಿಚಾರವೆಂಬುದಾಗಿ ಇಸ್ರಾಯೇಲ್ಯರಿಗೆ ಮನವರಿಕೆ ಮಾಡಿ ಕೊಡುವದಕ್ಕಾಗಿಯೇ ಆಗಿತ್ತು. ಎರಡು ಹೋತಗಳನ್ನು ಬಳಸಬೇಕಾಗಿರುತ್ತಿತ್ತು: ಒಂದು

ಸಾಂಕೇತಿಕವಾಗಿ ಪಾಪವನ್ನು ಅರಣ್ಯದೊಳಕ್ಕೆ ಹೊತ್ತು ಕೊಂಡು ಹೋಗುವ "ಬಲಿಪಶು" ವಾಗಿ ಮಾಡುವದಕ್ಕಾಗಿ, ಮತ್ತು ಅತಿಪರಿಶುದ್ಧ ಸ್ಥಳದೊಳಕ್ಕೆ ರಕ್ತವನ್ನು ತಕ್ಕೊಂಡು ಹೋಗಿ ಕೃಪಾಸನದ ಮೇಳೆ ಪ್ರೋಕ್ಷಿಸುವಂತಾಗಲು ಮತ್ತೊಂದು ಹತ ಮಾಡುವದಕ್ಕಾಗಿ ಅವಶ್ಯವಾಗಿತ್ತು. "ಎರಡೂ ಕ್ರಿಯೆಗಳು ಪಾಪವನ್ನು ಶಾಶ್ವತವಾಗಿ ಹೊತ್ತುಕೊಂಡು ಹೋಗುವದು ಮತ್ತು ವಿಶ್ವಾಸಿಗಳನ್ನು ಅದರ ಹೊಲೆಯಿಂದ ಶುದ್ಧ ಮಾಡುವವುಗಳಾಗಿ ಯೇಸುವಿನ ಮರಣವನ್ನು ಚಿತ್ರಿಸುವದಕ್ಕೆ ಅಗತ್ಯವಾಗಿದ್ದವು."[53]

ರಕ್ತದ ನಿಯಮಕ್ಕೆ ಹೊರತಾದವುಗಳೆಂದು ಕೆಲವು ವ್ಯಾಖ್ಯಾನಕಾರರು ಅಭಿಪ್ರಾಯ ಪಟ್ಟಿರುವ ನೀರಿನಿಂದ ತೊಳಕೊಳ್ಳುವಿಕೆಗಳು (ವ. 19), ಯಾಜಕಕಾಂಡನ 15:13-27 ಮತ್ತು ಅರಣ್ಯಕಾಂಡ 19:7-19ರಲ್ಲಿ ಕಂಡು ಬರುವಂಥವುಗಳಾಗಿವೆ. ಇವುಗಳು "ಶುಚಿತ್ವಕ್ಕಾಗಿ ಮಾತ್ರವಲ್ಲದೆ ಸಂಸ್ಕಾರಿಕ ಸಹ ಆಗಿದ್ದವು" ಮತ್ತು "ರಕ್ತಧಾರೆಯಿಂದ ಪ್ರತ್ಯೇಕಿಸಲ್ಪಟ್ಟವುಗಳೆಂಬಂತೆ ತೋರುವದಿಲ್ಲ."[54]

## ದೇವರ ಸಮ್ಮುಖದಲ್ಲಿ ಕ್ರಿಸ್ತನ ಪ್ರವೇಶಿಸುವಿಕೆ (9:23-27)

### ಪರಲೋಕವಸ್ತುಗಳಿಗೆ ಪ್ರತಿರೂಪ (9:23, 24)

**[23]ಪರಲೋಕವಸ್ತುಗಳಿಗೆ ಪ್ರತಿರೂಪವಾಗಿರುವ ವಸ್ತುಗಳ ಶುದ್ಧೀಕರಣಕ್ಕಾಗಿ ಇಂಥಾ ಯಜ್ಞಗಳು ಅವಶ್ಯವಾದರೂ ಸಾಕ್ಷಾತ್ ಪರಲೋಕದವುಗಳಿಗೆ ಇವುಗಳಿಗಿಂತ ಉತ್ತಮವಾದ ಯಜ್ಞಗಳು ಬೇಕು. [24]ಯಾಕೆಂದರೆ ಕ್ರಿಸ್ತನು ನಿಜವಾದ ದೇವಾಲಯಕ್ಕೆ ಅನುರೂಪಮಾತ್ರವಾದದ್ದಾಗಿಯೂ ಕೈಯಿಂದ ಕಟ್ಟಿದ್ದಾಗಿಯೂ ಇರುವ ಆಲಯದಲ್ಲಿ ಪ್ರವೇಶಿಸದೆ ದೇವರ ಸಮ್ಮುಖದಲ್ಲಿ ನಮಗೋಸ್ಕರ ಈಗ ಕಾಣಿಸಿಕೊಳ್ಳುವದಕ್ಕೆ ಪರಲೋಕದಲ್ಲಿಯೇ ಪ್ರವೇಶಿಸಿದನು.**

**ವಚನ 23.** ನಾಲ್ಕನೆಯ ಅವಶ್ಯಕತೆಯು ಕೊಡಲ್ಪಟ್ಟಿದೆ: **ಪರಲೋಕವಸ್ತುಗಳಿಗೆ ಪ್ರತಿರೂಪವಾಗಿರುವ ವಸ್ತುಗಳ ಶುದ್ಧೀಕರಣಕ್ಕಾಗಿ ಇಂಥಾ ಯಜ್ಞಗಳು ಅವಶ್ಯಕವಾಗಿವೆ**.

ಮತ್ತೊಂದು ಸಾರಿ, ಕ್ರಿಸ್ತನು ಸ್ವತಃ ಪರಲೋಕ ಪ್ರವೇಶಿಸುವದನ್ನು ಕಾಣುತ್ತೇವೆ (ವ. 24). ನಾವು ಇನ್ನೂ "ಇಬ್ರಿಯರಿಗೆ ಪತ್ರಿಕೆಯ ಹೃದಯಭಾಗ" ದಲ್ಲಿಯೇ ಇದ್ದೇವೆ. "ಅವಶ್ಯಕವಾದರೂ" ಎಂಬ ಪದಗುಚ್ಛವು ಗುಡಾರದ ಉಪಕರಣಗಳನ್ನು ಶುಚಿಮಾಡದೆ ಅಥವಾ ಶುದ್ಧೀಕರಿಸದೆ ಅಂಗೀಕಾರವಾಗುವ ಆರಾಧನೆಯು ಇರುವದಕ್ಕೆ ಸಾಧ್ಯವಿರಲಿಲ್ಲ ಎಂಬುದನ್ನು ಸೂಚಿಸುತ್ತದೆ. ಸ್ಪಷ್ಟವಾಗಿರುವಂತೆ, ಒಡಂಬಡಿಕೆಯ ಪುಸ್ತಕವು ಸಹ ಅದರ ಮೇಲೆ ರಕ್ತವನ್ನು ಪ್ರೋಕ್ಷಿಸದೆ ಅದು ಶುದ್ಧವಾಗುತ್ತಿರಲಿಲ್ಲ. ಆದದರಿಂದ, ರಕ್ತವಿಲ್ಲದೆ "ಇಡೀ ದೇವಪ್ರಭುತ್ವವು" ಬೆಲೆಯಿಲ್ಲದ್ದಾಗಿರುತ್ತಿತ್ತು ಎಂಬ ಮುಕ್ತಾಯಕ್ಕೆ ಬರಬಹುದು.[55]

**ಪರಲೋಕದವುಗಳು** ಮತ್ತು **ಉತ್ತಮವಾದ ಯಜ್ಞಗಳು** ಯಾವವು? ಕ್ರಿಸ್ತನ ಒಂದು ಯಜ್ಞವೇ ಇಲ್ಲಿನ ಎಲ್ಲಾ ಅರ್ಥವು ಆಗಿರುವಂತೆ ತೋರುತ್ತದೆ, ಯಾಕೆಂದರೆ ಅದು ಹಳೆಯ ಒಡಂಬಡಿಕೆಗಳು ಕೇವಲ ಪೂರ್ವಛಾಯೆಯಾಗಿರಬಹುದಾಗಿದ್ದ ಯಜ್ಞಗಳ ಉದ್ದೇಶವನ್ನು ನೆರವೇರಿಸಿತು. ಭೂಲೋಕದ ಗುಡಾರದಲ್ಲಿನ ವಸ್ತುಗಳು ಪರಲೋಕದ ವಾಸ್ತವಿಕತೆಗಳ "ಪ್ರತಿರೂಪಗಳು" ಮಾತ್ರವೇ ಆಗಿದ್ದವು. 8:2-5ರಲ್ಲಿ, ಪವಿತ್ರ ಸ್ಥಳವು ಸಭೆಯ ಒಂದು ಮಾದರಿ ಆಗಿತ್ತೆಂದು ಮತ್ತು ಅತಿಪವಿತ್ರ ಸ್ಥಳವು ಪರಲೋಕಕ್ಕೆ ಒಂದು ಮಾದರಿ ಆಗಿತ್ತೆಂಬುದನ್ನು

ನೋಡಿದೆವು.

ನಿಶ್ಚಯವಾಗಿಯೂ, ದೇವರು ವಾಸಿಸುವ ಪರಲೋಕಕ್ಕೆ ಸ್ವತಃ ಶುದ್ಧೀಕರಿಸುವ ರಕ್ತವು ಅಗತ್ಯವಿರುವದಿಲ್ಲ. ಹೇಗೂ, ಈ "ವಸ್ತುಗಳು" ಭೂಮಿಯ ಮೇಲಿರುವ ಆತ್ಮೀಕ ಸಂಗತಿಗಳನ್ನೊಳಗೊಂಡಿರಬಹುದು — ವಿಶೇಷವಾಗಿ, ರಕ್ಷಣೆ ಹೊಂದಿರುವ ಪಾಪಿಗಳನ್ನೊಳಗೊಂಡ ಸಭೆ, ಅಥವಾ "ಪರಲೋಕರಾಜ್ಯ" ಆಗಿರಬಹುದು. ಈ ಜೀವನದಲ್ಲಿ ಪರಲೋಕರಾಜ್ಯವನ್ನು ಪ್ರವೇಶಿಸುವ ದೇವರ ಪ್ರತಿಯೊಬ್ಬ ಮಗುವು, ಇಲ್ಲಿ ಬಣ್ಣಿಸಲಾಗಿರುವ ವಿಧಾನದ ಮೂಲಕ ಶುದ್ಧೀಕರಿಸಲ್ಪಡತಕ್ಕದ್ದು ಎಂಬುದು ಸ್ಪಷ್ಟವಾಗಿರುತ್ತದೆ. ಹಾಗಾದರೆ, "ಪರಲೋಕದವುಗಳು" ಭೂಮಿಯ ಮೇಲಿನ ಸಭೆಯನ್ನು ಸೂಚಿಸುತ್ತವೆ, ಅದು ಪರಲೋಕರಾಜ್ಯವಾಗಿರುತ್ತದೆ.[56]

ಈ ವಿಷಯವನ್ನು ಅರ್ಥಮಾಡಿಕೊಳ್ಳದೆ, ಪರಲೋಕದಲ್ಲಿ ಸೈತಾನನ ಅಥವಾ ಇತರೆ ದುಷ್ಟ ದೇವದೂತರ ಇರುವಿಕೆಯು ಶುದ್ಧೀಕರಣವನ್ನು ಅವಶ್ಯಕಗೊಳಿಸಿತೆಂದು ಅಭಿಪ್ರಾಯ ಪಡುತ್ತಾರೆ (ನೋಡಿರಿ ಎಫೆಸ 6:12; ಪ್ರಕಟನೆ 12:3-9).[57] ಲೇಖಕನು ನಮಗೆ ಪೂರ್ಣವಾಗಿ ಗ್ರಹಿಸಿಕೊಳ್ಳಲಾಗದಂತಹ ಒಂದು ಸಾದೃಶ್ಯವನ್ನು ಬಳಸುತ್ತಿರಬಹುದಾಗಿದೆ. ಈ ಮುಂಚೆ ರಕ್ಷಣೆ ಹೊಂದಿದ್ದವರು — ಮತ್ತು ಅವರು ಆ ಕಾರಣದಿಂದ ಇಬ್ರಿಯರಿಗೆ ಪತ್ರಿಕೆಯು ಬರೆಯಲ್ಪಡುವ ವೇಳೆಯಲ್ಲಿ ಮಹಿಮೆಯಲ್ಲಿದ್ದರು — ಈಗಲೂ ಅವರ ಪಾಪಗಳನ್ನು ಪೂರ್ಣವಾಗಿ ಶುದ್ಧೀಕರಿಸಿಕೊಳ್ಳುವ ಅಗತ್ಯವಿತ್ತೆಂದು ಸ್ವಲ್ಪ ಜನರು ಭಾವಿಸುವವರಾಗಿದ್ದಾರೆ. ಹೇಗೂ, ಈ ಅಭಿಪ್ರಾಯವು ಸರಿಯಾಗಿರುವದಕ್ಕಾಗದು, ಯಾಕೆಂದರೆ ಅದು ಕ್ರಿಸ್ತನ ರಕ್ತದ ಸಂಪೂರ್ಣ ಪರಿಣಾಮಕಾರಿತ್ವವನ್ನು ಸಂಶಯಿಸುವದಾಗಿದೆ. ಶಿಲುಬೆಯ ಮೇಲೆ ತನ್ನ ರಕ್ತವನ್ನು ಅರ್ಪಿಸಿದವನಾಗಿ, ಯೇಸು ರಕ್ತವನ್ನು ತಕ್ಕೊಂಡು ಪರಲೋಕವನ್ನು ಪ್ರವೇಶಿಸಿದನು. ಅಲ್ಲಿ ಆತನು ಇಂದು ನಮ್ಮನ್ನು ಪ್ರತಿನಿಧಿಸುವವನಾಗಿ ಸೇವೆಯನ್ನು ಮುಂದುವರೆಸಿರುತ್ತಾನೆ.

**ವಚನ 24. ಈಗ** ಎಂಬ ಪದವು "ಹಳೆಯ, ವೈಶಿಷ್ಟ್ಯವಾದ ಮಿತವ್ಯಯದ ಒಡಂಬಡಿಕೆಗೆ ತದ್ವಿರುದ್ಧವಾಗಿ, ಹೊಸ ಒಡಂಬಡಿಕೆಯ ಯುಗದಲ್ಲಿ ಮೆಸ್ಸೀಯನ ಪ್ರಸ್ತುತಾಳದ ಸೇವೆಯ" ನ್ನು ಪ್ರಸ್ತಾಪಿಸುವದರಲ್ಲಿ ಮತ್ತು "ಪರಲೋಕದ ಅತಿಪವಿತ್ರ ಸ್ಥಳದಲ್ಲಿ ತನ್ನನ್ನು ನಿರಂತರವಾಗಿ ಪ್ರಸ್ತುತ ತೋರ್ಪಡಿಸಿಕೊಳ್ಳುವಿಕೆ"[58] ಯನ್ನು ಪ್ರಸ್ತಾಪಿಸುವದರಲ್ಲಿ ಒಂದು ವಿಶೇಷವಾದ ಮಹತ್ವಪೂರ್ಣತೆಯನ್ನು ಹೊಂದಿರಬಲ್ಲದು. **ಕ್ರಿಸ್ತನು** ನಮ್ಮ ಪ್ರಯೋಜನಾರ್ಥವಾಗಿ ಅಲ್ಲಿರುತ್ತಾನೆ. 7:25ನೇ ವಚನವು ಒತ್ತಿ ಹೇಳುವ ಪ್ರಕಾರ, ಆತನು ಈಗ ನಮ್ಮ ಪರವಾಗಿ ಕಾರ್ಯವನ್ನು ಮಾಡುತ್ತಿದ್ದಾನೆ.

"ಉತ್ತಮವಾದ ಯಜ್ಞಗಳು" (ವ. 23) ಎಂಬ ಮಾತುಗಳು ನಮಗೆ ಇಬ್ರಿಯರಿಗೆ ಪತ್ರಿಕೆಯಲ್ಲಿರುವ ಇತರ "ಉತ್ತಮಗಳನ್ನು" ಜ್ಞಾಪಿಸುತ್ತವೆ[59] - ಅವುಗಳಲ್ಲಿ ಒಂದು ಉತ್ತಮವಾದ ನಿರೀಕ್ಷೆ (7:19), ಒಂದು ಉತ್ತಮವಾದ ಒಡಂಬಡಿಕೆ (7:22; 8:6), ಮತ್ತು ಉತ್ತಮವಾದ ವಾಗ್ದಾನಗಳು (8:6). ಇವೆಲ್ಲವೂ ಒಂದು ಉತ್ತಮವಾದ ಯಜ್ಞದ ಮೂಲಕ ಆರಂಭಗೊಂಡವು (9:23). ಮತ್ತೊಂದು ಸಾರಿ, ಕ್ರಿಸ್ತನು ಮಾಡಿರುವದರ ಮತ್ತು ಅರ್ಪಿಸಿರುವದರ ಶ್ರೇಷ್ಠತೆಯು ಸ್ಪಷ್ಟವಾಗಿ ಕಂಡು ಬರುತ್ತದೆ.

24ನೇ ವಚನವು ಗುಡಾರವು ನಿಜವಾದ ವಸ್ತುವಿನ ಒಂದು **ಪ್ರತಿರೂಪ** (ἀντίτυπος, *antitupos*) ಮಾತ್ರವೇ ಆಗಿರುವದೆಂದು ನಮಗೆ ತಿಳಿಸುತ್ತದೆ; ಅದು ಪ್ರಮಾಣೀಕೃತವಾದದ್ದರ ಒಂದು "ಪ್ರಾತಿನಿಧ್ಯ" ಆಗಿರುತ್ತದೆ.[60] ಈ ಸಂದರ್ಭದಲ್ಲಿ **ಪರಲೋಕ**ವು ವಾಸ್ತವಿಕತ್ವವಾಗಿದ್ದು, ಗುಡಾರವು ಭೂಮಿಯ ಮೇಲೆ ಅದರ ಪ್ರತಿರೂಪವಾಗಿರುತ್ತದೆ.

ಗುಡಾರವು ಸಭೆಯ ಒಂದು ಮಾದರಿ ಸಹ ಆಗಿತ್ತು, ಅದು "ಪರಲೋಕದ ಯೆರೂಸಲೇಮ್," "ಉತ್ಸವಸಂಘ," ಮತ್ತು "ಚೊಚ್ಚಲಮಕ್ಕಳ ಸಭೆ," ಆಗಿದ್ದು "ಚೀಯೋನ ಪರ್ವತ"ದಿಂದ ಸಂಕೇತಿಸಲ್ಪಟ್ಟಿದೆ (12:22-24). ಈ ಎಲ್ಲಾ ಭಾವನೆಗಳು ಈಗ ಸಭೆಯಲ್ಲಿ ನೆರವೇರಿಸಲ್ಪಟ್ಟಿವೆ, ಅದರ ಸದಸ್ಯರು "ಪರಲೋಕದಲ್ಲಿ ಹೆಸರು ಬರೆಯಿಸಿಕೊಂಡವರು" ಯಾಕೆಂದರೆ ಅವರು "ಎಲ್ಲರಿಗೆ ನ್ಯಾಯಾಧಿಪತಿಯಾಗಿರುವ ದೇವರ ಬಳಿಗೆ" ಬಂದಿರುತ್ತಾರೆ.

ಗುಡಾರವು ಪ್ರತಿಬಿಂಬಿಸಿದ್ದಕ್ಕಿಂತಲೂ ಸಭೆಯು ಪರಲೋಕವನ್ನು ಅದರ ನಿಜವಾದ ರೂಪದಲ್ಲಿ ಎಷ್ಟೋ ಹೆಚ್ಚಾಗಿ ಪ್ರತಿಬಿಂಬಿಸುವದಾಗಿದೆ. ಇದು ಪರಲೋಕದ ನಿಜವಾದ ಮೊಗಸಾಲೆಯಾಗಿರುತ್ತದೆ, ಮತ್ತು ಅದರಲ್ಲಿ ನಂಬಿಗಸ್ತರಾಗಿರುವವರು ನಿತ್ಯವಾದ ವಾಸ್ತವಿಕತೆಯಲ್ಲಿ ನೆಲೆಸುವರು. ಈ ಎಲ್ಲಾ ಯೋಚನೆಗಳು ಒಂದಾಗಿ ಕಟ್ಟಲ್ಪಟ್ಟಿರುತ್ತವೆ; ಪರಲೋಕವು ದೇವರ ಯೋಜನೆ, ಮಾನವನಿಗಾಗಿ ಆತನ ಸಂಕಲ್ಪದ ಕೈಗೂಡಿಕೆ ಆಗಿರುತ್ತದೆ.

ದೇವರು ತನ್ನ ಜನರಿಗೆ ರಕ್ಷಣೆಯನ್ನು ಕೊಡಬೇಕೆಂದರೆ ದೈವಿಕ ಶರತ್ತುಗಳನ್ನು ನೆರವೇರಿಸಬೇಕಾಗಿತ್ತು. ಇವೆಲ್ಲವೂ ಕ್ರಿಸ್ತನ ರಕ್ತದಿಂದ ನೆರವೇರಿಸಲ್ಪಟ್ಟವು. ಆತನ ಮರಣವು ಹೊಸ ಒಡಂಬಡಿಕೆಯನ್ನು ಜಾರಿಗೆ ತಂದಿತು. ಆತನ ರಕ್ತವು ಪಾಪಗಳನ್ನು - ಕ್ರೈಸ್ತರ ಪಾಪಗಳನ್ನು ಮಾತ್ರವಲ್ಲ, ಆದರೆ ದೇವರ ಪರಿಪೂರ್ಣವಾದ ಯಜ್ಞವನ್ನು ಎದುರು ನೋಡುವವರಾಗಿ ವರ್ಷ ವರ್ಷವೆಲ್ಲಾ ಯಜ್ಞಗಳನ್ನು ಸಮರ್ಪಿಸಿದ ಹಳೆಯ ಒಡಂಬಡಿಕೆಯ ನಂಬಿಗಸ್ತರ ಪಾಪಗಳನ್ನು ಸಹ - ನಿವಾರಿಸಿತು. ಆತನ ರಕ್ತವು ಪರಲೋಕವಸ್ತುಗಳ "ಪ್ರತಿರೂಪಗಳನ್ನು" ಶುದ್ಧೀಕರಿಸುವಂತೆ ಅನುಮತಿಸುವ ಮೂಲಕ, ಕ್ರಿಸ್ತನು ನಮ್ಮನ್ನು ದೇವರ ನಿಜವಾದ ಸಮ್ಮುಖದಲ್ಲಿ ಪ್ರವೇಶಿಸುವಂತೆ ಅನುಮತಿಸಿರುತ್ತಾನೆ.

ಕ್ರೈಸ್ತತ್ವವು "ಒಂದೇ ಸಾರಿ" (10:10) ಆಗಿರುವಂಥದ್ದು ಎಂಬ ವೈಶಿಷ್ಟ ಗುಣವನ್ನು ಹೊಂದಿರುತ್ತದೆ. ಅದು ಯೆಹೂದಿಮತಕ್ಕಿಂತ ಶ್ರೇಷ್ಠವಾದದ್ದು ಯಾಕೆಂದರೆ ಇದು ಕಾಲದ ಅಂತಿಮ ಯುಗಕ್ಕಾಗಿ ಇರುವ ಅಂತಿಮ ಒಡಂಬಡಿಕೆಯಾಗಿರುತ್ತದೆ. ಇಬ್ರಿಯ 9:25-28ರಲ್ಲಿ "ಒಂದೇ ಸಾರಿ" ಎಂಬುದನ್ನು ಗಮನಿಸಿರಿ.

### ಯೇಸು ಒಂದೇ ಸಾರಿ ಸಮರ್ಪಿಸಿದನು (9:25, 26)

**[25]ಇದಲ್ಲದೆ ಮಹಾಯಾಜಕನು ವರುಷ ವರುಷವೂ ಅನ್ಯರಕ್ತವನ್ನು ತೆಗೆದುಕೊಂಡು ಪವಿತ್ರಾಲಯದಲ್ಲಿ ಪ್ರವೇಶಿಸುವ ಪ್ರಕಾರ ಆತನು ತನ್ನನ್ನು ಅನೇಕ ಸಾರಿ ಸಮರ್ಪಿಸುವದಕ್ಕೆ ಪರಲೋಕದಲ್ಲಿ ಪ್ರವೇಶಿಸಲಿಲ್ಲ. [26]ಹಾಗೆ ಸಮರ್ಪಿಸಬೇಕಾಗಿದ್ದ ಪಕ್ಷದಲ್ಲಿ ಆತನು ಲೋಕಾದಿಯಿಂದ ಎಷ್ಟೋ ಸಾರಿ ಬಾಧೆಪಟ್ಟು ಸಾಯಬೇಕಾಗಿತ್ತು. ಆದರೆ ಒಂದೇ ಸಾರಿ ಯುಗಗಳ ಸಮಾಪ್ತಿಯಲ್ಲೇ ಆತನು ಪಾಪನಿವಾರಣೆಮಾಡಬೇಕೆಂಬ ಉದ್ದೇಶದಿಂದ ತನ್ನನ್ನು ಯಜ್ಞಮಾಡಿಕೊಳ್ಳುವವನಾಗಿ ಪ್ರತ್ಯಕ್ಷನಾದನು.**

**ವಚನ 25.** ಹಳೆಯ ಮತ್ತು ಹೊಸ ಒಡಂಬಡಿಕೆಗಳ ಸಮರ್ಪಿಸುವಿಕೆಗಳಲ್ಲಿರುವ ಸಾಮ್ಯತೆಗಳನ್ನು ತೋರಿಸಿ ಕೊಟ್ಟವನಾಗಿ, ಇಬ್ರಿಯರಿಗೆ ಪತ್ರಿಕೆಯ ಲೇಖಕನು ವಿರುದ್ಧ ಹೋಲಿಕೆಗಳನ್ನು ಒತ್ತಿ ಹೇಳಲಾರಂಭಿಸಿದನು. 24ನೇ ವಚನವು ವ್ಯತ್ಯಾಸವನ್ನು ಪರಿಚಯಿಸುತ್ತದೆ. ಯೇಸು ಪರಲೋಕದೊಳಗೆ ಹೋಗಿದ್ದಾನೆ, ಅದೊಂದು ಕೇವಲ ಭೂಲೋಕದ **ಪವಿತ್ರಾಲಯವಷ್ಟೇ** ಆಗಿರುವದಿಲ್ಲ. ಆತನು ಪದೇ ಪದೇ **ತನ್ನನ್ನು ಸಮರ್ಪಿಸುವದಕ್ಕೆ** ಮತ್ತು ರಕ್ತವನ್ನು ಅರ್ಪಿಸುವದಕ್ಕೆ ಅಲ್ಲಿ ಪ್ರವೇಶಿಸಲಿಲ್ಲ ಯಾಕೆಂದರೆ ಆತನು ಅದನ್ನು ಸರ್ವಕಾಲಕ್ಕೂ

ಒಂದೇ ಸಾರಿ ಸಮರ್ಪಿಸಿದನು. ಹಳೆಯ ಒಡಂಬಡಿಕೆಯ **ಯಾಜಕನು ಅನ್ಯ** ರಕ್ತವನ್ನು ಅರ್ಪಿಸಿದನು; ಆತನು ಸ್ವಂತ ರಕ್ತವನ್ನು ಅರ್ಪಿಸಿದ್ದಲ್ಲಿ ಅದು "ಪಾಪ-ಕಲೆಯುಳ್ಳ" ದ್ದಾಗಿರುತ್ತಿತ್ತು. ಅಷ್ಟುಮಾತ್ರವಲ್ಲದೆ, ಹೊಸ ವ್ಯವಸ್ಥೆಯು ಹಳೆಯದ್ದರ ರೀತಿಯಲ್ಲಿದ್ದಿದ್ದರೆ, ಯೇಸು ಪ್ರತಿ ವರ್ಷವೂ ಶಿಲುಬೆಗೆ ಹೋಗಬೇಕಾಗುತ್ತಿತ್ತು. ಈ ಕಡೇ ವಿರುದ್ಧ ಹೋಲಿಕೆಯು 9ನೇ ಅಧ್ಯಾಯವನ್ನು ಮಿಕ್ಕ ಭಾಗದಲ್ಲಿ ಒತ್ತಿ ಹೇಳಲ್ಪಡುವ ವಿಷಯವಾಗಿರುತ್ತದೆ.

"ಪವಿತ್ರಾಲಯ" ಎಂಬುದಕ್ಕಿರುವ ಪದವು (ἅγιος, *hagios*) ಗ್ರೀಕ್ ವಾಕ್ಯದಲ್ಲಿ ಬಹುವಚನವಾಗಿರುತ್ತದೆ ಮತ್ತು ವಿವರಣಾತ್ಮಕವಾಗಿ "ಅತಿಪವಿತ್ರ ಸ್ಥಳ" ಅಥವಾ "ಅತಿ ಪರಿಶುದ್ಧವಾದ ಸ್ಥಳ" (NKJV; NIV)[61] ಎಂದು ಅನುವಾದಿಸಲ್ಪಟ್ಟಿರುತ್ತದೆ. ಅಲ್ಲದೆ, **ಪ್ರವೇಶಿಸುವ** ಎಂಬ ಪದವು ವರ್ತಮಾನಕಾಲರೂಪದಲ್ಲಿದ್ದು, ಇಬ್ರಿಯರಿಗೆ ಪತ್ರಿಕೆಯು ಬರೆಯಲ್ಪಡುತ್ತಿದ್ದ ವೇಳೆಯಲ್ಲಿ ಮಹಾಯಾಜಕನು ದೇವಾಲಯದಲ್ಲಿ ತನ್ನ ಕೆಲಸವನ್ನು ಮಾಡುತ್ತಲಿದ್ದನೆಂಬುದನ್ನು ಪರೋಕ್ಷವಾಗಿ ಸೂಚಿಸುತ್ತದೆ.[62]

25 ಮತ್ತು 26 ವಚನಗಳಲ್ಲಿ ಮೂರು ಸತ್ಯಗಳು ಸೂಚಿಸಲ್ಪಟ್ಟಿರುತ್ತವೆ: (1) ಕ್ರಿಸ್ತನು ನಿತ್ಯನಾದವನು, (2) ಆತನ ಯಜ್ಞಗಳು ಹಿಂದಿನ ಪೀಳಿಗೆಯವರ ಪಾಪಗಳನ್ನು ನೀಗಿಸುವದಕ್ಕೆ ಹಿಂದಕ್ಕೆ ಸಾಗುವದಾಗಿದೆ (9:15ರಲ್ಲಿ ನೋಡಿದ ಪ್ರಕಾರ), ಮತ್ತು (3) ಆತನು ತನ್ನ ಸ್ವಂತ ರಕ್ತವನ್ನು ಅರ್ಪಿಸಿದನು, ಹಳೆಯ ಒಡಂಬಡಿಕೆಯಲ್ಲಾದರೋ ಮಹಾಯಾಜಕನು ಪ್ರಾಣಿಗಳ ರಕ್ತವನ್ನು ಮಾತ್ರವೇ ಸಮರ್ಪಿಸುತ್ತಿದ್ದರು. ಕ್ರಿಸ್ತನು ಪದೇ ಪದೇ ಅರ್ಪಿಸಿಕೊಳ್ಳಬೇಕಾಗಿರುವದಿಲ್ಲ ಎಂಬುದು ಸ್ಪಷ್ಟವಾಗಿರುತ್ತದೆ. ಆತನು ಪರಲೋಕದಲ್ಲಿ ನಿರಂತರವಾಗಿ ತನ್ನನ್ನು ಸಮರ್ಪಿಸಿಕೊಳ್ಳುತ್ತಾನೆಂಬ ಉಪದೇಶವನ್ನು, ಮಾತ್ರವಲ್ಲದೆ ಪವಿತ್ರ ಪೂಜೆಯನ್ನು (Mass) ಆಚರಿಸುವದು ಭೂಮಿಯ ಮೇಲೆ ಆ ಯಜ್ಞವನ್ನು ಪುನರಭಿನಯಿಸುವದಾಗಿರುತ್ತದೆಂದು ಹೇಳಿಕೊಳ್ಳುವ ದೈವಶಾಸ್ತ್ರವನ್ನು ಸಹ ಈ ವಾಕ್ಯಭಾಗವು ತಪ್ಪೆಂದು ಖಂಡಿಸುತ್ತದೆ.[63] ಅಂಥ ಉಪದೇಶವು ಈ ಪತ್ರಿಕೆಗೆ ಸ್ಪಷ್ಟವಾದ ತದ್ವಿರುದ್ಧತೆಯಾಗುತ್ತದೆ. ಕ್ರಿಸ್ತನು ಭೂಮಿಯ ಮೇಲೆ ಒಂದೇ ಸಾರಿ ಸಮರ್ಪಿಸಲಾದ ಯಜ್ಞದ ಆಧಾರದಲ್ಲಿ ಕೃಪಾಸನದ ಮುಂದೆ ಶಾಶ್ವತವಾಗಿ ಕಾಣಿಸಿಕೊಳ್ಳುತ್ತಾನೆ.

9:24-28ರಲ್ಲಿ ಪ್ರಸ್ತಾಪಿಸಲಾಗಿರುವ ಯೇಸುವಿನ ಮೂರು "ಪ್ರವೇಶಿಸುವಿಕೆಗಳನ್ನು" ಗಮನಿಸಿರಿ. 24ನೇ ವಚನದಲ್ಲಿ ಆತನು ಪರಲೋಕವನ್ನು ಪ್ರವೇಶಿಸುವದು ಇರುತ್ತದೆ. 26ನೇ ವಚನವು "ಒಂದೇ ಸಾರಿ ಯುಗಗಳ ಸಮಾಪ್ತಿಯಲ್ಲೇ ಪ್ರತ್ಯಕ್ಷನಾದನು" ಎಂಬುದನ್ನು ತೋರಿಸುತ್ತದೆ, ಮತ್ತು 28ನೇ ವಚನವು ಆತನು "ಎರಡನೆಯ ಸಾರಿ ಕಾಣಿಸಿಕೊಳ್ಳುವನು" ಎಂದು ಹೇಳುತ್ತದೆ. ಪೌಲನು "ಆತನು ಶರೀರಧಾರಿಯಾಗಿ *ಪ್ರತ್ಯಕ್ಷನಾದನು* [ಕಾಣಿಸಿಕೊಂಡನು]" ಎಂದು ಹೇಳಿದಾಗ (1 ತಿಮೊಥೆ 3:16; ಒತ್ತಿ ಹೇಳಿದ್ದು ನನ್ನದು), ಆತನು 26ನೇ ವಚನದಲ್ಲಿ ಸಿಕ್ಕುವ ಅದೇ ಕ್ರಿಯಾಪದದ ರೂಪವೊಂದನ್ನು ಬಳಸಿದನು: φανερόω (*phaneroō*).

**ವಚನ 26. ಒಂದೇ ಸಾರಿ ಯುಗಗಳ ಸಮಾಪ್ತಿಯಲ್ಲೇ** ಎಂಬುದು "ಕಡೇ ದಿನಗಳ" ಆರಂಭಗೊಳ್ಳುವಿಕೆಯನ್ನು ಸೂಚಿಸತಕ್ಕದ್ದು (1:2). ಸ್ಪಷ್ಟವಾಗಿ, ನಾವು ಜೀವಿಸುವ ಈ ಯುಗವು ಲೋಕದ ಇತಿಹಾಸದಲ್ಲಿ ಕಡೇ ಕಾಲಾವಧಿಯಾಗಿರುತ್ತದೆ, ಯುಗಗಳ ಸರಣಿಯಲ್ಲಿ ಕೊನೆಯದ್ದಾಗಿದೆ.

ಈ ಪದಗುಚ್ಛವು ಗಲಾತ್ಯ 4:4ರಲ್ಲಿರುವ ಅದೇ ಕಲ್ಪನೆಯನ್ನು ಹೊಂದಿದೆ: "ಆದರೆ ಕಾಲವು ಪರಿಪೂರ್ಣವಾದಾಗ ದೇವರು ತನ್ನ ಮಗನನ್ನು ಕಳುಹಿಸಿಕೊಟ್ಟನು, . . . ಸ್ತ್ರೀಯಲ್ಲಿ

ಹುಟ್ಟಿದವನಾಗಿಯೂ ಧರ್ಮಶಾಸ್ತ್ರಾಧೀನನಾಗಿಯೂ ಬಂದನು." ಈ ಮಾತು "ಕಾಲದ ನೆರವೇರಿಕ" ಯನ್ನು ಸೂಚಿಸುತ್ತದೆಂದು ಅಭಿಪ್ರಾಯ ಪಡುತ್ತಾ ಕ್ರಿಸ್ತನು ಲೋಕವನ್ನು ಪ್ರವೇಶಿಸಿದಾಗ ಕಾಲವು "ಪೂರ್ಣವಾಗಿ ಬಂದಿತ್ತು" ಎಂದು Bruceನು ಜ್ಞಾಪಿಸಿಕೊಳ್ಳುತ್ತಾನೆ. ಆತನು ಹೇಳಿದ್ದೇನೆಂದರೆ, "ಕ್ರಿಸ್ತನು ನೆರವೇರಿಕೆಯ ಕಾಲದಲ್ಲಿ ಬರುವದು ಸಂಭವಿಸಿತು ಎಂಬದಲ್ಲ ಆದರೆ ಆತನ ಬರೋಣವು ಆ ಕಾಲವನ್ನು ನೆರವೇರಿಕೆಯ ಕಾಲವನ್ನಾಗಿ ಮಾಡಿತು."[64]

ಈ ವಿಧವಾದ ಪದಗುಚ್ಛವು ಕ್ರೈಸ್ತ ಯುಗದ ನಂತರ ಸಹಸ್ರವರ್ಷದ ಯುಗವು ಇರುತ್ತದೆಂಬುದಕ್ಕೆ ಅವಕಾಶವನ್ನು ಕೊಡುವದಿಲ್ಲ. ಕ್ರಿಸ್ತನ ಪ್ರಕಟನೆಯು ಮಾನವರಿಗಾಗಿ ದೇವರ ಅಂತಿಮ ಸಂದೇಶವನ್ನು ಸಾರಿತು, ಸರ್ವಕಾಲಕ್ಕೂ ಅಂತಿಮವಾದ **ಯಜ್ಞವನ್ನು** ಒದಗಿಸಿತು, ಮತ್ತು ಕಡೇ ಕಾಲ ಅಥವಾ "ದಿನಗಳನ್ನು" ಆರಂಭಗೊಳಿಸಿತು (1:2). ಕ್ರಿಸ್ತನು ಇತಿಹಾಸವನ್ನು ಆರಂಭದಲ್ಲಿ ಪ್ರವೇಶಿಸಿ ಪದೇ ಪದೇ ಬಾಧೆಯನ್ನನುಭವಿಸಲಿಲ್ಲ; ಬದಲಾಗಿ, ಆತನು "ಇತಿಹಾಸದ ಪರಾಕಾಷ್ಠೆಯ" (NEB) ವೇಳೆಯಲ್ಲಿ ಬಂದನು. ಶಿಲುಬೆಯು ಯಜ್ಞಕ್ಕಾಗಿರುವ ಎಲ್ಲಾ ಆತ್ಮೀಕ ಅವಶ್ಯಕತೆಗಳಿಗೆ ನಿಜವಾಗಿಯೂ ಅಂತ್ಯವಾಗಿತ್ತು, ಅಥವಾ ಪರಾಕಾಷ್ಠೆಯಾಗಿತ್ತು.

ಲೋಕವು ಇದನ್ನು ನಂಬಿದರೂ ಸರಿಯೇ ಅಥವಾ ನಂಬದಿದ್ದರೂ ಸರಿಯೇ, ಕ್ರಿಸ್ತನ ಬರೋಣವು ಆತನ ರಕ್ತದ ಸಮರ್ಪಣೆಯ ಕಾರಣದಿಂದ ಎಲ್ಲಾ ಇತಿಹಾಸದ ಕೇಂದ್ರಬಿಂದುವಾಗಿರುತ್ತದೆ. ಅಂತಿ, ಕೃತ್ಯವು ಯೇಸವು ಶಿಲುಬೆಯನ್ನೆರುವ ಮೂಲಕ ಆರಂಭಗೊಡಿತ್ತು. ಆತನು ವಿಮೋಚಿಸಲ್ಪಟ್ಟವರ ಪಾಪವನ್ನು **ನಿವಾರಣೆಮಾಡುವವನಾಗಿ** ಬಂದನು. "ನಿವಾರಣೆಮಾಡು" ಎಂಬದುಕ್ಕಿರುವ ಪದವು ಶಕ್ತಿಭರಿತವಾಗಿದ್ದು papyri ಯಲ್ಲಿ "ಅನುರ್ಜಿತಗೊಳಿಸು" ಅಥವಾ "ರದ್ದುಗೊಳಿಸು" ಎಂಬ ಅರ್ಥವನ್ನು ಹೊಂದಿದೆ.[65] ಯೇಸು ಶರೀರದಲ್ಲಿ ಸ್ವತಃ ತಂದೆಯ ಮಹಿಮೆಯನ್ನು ತೋರ್ಪಡಿಸುವವನಾಗಿ **ಪ್ರತ್ಯಕ್ಷನಾದನು** (ಯೋಹಾನ 1:14; 14:7-9; ಕೊಲೊಸ್ಸೆ 2:9).

ನಾವು ಕಡೇ ಯುಗದಲ್ಲಿದ್ದೇವೆಂದು ಭರವಸವನ್ನು ಹೊಂದಬಲ್ಲೆವಾದರೂ, ನಾವು ಕ್ರಿಸ್ತನ ಪುನರಾಗಮನಕ್ಕೆ ಬಾಕಿಯಿರುವ ಕಡೆಯ ಕೆಲವೇ ದಿನಗಳಲ್ಲಿದ್ದೇವೆಂಬುದನ್ನು ಶಾಸ್ತ್ರದಿಂದ ನಮಗೆ ಯಾವದೇ ಭರವಸವು ಕೊಡಲ್ಪಟ್ಟಿರುವದಿಲ್ಲ. ಭೂಮಿಯ ಮೇಲಿರುವ ವೇಳೆ ಯೇಸುವಿಗೆ ತನ್ನ ಪುನರಾಗಮನದ ಗಳಿಗೆಯು ಗೊತ್ತಿರಲಿಲ್ಲವಾದರೆ (ಮತ್ತಾಯ 24:36; ಮಾರ್ಕ 13:32), ನಮ್ಮ ದಿನಗಳಲ್ಲಿ ಆತನು ತಕ್ಷಣದಲ್ಲೇ ಬರುವನೆಂಬದನ್ನು ಸೂಚಿಸುವ "ಕಾಲದ ಸೂಚನೆಗಳು" ನಮಗೆ ಗೊತ್ತಿವೆಯೆಂದು ಹೇಳಿಕೊಳ್ಳುವದರಲ್ಲಿ ದೀನತೆಯಿಂದಿರತಕ್ಕದ್ದು.

ಯೇಸು "ಪ್ರತ್ಯಕ್ಷನಾದನು," ಅಂದರೆ ಜನರು ಆತನನ್ನು ನೋಡಿ ತಿಳಿದುಕೊಳ್ಳುವದಕ್ಕೆ ಸಾಧ್ಯವಾಗುವಂತೆ ಆತನು ಶರೀರಧಾರಿಯಾಗಿ ಬಂದನು ಎಂದಾಗಿರುತ್ತದೆ (ಯೋಹಾನ 1:14). ಲೋಕದ ಪಾಪಗಳಿಗಾಗಿ ಆತನು ಸಾಯಬೇಕಾಗಿದ್ದರೆ ಆತನು ಮರಣದ ಶಾರೀರಕವಾದ ದೇಹವನ್ನು ಹೊಂದಿರುವದು ಅಗತ್ಯವಾಗಿತ್ತು (ಇಬ್ರಿಯ 2:14-17; 10:5-7).

## ಒಂದೇ ಮರಣ, ನಂತರ ನ್ಯಾಯತೀರ್ಪು (9:27)

**27ಒಂದೇ ಸಾರಿ ಸಾಯುವದೂ ಆಮೇಲೆ ನ್ಯಾಯತೀರ್ಪೂ ಮನುಷ್ಯರಿಗೆ ಹೇಗೆ ನೇಮಕವಾಗಿದೆಯೋ ಹಾಗೆಯೇ ಕ್ರಿಸ್ತನು ಸಹ ಬಹುಜನರ ಪಾಪಗಳನ್ನು ಹೊತ್ತುಕೊಳ್ಳುವದಕ್ಕೋಸ್ಕರ ಒಂದೇ ಸಾರಿ ಸಮರ್ಪಿತನಾದನು, ಮತ್ತು ತನ್ನನ್ನು**

**ನಿರೀಕ್ಷಿಸಿಕೊಂಡಿರುವವರಿಗೆ ರಕ್ಷಣೆಯನ್ನುಂಟು ಮಾಡುವದಕ್ಕೋಸ್ಕರ ಪಾಪಸಂಬಂಧವಿಲ್ಲದವನಾಗಿ ಎರಡನೆಯ ಸಾರಿ ಕಾಣಿಸಿಕೊಳ್ಳುವನು.**

**ವಚನ 27. ನೇಮಕವಾಗಿದೆ** ಎಂಬ ಪದವು ἀπόκειμαι (*apokeimai*), ಇದು ಲೂಕ 19:20ರಲ್ಲಿ "ಕಟ್ಟಿ ಇಟ್ಟುಕೊಂಡೆನು" (NASB) ಅಥವಾ "ಕೂಡಿಟ್ಟುಕೊಂಡೆನು" (KJV) ಬಳಸಲ್ಪಟ್ಟಿರುವ ಅದೇ ಪದವಾಗಿರುತ್ತದೆ. ಅಲ್ಲದೆ ಅದು ಕೊಲೊಸ್ಸೆ 1:5ರಲ್ಲಿ "ಪರಲೋಕದಲ್ಲಿ ನಿಮಗೋಸ್ಕರ *ಸಿದ್ಧವಾಗಿರುವ* [*ಇಡಲ್ಪಟ್ಟಿರುವ*] ಮಹಾಪದವಿ" ಬಗ್ಗೆ ಮಾತಾಡುವದರಲ್ಲಿ ಸಹ ಬಳಸಲ್ಪಟ್ಟಿದೆ (ಒತ್ತಿ ಹೇಳಿದ್ದು ನನ್ನದು). ಎರಡನೆಯ ತಿಮೊಥೆ 4:8 ಹೀಗೆ ಹೇಳುತ್ತದೆ, "ನೀತಿವಂತರಿಗೆ ದೊರಕುವ ಜಯಮಾಲೆಯು ಮುಂದೆ ನನಗೆ ಸಿದ್ಧವಾಗಿದೆ." ಒಂದು ಮುನ್ನೇರ್ಪಾಡು ಮಾಡಲ್ಪಟ್ಟಿದೆ; ನಮಗೋಸ್ಕರ ಏನೋ ಒಂದು "ಕಾಯುತ್ತಿದೆ" ಅಥವಾ "ಸಿದ್ಧವಾಗಿ ಇಡಲ್ಪಟ್ಟಿದೆ," ಅದು ನರಕದ ದಂಡನೆಯಾಗಿರಬಹುದು ಅಥವಾ ಪರಲೋಕದ ಮಹಿಮೆಯೂ ಆಗಿರಬಹುದು.

ಇಲ್ಲಿ ಒತ್ತು ಯಾವದರ ಮೇಲಿರುತ್ತದೆಂದರೆ ಕ್ರಿಸ್ತನು ಒಂದೇ ಸಾರಿ ಸಮರ್ಪಿಸಿ ಇನ್ನೊಂದು ಸಾರಿ ಕಾಣಿಸಿಕೊಳ್ಳಲಿರುವ ಪ್ರಕಾರವೇ. ಮನುಷ್ಯನು **ಒಂದೇ ಸಾರಿ** ಹುಟ್ಟುತ್ತಾನೆ, ಒಂದೇ ಸಾರಿ ಜೀವಿಸುತ್ತಾನೆ, ಒಂದೇ ಸಾರಿ ಮರಣಿಸುತ್ತಾನೆ, ಮತ್ತು ಬಳಿಕ ಒಂದೇ ಸಾರಿ **ನ್ಯಾಯತೀರ್ಪು** ಎದುರಿಸುತ್ತಾನೆ ಎಂಬದೆ. ಲೇಖಕನು ಇಲ್ಲಿ ನಮ್ಮೆಲ್ಲರಿಗೂ ಸಾಯುವದಕ್ಕೆ ದೇವರು ಒಂದು ಗಳಿಗೆಯನ್ನು ನಿಗದಿ ಪಡಿಸಿದ್ದಾನೆಂಬ ಅಭಿಪ್ರಾಯ ವ್ಯಕ್ತಪಡಿಸುತ್ತಿಲ್ಲ, ಆದರೆ ನಮ್ಮೆಲ್ಲರಿಗೂ ಮರಣವು ಖಚಿತವೆಂಬುದನ್ನು ತಿಳಿಸುತ್ತಿದ್ದಾನೆ. ನ್ಯಾಯತೀರ್ಪಿನ ದಿನದ ಭಯಾನಕತೆಯು ಏನೆಂದರೆ ನಾವು ಇನ್ನೂ ನಮ್ಮ ಪಾಪಗಳಲ್ಲಿರುವಾಗಲೇ ನಮ್ಮ ಸೃಷ್ಟಿಕರ್ತನನ್ನು ಎದುರುಗೊಳ್ಳುವ ಯೋಚನೆಯೇ ಆಗಿದೆ.

**ಕ್ರಿಸ್ತನು ಒಂದೇ ಸಾರಿ** ಬಂದನು, ತನ್ನ ಮರಣ ಹಾಗೂ ಪುನರುತ್ಥಾನಗಳ ಬಳಿಕ ತನ್ನ ಶಿಷ್ಯರಿಗೆ **ಕಾಣಿಸಿಕೊಂಡನು**, ಮತ್ತು ಆತನು ಮತ್ತೊಂದು ಸಾರಿ ಬರಲಿದ್ದಾನೆ. ಕ್ರಿಸ್ತನ **ಎರಡನೆಯ** ಬರೋಣ, ಅಥವಾ ಕಾಣಿಸಿಕೊಳ್ಳುವಿಕೆಯು ಪ್ರಸ್ತಾಪಿಸಲ್ಪಟ್ಟಿದ್ದು ಶಾಸ್ತ್ರಗಳೊಳಗೆ ಈ ವಚನದಲ್ಲಿ ಮಾತ್ರವೇ ಆಗಿದೆ. ಖಂಡಿತವಾಗಿಯೂ, ಅದು ಬೇರೆ ಕಡೆಗಳಲ್ಲಿ ಪರೋಕ್ಷವಾಗಿ ಸೂಚಿಸಲ್ಪಟ್ಟಿದೆ (ಅಪೊಸ್ತಲರ ಕೃತ್ಯಗಳು 1:11). ಇದು ಪೌಲನಿಗೆ "ಕಟ್ಟಕಡೆಗೆ . . . ಕಾಣಿಸಿಕೊಂಡನು" ಎಂಬುದರೊಂದಿಗೆ ಸಾಮರಸ್ಯವಾಗಿರುತ್ತದೆ (1 ಕೊರಿಂಥ 15:8) ಮತ್ತು ಆತನು ತನ್ನ ಎರಡನೆಯ ಬರೋಣಕ್ಕೆ ಮುಂಚೆ ಪುನಃ ಕಾಣಿಸಿಕೊಳ್ಳುವವನಲ್ಲ. ಇದು ಬಹಳ ಇತ್ತೀಚಿನ ಸಮಯಗಳಲ್ಲಿ ಕ್ರಿಸ್ತನು ಪುನಃ ಪುನಃ ಕಾಣಿಸಿಕೊಂಡಿದ್ದಾನೆಂಬ ವ್ಯರ್ಥ ಊಹಿಸುವಿಕೆಗಳನ್ನು ಖಂಡಿಸುತ್ತದೆ.

ಆತನು ಅಂತಿಮವಾಗಿ ಯಾರನ್ನು ರಕ್ಷಿಸುವನು? ಹಂಬಲದಿಂದ **ತನ್ನನ್ನು ನಿರೀಕ್ಷಿಸಿಕೊಂಡಿರುವವ**ರನ್ನು ರಕ್ಷಿಸುವನು.[66] ನಮ್ಮ ಮನೋಭಾವವು ಕ್ರಿಸ್ತನ ಎರಡನೆಯ ಬರೋಣವನ್ನು "ಅತ್ಯಾಸಕ್ತಿಯಿಂದ ಬಯಸುವವರಾಗಿ" ಇರುವದಾಗಿರತಕ್ಕದ್ದು (2 ಪೇತ್ರ 3:12; ASV). ನಮ್ಮ ಪ್ರಾರ್ಥನೆಗಳು "ಕರ್ತನಾದ ಯೇಸುವೇ, ಬಾ" ಎಂಬದನ್ನು ಸಹ ಒಳಗೊಂಡಿರತಕ್ಕದ್ದು (ಪ್ರಕಟನೆ 22:20). ಆ ಘಟನೆಯು ಶೀಘ್ರವೇ ಸಂಭವಿಸಬೇಕೆಂದು ಪ್ರಾರ್ಥಿಸಬೇಕಾದರೆ ಅದಕ್ಕೆ ಸ್ವಲ್ಪ ಮಟ್ಟಿಗೆ ಅತ್ಯಾಸಕ್ತಿಯ ಅಗತ್ಯವಿರುತ್ತದೆ. ನಾವು ಕ್ರಿಸ್ತನ ಬರೋಣವನ್ನು "ಅತ್ಯಾಸಕ್ತಿಯಿಂದ ನಿರೀಕ್ಷಿಸಿಕೊಂಡಿರಬೇಕು." ದುರ್ಬಲ ನಂಬಿಕೆಯುಳ್ಳವರಿಗೆ ಅದೊಂದು ಸಮಸ್ಯೆಯಾಗಿರಬಹುದಾಗಿದೆ. ಒಬ್ಬನು 2 ಪೇತ್ರ 1:6, 7ರಲ್ಲಿ ಪಟ್ಟಿ ಮಾಡಲಾಗಿರುವ "ಕ್ರೈಸ್ತೀಯ ಭೂಷಣಗಳನ್ನು" ಸಾಧಿಸಿಕೊಳ್ಳುವದಾದರೆ ಹಾಗೆ ಮಾಡಬಲ್ಲನೆಂದು ಪೇತ್ರನು

ಹೇಳುತ್ತಾನೆ. ಈ ಜೀವನದಲ್ಲಿ ಕ್ರೈಸ್ತೀಯ ಗುಣಸ್ವಭಾವಗಳನ್ನು ಅಭಿವೃದ್ಧಿಪಡಿಸಿಕೊಳ್ಳುವದರಲ್ಲಿ "ಆಸಕ್ತಿಯಿಂದ" ಇರುವವನಿಗೆ ಪೇತ್ರನು ಹೀಗೆ ಹೇಳುತ್ತಾನೆ, ". . . ದೇವರು ನಿಮ್ಮನ್ನು ಕರೆದದ್ದನ್ನೂ ಆದುಕೊಂಡದ್ದನ್ನೂ ದೃಢಪಡಿಸಿಕೊಳ್ಳುವದಕ್ಕೆ ಮತ್ತಷ್ಟು ಪ್ರಯಾಸಪಡಿರಿ. ಹೀಗೆ ಮಾಡಿದರೆ ಎಂದಿಗೂ ಎಡಹುವದಿಲ್ಲ" (2 ಪೇತ್ರ 1:10). ಒಬ್ಬನು ಆ ವಿಶ್ವಾಸಿಸುವ ನಂಬಿಕೆಯ ಮಟ್ಟವನ್ನು ಸಾಧಿಸಿಕೊಳ್ಳುವಾಗ, ಆತನು "ದೇವರ ದಿನದ ಪ್ರತ್ಯಕ್ಷತೆಯನ್ನು ಎದುರುನೋಡುತ್ತಾ ಹಾರೈಸುತ್ತಾ" ಇರುವನು (2 ಪೇತ್ರ 3:12). NIVಯಲ್ಲಿ "ನೀವು ದೇವರ ದಿನವನ್ನು ಎದುರು ನೋಡುವವರಾಗಿ ಅದರ ಬರೋಣವನ್ನು ವೇಗಗೊಳಿಸುವಾಗ" ಎಂದು ಇರುತ್ತದೆ.

ನಾವು ಯೇಸುವಿನ ಪುನರಾಗಮನದ ಕುರಿತು ಉತ್ಸಾಹಗೊಳ್ಳಬಲ್ಲೆವೋ? ಆತನು ಶೀಘ್ರವೇ ಬರಬೇಕೆಂದು ನಾವು ನಿಜವಾಗಿಯೂ ನಿರೀಕ್ಷಿಸಬಲ್ಲೆವೋ? ಹೌದಾದರೆ, ನಾವು ಯೋಹಾನನ ಸಂಗಡ ಹೀಗೆ ಪ್ರಾರ್ಥಿಸಬಹುದು, "ಆಮೆನ್. ಕರ್ತನಾದ ಯೇಸುವೇ, ಬಾ" (ಪ್ರಕಟನೆ 22:20). ಎರಡನೆಯ ಬರೋಣದ ವಿಷಯದಲ್ಲಿ ಇರಬೇಕಾದ ಸಮರ್ಪಕ ಮನೋಭಾವದ ಕುರಿತು ಪೌಲನು ಒಂದು ಸುಳಿವು ನೀಡುತ್ತಾನೆ. ಆತನು "ನೀತಿವಂತರಿಗೆ ದೊರಕುವ ಜಯಮಾಲೆಯು ಮುಂದೆ ನನಗೆ ಸಿದ್ಧವಾಗಿದೆ; ಅದನ್ನು ನೀತಿಯುಳ್ಳ ನ್ಯಾಯಾಧಿಪತಿಯಾಗಿರುವ ಕರ್ತನು ಆ ದಿನದಲ್ಲಿ ನನಗೆ ಕೊಡುವನು; ನನಗೆ ಮಾತ್ರವಲ್ಲದೆ ತನ್ನ ಪ್ರತ್ಯಕ್ಷತೆಯನ್ನು ಪ್ರೀತಿಸುವವರೆಲ್ಲರಿಗೂ ಕೊಡುವನು" ಎಂಬ ಬಗ್ಗೆ ಮಾತಾಡಿದನು (2 ತಿಮೊಥೆ 4:8). ಒಬ್ಬನು ಮೊದನೆಯ ಬರೋಣವನ್ನು ಮತ್ತು ಅದು ನಮಗೆ ಯಾವ ಅರ್ಥ ಕೊಡುತ್ತದೆಂಬುದನ್ನು ಪ್ರೀತಿಸುವದಾದರೆ, ಆತನು ನಿಶ್ಚಯವಾಗಿಯೂ ಕರ್ತನು ಪುನಃ ಬರುವಾಗ ಆತನನ್ನು ಕಾಣಬೇಕೆಂಬ ಹಂಬಲವನ್ನು ಬೆಳೆಸಿಕೊಳ್ಳುವನು.

ಸುವಾರ್ತೆಯ ಕೊಡುಗೆಯನ್ನು ತಿರಸ್ಕರಿಸುವವನು ತನ್ನನ್ನು ನಿತ್ಯಜೀವಕ್ಕೆ ಅಯೋಗ್ಯನೆಂದು ಎಣಿಸಿಕೊಳ್ಳುತ್ತಾನೆ (ಅಪೊಸ್ತಲರ ಕೃತ್ಯಗಳು 13:46). ಒಬ್ಬ ವ್ಯಕ್ತಿಯು ಸುವಾರ್ತೆಯನ್ನು ರಕ್ಷಣೆಯ ಮಾರ್ಗವೆಂಬದಾಗಿ ನಿರಾಕರಿಸುತ್ತಾನೋ, ಆತನು ಅದರ ಮೂಲಕವೇ ದಂಡನೆಗೆ ಗುರಿಯಾಗುವ ಮಾನದಂಡವಾಗಿ ಆರಿಸಿಕೊಳ್ಳುವವನಾಗುತ್ತಾನೆ (ಯೋಹಾನ 12:48).

ಯೇಸು ನಮ್ಮ ಪಾಪಗಳನ್ನು ಹೊತ್ತುಕೊಳ್ಳುವ ಯೋಚನೆಯು ಯೆಶಾಯ 53:10-12ರಲ್ಲಿ ಮುಂತಿಳಿಸಲ್ಪಟ್ಟಿತು. ಇಬ್ರಿಯರಿಗೆ ಪತ್ರಿಕೆಯ ಲೇಖಕನು **ಬಹುಜನರ ಪಾಪಗಳನ್ನು ಹೊತ್ತುಕೊಳ್ಳುವದಕ್ಕೋಸ್ಕರ** ಆತನು ಬಂದನೆಂದು ಹೇಳುವಾಗ ಯೆಶಾಯನ ವಾಕ್ಯಭಾಗವನ್ನು ಮನಸ್ಸಿನಲ್ಲಿಟ್ಟುಕೊಂಡಿದ್ದಿರಬಹುದಾಗಿದೆ. ಯೆಶಾಯನು "ಅವರ ಅಪರಾಧಗಳನ್ನು ಹೊತ್ತುಕೊಂಡನು" ಎಂದು ಬರೆದನು (53:11). 27ನೇ ವಚನದಲ್ಲಿರುವ ಆ ಹೇಳಿಕೆಯು ವಸ್ತುತಃ LXX ನಲ್ಲಿ ಯೆಶಾಯ 53:12ರಲ್ಲಿರುವ ಮಾತುಗಳೇ ಆಗಿರುತ್ತದೆ. ಸ್ನಾನಿಕನಾದ ಯೋಹಾನನು ಯೇಸುವನ್ನು ಅದೇ ಆಲೋಚನೆಯೊಂದಿಗೆ ಪರಿಚಯಿಸುತ್ತಾ ಹೀಗೆ ಹೇಳಿದನು, "ಇಗೋ, [ಯಜ್ಞಕ್ಕೆ] ದೇವರು ನೇಮಿಸಿದ ಕುರಿ, ಲೋಕದ ಪಾಪವನ್ನು ನಿವಾರಣೆ ಮಾಡುವವನು" (ಯೋಹಾನ 1:29).

ಯೆಹೂದ್ಯ ಜನರು Yom Kippur (ದೋಷಪರಿಹಾರಕ ದಿನ) ದಿನದಂದು ತಮ್ಮ ಮಹಾಯಾಜಕನು ಅತಿಪವಿತ್ರ ಸ್ಥಳದಿಂದ ಹೊರಗೆ ಬರುವದನ್ನು ಅತ್ಯಾಸಕ್ತಿಯಿಂದ ಎದುರುನೋಡುತ್ತಾ ನಿಂತಿರುತ್ತಿದ್ದರು. ಆತನು ಕಾಣಿಸಿಕೊಳ್ಳುವದು ದೇವರು ಆತನ ಸಮರ್ಪಣೆಯನ್ನು ಅಂಗೀಕರಿಸಿಕೊಂಡಿದ್ದಾನೆ ಎಂಬುದನ್ನು ಸೂಚಿಸುವದಾಗಿತ್ತು. ಇದು

ಅಂತ್ಯದಲ್ಲಿ ಕ್ರಿಸ್ತನು ಬರುವದಕ್ಕೆ ಒಂದು ಪೂರ್ವಛಾಯೆ ಆಗಿರಬಲ್ಲದು ಅಥವಾ ಆಗಿರಲಾರದು, ಆದರೆ ಇದು ಇಬ್ರಿಯ ಕ್ರೈಸ್ತರು ಅದರಲ್ಲಿ ಅಡಕವಾಗಿರುವ ಸಮಾನಾರ್ಥವನ್ನು ಗ್ರಹಿಸಿಕೊಳ್ಳುವಂತೆ ಸಹಾಯ ಮಾಡುವದಾಗಿದೆ.

ಯೇಸುವು "ಸರ್ವಕಾಲಕ್ಕೂ ಒಂದೇ ಸಾರಿ ಮರಣಿಸಿದನು," ನಾವು ಒಂದೇ ಸಾರಿ **ಸಾಯುವೆವು**, ಮತ್ತು ಕ್ರಿಸ್ತನು ಮತ್ತೊಂದು ಸಾರಿ ಬರುವನು. ಈ "ಒಂದೇ ಸಾರಿ" ಎಂಬ ಅಂಶಗಳು ನಮ್ಮ ಅಂತಿಮ, ನಿತ್ಯವಾದ ರಕ್ಷಣೆಯ ಕಡೆಗೆ ಬೆರಳು ತೋರಿಸುತ್ತವೆ.

## ಹೆಚ್ಚಿನ ಅಧ್ಯಯನಕ್ಕಾಗಿ: ಶಿಲುಬೆಯ ಮೇಲಿನ ಕಳ್ಳನು

ಶಿಲುಬೆಯ ಮೇಲಿದ್ದ ಕಳ್ಳನ ರೀತಿಯಲ್ಲಿ ರಕ್ಷಣೆ ಹೊಂದಬೇಕೆಂದು ಬಯಕೆಯು ಸಾಮಾನ್ಯವಾಗಿ ಕ್ರಿಸ್ತನ ಅಂತಿಮ ಉಯಿಲಿನ ಬಗ್ಗೆ ಯೋಚನೆಯನ್ನೇ ಮಾಡದವನಿಂದ ವ್ಯಕ್ತಪಡಿಸಲ್ಪಡುತ್ತದೆ. ಆತನು ತನ್ನ ಮರಣ ಮತ್ತು ಈ ಭೂಮಿಯನ್ನು ಬಿಟ್ಟು ಹೋದ ಬಳಿಕ, ಹೊಸ ಒಡಂಬಡಿಕೆಯಲ್ಲಿ ಪಾಲುಗಾರರಾಗುವದಕ್ಕೆ ಆತನು ನಿರ್ದಿಷ್ಟವಾದ ಶರತ್ತುಗಳನ್ನು ಕೊಟ್ಟನು:

> ಪರಲೋಕದಲ್ಲಿಯೂ ಭೂಲೋಕದಲ್ಲಿಯೂ ಎಲ್ಲಾ ಅಧಿಕಾರವು ನನಗೆ ಕೊಡಲ್ಪಟ್ಟದೆ. ಆದ್ದರಿಂದ ನೀವು ಹೊರಡು ಹೋಗಿ ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ; ಅವರಿಗೆ ತಂದೆಯ, ಮಗನ, ಪವಿತ್ರಾತ್ಮನ ಹೆಸರಿನಲ್ಲಿ ದೀಕ್ಷಾಸ್ನಾನಮಾಡಿಸಿ ನಾನು ನಿಮಗೆ ಆಜ್ಞಾಪಿಸಿದ್ದನ್ನೆಲ್ಲಾ ಕಾಪಾಡಿಕೊಳ್ಳುವದಕ್ಕೆ ಅವರಿಗೆ ಉಪದೇಶ ಮಾಡಿರಿ. ನೋಡಿರಿ, ನಾನು ಯುಗದ ಸಮಾಪ್ತಿಯ ವರೆಗೂ ಎಲ್ಲಾ ದಿವಸ ನಿಮ್ಮ ಸಂಗಡ ಇರುತ್ತೇನೆ (ಮತ್ತಾಯ 28:18-20).

> ನೀವು ಲೋಕದ ಎಲ್ಲಾ ಕಡೆಗೆ ಹೋಗಿ ಜಗತ್ತಿಗೆಲ್ಲಾ ಸುವಾರ್ತೆಯನ್ನು ಸಾರಿರಿ. ನಂಬಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವವನು ರಕ್ಷಣೆಹೊಂದುವನು; ನಂಬದೆ ಹೋಗುವವನು ದಂಡನೆಗೆ ಗುರಿಯಾಗುವನು (ಮಾರ್ಕ 16:15, 16).

> ಕ್ರಿಸ್ತನು ಶ್ರಮೆ ಪಟ್ಟು ಸತ್ತು ಮೂರನೆಯ ದಿನದಲ್ಲಿ ಜೀವಿತನಾಗಿ ಎದ್ದುಬರುವನೆಂತಲೂ ಪಾಪಪರಿಹಾರಕ್ಕೋಸ್ಕರ ದೇವರ ಕಡೆಗೆ ತಿರುಗಿಕೊಳ್ಳಬೇಕೆಂಬ ಮಾತು ಯೆರೂಸಲೇಮು ಮೊದಲುಗೊಂಡು ಸಮಸ್ತ ದೇಶದವರಿಗೂ ಆತನ ಹೆಸರಿನಲ್ಲಿ ಸಾರಲ್ಪಡುವದೆಂದಲೂ ಬರೆದದೆ (ಲೂಕ 24:46, 47).

ಆತನ ಉಯಿಲನ್ನು ಕಾರ್ಯರೂಪಕ್ಕೆ ತರಲಾಯಿತು ಎಂಬುದು ಅಪೊಸ್ತಲರ ಕೃತ್ಯಗಳಲ್ಲಿ ಒತ್ತಿ ಹೇಳಲ್ಪಟ್ಟಿದೆ.[67] ಅಪೊಸ್ತಲರ ಕೃತ್ಯಗಳಲ್ಲಿರುವ ಉದಾಹರಣೆಗಳು ಶಕ್ತಿಶಾಲಿಯಾಗಿವೆ; ಪರಿವರ್ತನೆಯ ಕುರಿತ ಪ್ರತಿಯೊಂದು ವಿವರವಾದ ಪ್ರಕರಣಗಳಲ್ಲಿಯೂ ದೀಕ್ಷಾಸ್ನಾನದ ಬಗ್ಗೆ ಪ್ರಸ್ತಾಪಿಸಲಾಗಿರುತ್ತದೆ. ನಂಬಿಕೆಯು ಯಾವಾಗಲೂ ಪ್ರಸ್ತಾಪಿಸಲ್ಪಟ್ಟಿರುವದಿಲ್ಲ, ಹಾಗಿದ್ದರೂ ಅದು ಅವಶ್ಯಕವಾದದ್ದು ಮತ್ತು ಅಪೊಸ್ತಲರ ಕೃತ್ಯಗಳ ಪುಸ್ತಕದುದ್ದಕ್ಕೂ ಪರೋಕ್ಷವಾಗಿ ಸೂಚಿಲ್ಪಟ್ಟಿದೆ ಎಂಬುದನ್ನು ನಾವು ಒಪ್ಪಿಕೊಳ್ಳುತ್ತೇವೆ. ಪಶ್ಚಾತ್ತಾಪು ಸಹ ಯಾವಾಗಲೂ ಪ್ರಸ್ತಾಪಿಸಲ್ಪಟ್ಟಿರುವದಿಲ್ಲ, ಆದರೆ ಪರೋಕ್ಷವಾಗಿ ಸೂಚಿಸಲ್ಪಟ್ಟಿದೆ. ಸ್ಪಷ್ಟವಾಗಿ, ಆದಿಯ ಪರಿವರ್ತನೆಗಾರರನ್ನು ಮುಳುಗಿಸುತ್ತಿದ್ದ ಸಂಗತಿಯು ನೀರು ಆಗಿತ್ತು (ಅಪೊಸ್ತಲರ ಕೃತ್ಯಗಳು 8:36; 10:47). ಅಪೊಸ್ತಲರ ಕೃತ್ಯಗಳು 16:33ರಲ್ಲಿ ಮುಳುಗಿಸುವಿಕೆಯು ಪರೋಕ್ಷವಾಗಿ

ಸೂಚಿಸಲ್ಪಟ್ಟಿದ್ದು ಸೆರೆಮನೆ ಅಧಿಕಾರಿಯು “ಅವರನ್ನು ಕರಕೊಂಡು ಹೋಗಿ” ದೀಕ್ಷಾಸ್ನಾನ ಮಾಡಿಸಿಕೊಂಡನು. ಈ ದೀಕ್ಷಾಸ್ನಾನಕ್ಕೆ ನೀರಿನಲ್ಲಿ ಮುಳುಗುವದು ಅಗತ್ಯವಿದ್ದಿಲ್ಲವಾದಲ್ಲಿ, ಅದನ್ನು ಸೆರೆಮನೆಯಲ್ಲಿಯೇ ಮಾಡಿರಬಹುದಿತ್ತು. ನೀವು ನಿಮ್ಮ ಕರ್ತನೂ ರಕ್ಷಕನೂ ಆಗಿರುವಾತನ ಉಯಿಲನ್ನು (ಚಿತ್ತವನ್ನು) ವಿಶ್ವಾಸಿಸುವಿರೋ – ಅಥವಾ ದೀಕ್ಷಾಸ್ನಾನವು ಅನಾವಶ್ಯಕವಾದದ್ದೆಂದು ಹೇಳುವ ಯಾವದೋ ವ್ಯಕ್ತಿಯನ್ನು ವಿಶ್ವಾಸಿಸುವಿರೋ?

ಯೇಸುವು ಜೀವಿತನಾಗಿರುವ ವೇಳೆಯಲ್ಲಿ, ಆತನು ತಾನು ಬಳಸುವದಕ್ಕೆ ಆರಿಸಿಕೊಂಡ ಯಾವದೇ ವಿಧಾನದ ಮೂಲಕ ಯಾರನ್ನು ಬೇಕಾದರೂ ರಕ್ಷಿಸಬಲ್ಲವನಾಗಿದ್ದನು. ಆತನು ವ್ಯಭಿಚಾರದಲ್ಲಿ ಸಿಕ್ಕ ಸ್ತ್ರೀಗೆ ಅವಳ ಪಾಪಗಳು ಕ್ಷಮಿಸಲ್ಪಟ್ಟಿವೆ ಎಂದು ಹೇಳಿದನು (ಯೋಹಾನ 8:1-11). ಆರತನು ಪಾರ್ಶ್ವವಾಯು ರೋಗಿಯನ್ನು ಗುಣಪಡಿಸುವದಕ್ಕೆ ಮುನ್ನ ಅಥವಾ ಆತನಿಂದ ಏನನ್ನಾದರೂ ಬಯಸುವದಕ್ಕೆ ಮುನ್ನ, ಆತನನ್ನು ಕ್ಷಮಮಿಸಿದನು (ಮಾರ್ಕ 2:5). ಹೇಗೂ, ಈ ಜನರು ಶಿಲುಬೆಯ ಮುಂಚೆ ರಕ್ಷಿಸಲ್ಪಟ್ಟವರು. ಯೇಸುವಿನ ಉಯಿಲು ಇನ್ನೂ ಪರಿಣಾಮಕ್ಕೆ ಬಂದಿರಲಿಲ್ಲ. ಆತನ ಸುರಿಸಲ್ಪಟ್ಟ ರಕ್ತವು ಹೊಸ ಒಡಂಬಡಿಕೆಯನ್ನು ಅದರ ಶರತ್ತುಗಳೊಂದಿಗೆ ದೃಢಪಡಿಸಿತು (ಮತ್ತಾಯ 26:28). ಅದೇ ರೀತಿಯಲ್ಲಿ, ನಾನು ಬದುಕಿರುವ ವೇಳೆ, ನನಗಿರುವದರಲ್ಲಿ ಏನು ಬೇಕಾದರೂ ಬೇರೆಯವರಿಗೆ ಕೊಟ್ಟು ಬಿಡಬಹುದು, ಶರತ್ತುಗಳೊಂದಿಗೆ ಅಥವಾ ಯಾವದೇ ಶರತ್ತುಗಳನ್ನು ಮುಂದಿಡದೆಯೇ ಕೊಡಬಹುದು. ನನ್ನ ಮರಣದ ಬಳಿಕ, ಆ ಉಡುಗೋರೆಯನ್ನು ಸ್ವೀಕರಿಸಿಕೊಳ್ಳಬೇಕಾದರೆ ಒಬ್ಬ ವ್ಯಕ್ತಿಯು ನಾನು ನನ್ನ ಉಯಿಲಿನಲ್ಲಿ ಬರೆದಿರುವ ಯಾವ ಶರತ್ತುಗಳಿದ್ದರೂ ಅವುಗಳನ್ನು ನೆರವೇರಿಸಬೇಕಾಗುತ್ತದೆ. ಕ್ರಿಸ್ತನ ಉಯಿಲಿನ ವಿಷಯದಲ್ಲಿಯೂ ಅದೇ ರೀತಿಯಿರುತ್ತದೆ: ಆತನು ಬದುಕಿರುವ ವೇಳೆಯಲ್ಲಿ, ಆತನು ತನಗಿಷ್ಟವಾದ ರೀತಿಯಲ್ಲಿ ಕ್ಷಮಿಸುವ ದೈವಿಕ ಶಕ್ತಿಯನ್ನು ಹೊಂದಿದ್ದನು (ಆದರೂ ಅವರಲ್ಲಿದ್ದ ನಂಬಿಕೆಯನ್ನು ಆತನು ಕಾಣಬಲ್ಲವನಾಗಿದ್ದನು). ಇಂದು, ಕ್ರಿಸ್ತನು ತನ್ನ ಉಯಿಲಿನ ವಿಷಯದಲ್ಲಿ ವಿನಾಯಿತಿ ಮಾಡುವದಕ್ಕಾಗಿ ಆತನು ಯಾರೊಂದಿಗೂ ನೇರವಾಗಿ ಮಾತಾಡುವದಿಲ್ಲ.

ಶಿಲುಬೆಯ ಮೇಲಿದ್ದ ಕಳ್ಳನು ಮುಂಚೆ ದೀಕ್ಷಾಸ್ನಾನ ಮಾಡಿಸಿಕೊಂಡಿದ್ದನೋ ಇಲ್ಲವೋ ಎಂಬುದು ಮುಖ್ಯವಾಗಿರುವದಿಲ್ಲ. ಆತನು ಯೋಹಾನನ ದೀಕ್ಷಾಸ್ನಾನವನ್ನು ಮಾಡಿಸಿಕೊಂಡಿರುವ (ನೋಡಿರಿ ಮತ್ತಾಯ 3:4-6), ಅಥವಾ ಯೇಸುವಿನ ಶಿಷ್ಯರ ಮೂಲಕವಾಗಿ ದೀಕ್ಷಾಸ್ನಾನವನ್ನು ಮಾಡಿಸಿಕೊಳ್ಳುವದಕ್ಕೆ ಬಂದ ಬಹುಮಂದಿಯಲ್ಲಿ ಸೇರಿದವನು ಸಹ ಆಗಿರುವ ಸಾಧ್ಯತೆಯಿರುತ್ತದೆ (ಯೋಹಾನ 4:1, 2). ಹೇಗಿದ್ದರೂ, ಆತನು ಶಿಲುಬೆಯ ಮೇಲೆ ಕ್ರಿಸ್ತನು ಮರಣಿಸುವದಕ್ಕೆ ಮುಂಚೆ ಜೀವಿಸಿದ್ದನು – ಆಗ ರಕ್ಷಕನು, ನಮ್ಮ ಉಯಿಲುಗಾರನು ಇನ್ನೂ ಬದುಕಿದ್ದನು. ಯೇಸು ಆ ಮನುಷ್ಯನಿಗೆ ಅವನು ಈ ಹೊತ್ತೇ ತನ್ನ ಸಂಗಡ ಪರದೈಸಿನಲ್ಲಿರುವನೆಂದು ಭರವಸವನ್ನು ಕೊಟ್ಟನು (ಲೂಕ 23:39-43), ಅದನ್ನು ಉಚ್ಛರಿಸುವ ಕ್ಷಣದಲ್ಲಿ ಆತನು ರಕ್ಷಿಸಲ್ಪಟ್ಟನೆಂಬುದನ್ನು ಪರೋಕ್ಷವಾಗಿ ಸೂಚಿಸಿದನು.

ಈ ಕಳ್ಳನು ಮುಂಚೆ ಪರಿವರ್ತನೆಗೊಂಡವನಾಗಿದ್ದರೆ, ಆತನು ಹಿಂಜರಿದು ಹೋದವನಾಗಿದ್ದನೆಂಬದಾಗಿ ನಾವು ಊಹಿಸಿಕೊಂಡರೆ ತಪ್ಪಾಗಲಾರದು, ಹಾಗಿದ್ದ ಪಕ್ಷದಲ್ಲಿ ಯೇಸು ಆತನನ್ನು ಈ ಹಂತದಲ್ಲಿ ಪುನಃಸ್ಥಾಪಿಸಿದನು. ಈ ಮನುಷ್ಯನು ಆ ದಿನದಲ್ಲಿ ಅಳುತ್ತಿದ್ದ ಕೆಲವು ಸ್ತ್ರೀಯರನ್ನು ಹೊರತು ಪಡಿಸಿ, ಆತನ ಸುತ್ತಲಿದ್ದವರಿಗಿಂತಲೂ ಹೆಚ್ಚು ನಂಬಿಕೆಯನ್ನು ಪ್ರದರ್ಶಿಸಿದ್ದನು (ಲೂಕ 23:27-31, 48, 49). ಆತನು ಯೇಸುವಿನ ಮಾತುಗಳನ್ನು ಮತ್ತು ಯೇಸುವಿನ ಬಗ್ಗೆ ತಾನು ಕೇಳಿಸಿಕೊಂಡಿದ್ದ ಎಲ್ಲವನ್ನೂ ಸತ್ಯವೆಂದು ನಂಬಿದ್ದನು. ಯೇಸು ಒಬ್ಬ ಅರಸನಾಗಿದ್ದಾನೆ ಮತ್ತು ಅವನಿಗೊಂದು ರಾಜ್ಯವಿರಲಿದೆ ಎಂಬುದನ್ನು ಆತನು ನಂಬಿದನು!

ಆತನು ಈ ಸತ್ಯಗಳ ಬಗ್ಗೆ ಹೇಗೆ ತಿಳಿದುಕೊಂಡಿದ್ದನು? ರಕ್ಷಕನು ಬೋಧಿಸುವದನ್ನು ಆತನು ಕೇಳಿಸಿಕೊಂಡಿದ್ದನೋ? ಸ್ನಾನಿಕನಾದ ಯೋಹಾನನು ಈತನೇ ಇಸ್ರಾಯೇಲ್ಯರ ಮೆಸ್ಸೀಯನಾಗಿ "ಬರಲಿರುವವನು" ಎಂದು ತೋರಿಸಿ ಕೊಟ್ಟಿದ್ದನ್ನು ಕೇಳಿಸಿಕೊಂಡಿದ್ದನೋ (ಯೋಹಾನ 1:29)? ಇದು ಸಾಧ್ಯವಿರುತ್ತದೆ. ಆತನು ಯೇಸುವನ್ನು ಮೆಸ್ಸೀಯನೆಂದು ಅಂಗೀಕರಿಸಿಕೊಂಡಿದ್ದವನಾಗಿದ್ದರೆ, ಅನಂತರದಲ್ಲಿ ಆತನು ರೋಮ್ ವಿರುದ್ಧದ ಬಂಡಾಯದಲ್ಲಿ ಪಾಲ್ಗೊಂಡಿದ್ದನೆಂಬುದು ಸ್ಪಷ್ಟವಾಗುತ್ತದೆ. ಏನು ಸಂಭವಿಸಿತೆಂಬುದು ನಮಗೆ ಗೊತ್ತಿರುವದಿಲ್ಲ, ಆದರೆ ನಿಜವಾದ ಪ್ರಶ್ನೆಯು ಅದು ಆಗಿರುವದಿಲ್ಲ. ಪ್ರಾಮುಖ್ಯವಾದ ಪ್ರಶ್ನೆಯು ಏನೆಂದರೆ "ನಾನು ರಕ್ಷಣೆ ಹೊಂದುವದಕ್ಕೆ ಏನು ಮಾಡಬೇಕು?" ಎಂಬುದು – ಹೊರತು "ಕಳ್ಳನು ಏನು ಮಾಡಬೇಕಾಗಿತ್ತು?" ಎಂಬುದಲ್ಲ.

ನಾವು ದೇವರ ಸಂಗಡ ಚೌಕಾಸಿ ಮಾಡುವದಕ್ಕಾಗುವದಿಲ್ಲ ಅಥವಾ ಆತನ ಚಿತ್ತದ (ಹೊಸ ಒಡಂಬಡಿಕೆ) ಸಂದೇಶವನ್ನು ಮೃದುಗೊಳಿಸಲು ಅಥವಾ ಅದರ ಮಾನದಂಡವನ್ನು ತಗ್ಗಿಸುವದಕ್ಕೆ ಅದು ಕೇಳುವ ಅಗತ್ಯತೆಗಳನ್ನು ಬದಲಾಯಿಸುವದಕ್ಕೆ ಸಾಧ್ಯವಿಲ್ಲ. ಒಂದೋ ನಾವು ಆತನ ಶರತ್ತುಗಳಿಗೆ ಒಪ್ಪಿಕೊಳ್ಳುವೆವು, ಅಥವಾ ಅವುಗಳನ್ನು ತಿರಸ್ಕರಿಸುವೆವು. ಆತನ ಆಜ್ಞೆಗಳನ್ನು ನಿರ್ಲಕ್ಷಿಸುವ ಬಗ್ಗೆ ಅಥವಾ ಅವುಗಳನ್ನು ಅನುಸರಿಸದೆಯೇ ರಕ್ಷಣೆಯನ್ನು ಹೊಂದಿಕೊಳ್ಳುವ ಬಗ್ಗೆ ಯೋಚಿಸುವದು ಸಹ ಒಂದು ದೊಡ್ಡ ಪ್ರಮಾದವಾಗುತ್ತದೆ.

## "ಒಡಂಬಡಿಕೆ"

"ಒಡಂಬಡಿಕೆ" (διαθήκη, *diathēkē*) ಎಂಬುದು ಇಬ್ರಿಯರಿಗೆ ಪತ್ರಿಕೆಯಲ್ಲಿ ಒಂದು ಪ್ರಾಮುಖ್ಯವಾದ ಪದವಾಗಿದೆ. ಗ್ರೀಕ್ ಪದದ ವಿವಿಧ ರೂಪಗಳು ಈ ಪತ್ರಿಕೆಯಲ್ಲಿ ಹದಿನೇಳು ಸಾರಿ ಕಾಣಿಸಿಕೊಳ್ಳುತ್ತದೆ.[68] ಈ ಪದಗಳು *diatithēmi* ಎಂಬ ಪದದಿಂದ ಬಂದಿರುತ್ತವೆ. *Dia* ಎಂದರೆ "ಎರಡು," ಮತ್ತು *tithēmi* ಎಂದರೆ "ಇಡು"; ಎರಡೂ ಪದಗಳು ಸೇರಿದರೆ ಅರ್ಥವು "ಇಬ್ಬರ ನಡುವೆ ಇಡು" ಎಂದಾಗುತ್ತದೆ.[69] ಇದು ಹಳೆಯ ಒಡಂಬಡಿಕೆಯಲ್ಲಿ ಹತವಾದ ಪ್ರಾಣಿಯ ಭಾಗಗಳ ನಡುವೆ ಹಾದು ಹೋಗುವ ಮೂಲಕ, ಒಡಂಬಡಿಕೆಯನ್ನು ಮುರಿಯುವವನು ಅದೇ ರೀತಿಯಲ್ಲಿ ಇಬ್ಭಾಗವಾಗಿ ಕತ್ತರಿಸಲ್ಪಡುವನೆಂದು ಹೇಳುವ ರೀತಿಯಲ್ಲಿಯೋ ಎಂಬಂತೆ ಇಬ್ಬರ ನಡುವೆ ಒಡಂಬಡಿಕೆಯೊಂದನ್ನು ದೃಢಪಡಿಸಿಕೊಳ್ಳುತ್ತಿದ್ದ ಪದ್ಧತಿಯನ್ನು ನೆನಪಿಗೆ ತರುತ್ತದೆ.[70] (ನೋಡಿರಿ ಆದಿಕಾಂಡ 15:17; ಯೆರೆಮೀಯ 34:18.)

ಇನ್ನೊಂದು ಗ್ರೀಕ್ ಪದ συνθήκη (*sunthēkē*) ಎಂಬುದನ್ನು "ಕರಾರು" ಎಂದು ಅನುವಾದಿಸಬಹುದಾಗಿದೆ, ಆದರೆ ಈ ಪದವು ಹೊಸ ಒಡಂಬಡಿಕೆಯಲ್ಲಿ ಕಾಣಿಸಿಕೊಳ್ಳುವದಿಲ್ಲ. ಶಾಸ್ತ್ರೀಯ ಗ್ರೀಕ್ ಭಾಷೆಯಲ್ಲಿ, ಇಬ್ಬರು ವ್ಯಕ್ತಿಗಳ ನಡುವಿನ ಒಂದು ಒಡಂಬಡಿಕೆಯನ್ನು ಸಾಮಾನ್ಯವಾಗಿ ಒಂದು *sunthēkē* ಎಂದು ಕರೆಯಲಾಗುತ್ತಿತ್ತು. ಅಂಥ ಒಪ್ಪಂದಗಳನ್ನು ಇಬ್ಬರು ಸಮಾನ ಪಕ್ಷಗಳವರ ನಡುವೆ ಮಾಡಲ್ಪಡುತ್ತಿತ್ತು, ಅದು ದೇವರೊಂದಿಗೆ ಒಂದು ಒಡಂಬಡಿಕೆಯಾಗುವದಕ್ಕೆ ಎಂದಿಗೂ ಆಗದು.

ಬದಲಾಗಿ, LXX ಅನುವಾದಕರು ಆದಿಕಾಂಡ 6:18 ಮೊದಲುಗೊಂಡು ಶಾಸ್ತ್ರಗಳುದ್ದಕ್ಕು ಇಬ್ರಿಯ ಭಾಷೆಯ בְּרִית (*b^erith*, "ಕರಾರು") ಎಂಬುದಕ್ಕೆ *diathēkē* ಎಂಬ ಪದವನ್ನು ಬಳಸಿದರು. ಈ ಪದವು ಸೂಚಿಸುವದೇನೆಂದರೆ "ಒಂದು ಪಕ್ಷದವನಿಂದ ಮಾಡಲ್ಪಟ್ಟ ಪೂರ್ಣಾಧಿಕಾರದ ಒಂದು ಒಪ್ಪಂದ, ಅದನ್ನು ಎದುರಿನ ಪಕ್ಷದವನು ಅಂಗೀಕರಿಸಿಕೊಳ್ಳಬಹುದಿತ್ತು ಅಥವಾ ತಿರಸ್ಕರಿಸಬಹುದಿತ್ತು, ಆದರೆ ತಿದ್ದುಪಡಿ ಮಾಡುವದ್ಕೆ

ಸಾಧ್ಯವಿರಲಿಲ್ಲ."[71] ಈ ಬಳಕೆಯಲ್ಲಿ ಪದವು ವಸ್ತುತಃ "ಧರ್ಮಶಾಸ್ತ್ರ" ದೊಂದಿಗೆ ಸಮಾನಾರ್ಥವುಳ್ಳದ್ದಾಗಿರುತ್ತದೆ (ನೋಡಿರಿ ಧರ್ಮೋಪದೇಶಕಾಂಡ 29:21; ಕೀರ್ತನೆ 78:10; ಹೋಶೇಯ 8:1). ಈ ವಿಧವಾದ ಕರಾರನ್ನು ಒಬ್ಬ ಹೆಚ್ಚಿನವನು ಕಡಿಮೆಯಾಗಿರುವಾತನೊಬ್ಬನ ಪ್ರಯೋಜನಕ್ಕಾಗಿ ಮಾಡಬಹುದಾಗಿತ್ತು, ಉದಾಹರಣೆಗೆ ಸಿನಾಯ್ ಪರ್ವತದಲ್ಲಿ ದೇವರು ಇಸ್ರಾಯೇಲ್ಯರಿಗೆ ಕೊಟ್ಟ ಒಪ್ಪಂದ (ನೋಡಿರಿ ವಿಮೋಚನಕಾಂಡ 24:6-8). 8:8-12ರಲ್ಲಿ ಇಬ್ರಿಯರಿಗೆ ಪತ್ರಿಕೆಯ ಲೇಖಕನು ಇದನ್ನೇ ಮನಸ್ಸಿನಲ್ಲಿ ಹೊಂದಿದ್ದನು.

*Diathēkē* ಎಂಬುದನ್ನು "ಕರಾರು," "ಒಡಂಬಡಿಕೆ," ಅಥವಾ "ಉಯಿಲು" ಎಂದು ಅನುವಾದಿಸಬಹುದು. KJV ಯು ಇಬ್ರಿಯ 9:16, 17ರಲ್ಲಿ "ಒಡಂಬಡಿಕೆ" ಎಂದು ಬಳಸಿದರೆ, NIV ಯು "ಉಯಿಲು" ಎಂದು ಬಳಸುತ್ತದೆ. "ಒಂದು ಉಯಿಲಿನಲ್ಲಿ ಏನೋ ಅಬಾಧಿತತೆಯು ಇರುತ್ತದೆ. ಉಯಿಲುಗಾರನೊಂದಿಗೆ ಒಬ್ಬನು ಕೊಸರಾಡುವದಕ್ಕೆ ಆಗುವದಿಲ್ಲ. ಮತ್ತು ಅದೇ ರೀತಿಯಲ್ಲಿಯೇ ಮನುಷ್ಯನು ದೇವರ ಸಂಗಡ ಚೌಕಾಸಿ ಮಾಡುವದಕ್ಕೆ ಸಾಧ್ಯವಿಲ್ಲ. ದೇವರೇ ಶರತ್ತುಗಳನ್ನು ಹಾಕುವವನಾಗಿದ್ದಾನೆ."[72]

ಒಂದು "ಉಯಿಲು" ಪರಿಣಾಮಕ್ಕೆ ಬರಬೇಕೆಂದರೆ ಒಂದು ಮರಣವನ್ನು ಅವಶ್ಯಕಗೊಳಿಸುತ್ತದೆ. ದೇವರಿಗೆ ಮರಣವು ಅನ್ವಯವಾಗುವದಿಲ್ಲವಾದ್ದರಿಂದ, ಬಹಳಷ್ಟು ಸಂದರ್ಭಗಳಲ್ಲಿ *diathēkē* ಎಂಬ ಪದಕ್ಕೆ "ಕರಾರು" ಎಂದು ಅನುವಾದಿಸುವದು ಉತ್ತಮವಾಗಿರಬಹುದಾಗಿದೆ. ಹೇಗೂ, 9:16, 17ರಲ್ಲಿ ಎರಡೂ ಯೋಚನೆಗಳು ಕಂಡು ಬರುತ್ತವೆ, ಯಾಕೆಂದರೆ ಹೊಸ ಕರಾರು ಕ್ರಿಸ್ತನ ರಕ್ತದಿಂದ ದೃಢೀಕರಿಸಲ್ಪಟ್ಟಿತು. ನಮ್ಮ ಜೀವಿತಗಳಿಗಾಗಿರುವ ಆತನ ಉಯಿಲು ಹೊಸ ಒಡಂಬಡಿಕೆಯಲ್ಲಿ ದಾಖಲಿಸಲ್ಪಟ್ಟಿರುತ್ತದೆ.

## ಅನ್ವಯಿಸುವಿಕೆ

### ಮೇಜು ಮತ್ತು ಅದರ ರೊಟ್ಟಿಗಳು (9:1, 2)

ಯೆಹೂದಿ ಯಾಜಕರು ಪ್ರತಿ ಸಬ್ಬತ್ ದಿನದಂದು ಸಮ್ಮುಖ ರೊಟ್ಟಿಗಳನ್ನು ಸೇವಿಸುತ್ತಿದ್ದರು. ಇದು ಪ್ರತಿ ಕರ್ತನ ದಿನದಂದು ಸಭೆಯು ಏನು ಮಾಡಬೇಕೆಂಬುದಕ್ಕೆ ಒಂದು ಮಾದರಿ ಆಗಿತ್ತೋ? ಮೊದಲನೆಯ ಶತಮಾನದ ಸಭೆಯು ಪ್ರತಿ ವಾರದ ಮೊದಲ ದಿನದಂದು ಕರ್ತನ ಭೋಜನವನ್ನು ಆಚರಿಸುತ್ತಿದ್ದರೆಂಬುದು ಶಾಸ್ತ್ರಗಳಿಂದ ಮತ್ತು ಎರಡನೆಯ ಶತಮಾನದ ಆಚಾರದಿಂದ ಸ್ಪಷ್ಟವಾಗಿ ಕಂಡು ಬರುತ್ತದೆ. ಅವರು "ವಾರದ ಮೊದಲನೆಯ ದಿವಸದಂದು ರೊಟ್ಟಿ ಮುರಿಯುವ ನಿಯಮಕ್ಕಾಗಿ ಕೂಡಿ ಬಂದರು" (ಅಪೊಸ್ತಲರ ಕೃತ್ಯಗಳು 20:7). ಪೌಲನು ಯೆರೂಸಲೇಮಿಗೆ ಹೋಗಬೇಕೆಂಬ ಅವಸರದಲ್ಲಿದ್ದಾಗ್ಯೂ, ಈ ಸದವಕಾಶಕ್ಕಾಗಿ ಆತನು ತ್ರೋವದಲ್ಲಿ ಏಳು ದಿನಗಳ ತನಕ ಕಾದುಕೊಂಡಿದ್ದನು (ಅಪೊಸ್ತಲರ ಕೃತ್ಯಗಳು 20:6, 16). ಆತನು ಏಕೆ ಏಳು ದಿನಗಳ ವರೆಗೆ ಕಾದುಕೊಂಡಿದ್ದನು? ಏಕೆಂದರೆ ಸಭೆಯವರು ಪಾಪಗಳಿಗೋಸ್ಕರ ರಕ್ತವನ್ನು ಸುರಿಸಿದ ಕ್ರಿಸ್ತನ ಮರಣವನ್ನು ಜ್ಞಾಪಿಸಿಕೊಳ್ಳುವದಕ್ಕಾಗಿ ಮೊದಲ ದಿನದಂದು ತಮ್ಮ ವಾಡಿಕೆಯಂತೆ ಕೂಡಿ ಬರುವದು ಸಭೆಯ ಪದ್ಧತಿಯಾಗಿದೆಯೆಂಬುದು ಆತನಿಗೆ ಗೊತ್ತಿತ್ತು (ಮತ್ತಾಯ 26:28). ಈ ಆಚರಣೆಯು ಸ್ವತಃ ಕರ್ತನಿಂದಲೇ ಆಜ್ಞಾಪಿಸಲ್ಪಟ್ಟದ್ದಾಗಿತ್ತು (1 ಕೊರಿಂಥ 11:23-25). ಸಭೆಯು ಕರ್ತನು ತಿರುಗಿ ಬರುವ ತನಕ ಆತನ ಜ್ಞಾಪಕಾರ್ಥವಾಗಿ ರಾತ್ರಿಭೋಜನವನ್ನು ಮಾಡಬೇಕಾಗಿರುವದು (11:26), ಆಗ ಕರ್ತನ ಭೋಜನದ ಅಗತ್ಯತೆಯು ಮಗಿದು ಹೋಗುವದು. ಇದನ್ನು ಕ್ರೈಸ್ತತ್ವದ ಅತ್ಯಂಥ ಶ್ರೇಷ್ಠವಾದ

ದಿನದಂದು – ಕರ್ತನು ಸತ್ತವರೊಳಗಿಂದ ಎಬ್ಬಿಸಲ್ಪಟ್ಟ ದಿನ - ಆಚರಿಸುವದು ಸ್ವಾಭಾವಿಕವಾಗಿರುತ್ತದೆ. ಕರ್ತನ ಭೋಜನವು ಆತನ ಯಜ್ಞದ (ಹಿಂದಿನ) ಮತ್ತು ಆತನ ಪುನರಾಗಮನ (ಭವಿಷ್ಯ) ಬಗ್ಗೆ ಒಂದು ನಿಯತಕ್ರಮವಾದ ಸ್ಮರಣೆ ಆಗಿರುತ್ತದೆ. ನಿತ್ಯತ್ವದ ವಿಷಯಗಳ ಮೇಲೆ ಗಮನವಿಟ್ಟವರಾಗಿ ಉಳಿಯುವಂತೆ ಸಹಾಯವಾಗುವದಕ್ಕೆ ಪ್ರತಿಯೊಬ್ಬ ಕ್ರೈಸ್ತನಿಗೆ ಇದು ಅಗತ್ಯವಿರುತ್ತದೆ.

1 ಕೊರಿಂಥ 11:20ರಲ್ಲಿ ಪೌಲನು ಹೀಗೆ ಹೇಳಿದನು, ". . . ನೀವೆಲ್ಲರು ಕೂಡಿಬರುವಾಗ ನೀವು ಮಾಡುವ ಭೋಜನವು ಕರ್ತನ ಭೋಜನವಲ್ಲ."[73] ಈ ಕ್ರೈಸ್ತರು ಕರ್ತನ ಭೋಜನಕ್ಕಾಗಿ ಕೂಡಿ ಬರುತ್ತಿದ್ದರು, ಆದರೆ ಅವರ ವಿಭಜಿತ ಸ್ಥಿತಿಯಲ್ಲಿ ಅದನ್ನು ಸಮರ್ಪಕವಾಗಿ ಆಚರಿಸುವದಕ್ಕೆ ಅಸಾಧ್ಯವಾಗಿರುತ್ತಿತ್ತು. ನಾವು ಹೊಸ ಒಡಂಬಡಿಕೆಯ ಸಭೆಯನ್ನು ಪುನಃಸ್ಥಾಪಿಸುತ್ತಿರುವದಾದಲ್ಲಿ, ಕರ್ತನ ಭೋಜನದ ಆಚರಣೆಯನ್ನು ಮುಂದುವರೆಸುವದು ಮತ್ತು ಅದನ್ನು ಸಮರ್ಪಕವಾಗಿ ಮಾಡುವದು ಇಂದು ನಮಗೆ ಅದಕ್ಕಿಂತ ಕಡಿಮೆ ಪ್ರಾಮುಖ್ಯವಾದದ್ದೋ?

## ತೆರೆಯ ಹಿಂದೆ Vs ಸಾರ್ವಜನಿಕ (9:3)

ಮಹಾಯಾಜಕನು ತೆರೆಯ ಮತ್ತು ಹೊಗೆಯ ಹಿಂದೆ ಮರೆಯಾಗಿ ತನ್ನ ಕೆಲಸವನ್ನು ನಡಿಸುತ್ತಿದ್ದನು. ಯೇಸುವು ಸ್ಪಷ್ಟವಾಗಿ ಕಾಣಿಸುವ ರೀತಿಯಲ್ಲಿ ಶಿಲುಬೆಗೆ ಹಾಕಲ್ಪಟ್ಟನು. ಎಲ್ಲರಿಗೂ ಅರ್ಥವಾಗುವ ರೀತಿಯಲ್ಲಿ ಆತನ ವಿರುದ್ಧವಾಗಿದ್ದ ದೋಷಾರೋಪವನ್ನು ಮೂರು ಭಾಷೆಗಳಲ್ಲಿ ಬರೆಯಿಸಲಾಗಿತ್ತು. ಆತನನ್ನು ಎಲ್ಲರ ಮುಂದೆ ಅಪಹಾಸ್ಯ ಮಾಡಲಾಯಿತು. ಆತನಿಗೆ ನಾವು ಪ್ರತಿಯಾಗಿ ತೋರುವ ಸ್ಪಂದನೆಯು ಸಹ ಎಲ್ಲರ ಮುಂದೆಯೇ ಆಗಿರಬೇಕು ಎಂಬುದನ್ನು ಇದು ಪ್ರತಿನಿಧಿಸುತ್ತದೋ? James T. Draper, Jr., ನು ಹಾಗೆಯೇ ಎಂದು ಭಾವಿಸುತ್ತಾನೆ:

> ದೇವರಿಗೆ ನಾವು ಮಾಡುವ ಸಮರ್ಪಣೆಗಳು ಸಾರ್ವಜನಿಕವಾಗಿರಬೇಕು ಎಂಬುದಕ್ಕೆ ಅದು ಒಂದು ಜ್ಞಾಪಕವಾಗಿರುತ್ತದೆ. . . . ಲೇವಿಕ ವ್ಯವಸ್ಥೆಯು ಮುಂದೆ ಮನುಷ್ಯರು ದೀಕ್ಷಾಸ್ನಾನದಲ್ಲಿ ಸಾರ್ವಜನಿಕವಾಗಿ ತಮ್ಮ ಹೃದಯಗಳನ್ನು ಕ್ರಿಸ್ತನಿಗೆ ಕೊಟ್ಟಿದ್ದಾರೆಂಬುದನ್ನು ಹೇಳುವಂತಹ ನಮ್ಮ ದಿನಕ್ಕೆ ಒಂದು ಪೂರ್ವಾನುಭವ ಅಲ್ಲದೆ ಮತ್ತೇನೂ ಅಲ್ಲ.[74]

ಯೇಸುವು ಸಾರ್ವಜನಿಕರ ಎದುರಿನಲ್ಲಿ ಯಜ್ಞ ಮಾಡಲ್ಪಟ್ಟ ಪ್ರಕಾರವೇ, ನಾವು ಸಹ ಆತನಿಂದ ರಕ್ಷಿಸಲ್ಪಡುವದಕ್ಕೆ ನಮ್ಮ ನಂಬಿಕೆಯನ್ನು ಸಾರ್ವಜನಿಕವಾಗಿ ಅರಿಕೆ ಮಾಡಬೇಕು (1 ತಿಮೊಥೆ 6:12-14; ರೋಮಾ 10:9, 10).

## ಕಲ್ಲಿನ ಹಲಿಗೆಗಳು ಮತ್ತು ಮನ್ನಾ (9:4)

ದಶಾಜ್ಞೆಗಳಿದ್ದ ಕಲ್ಲಿನ ಹಲಿಗೆಗಳು, ಜೊತೆಗೆ ಮಿಕ್ಕಿದ್ದ ಮನ್ನಾ ಇಡಲ್ಪಟ್ಟಿದ್ದ ಪಾತ್ರೆ (ಚಂಬು), ಇವುಗಳು ಅರಣ್ಯದಲ್ಲಿ ದೇವರು ತನ್ನ ಜನರ ಮೇಲೆ ತೋರಿಸಿದ ಪ್ರೀತಿಯ ಪೋಷಣೆಯ ಜ್ಞಾಪಕ ವಸ್ತುಗಳಾಗಿದ್ದವು. ಈಗ ಆತನು ನಮ್ಮ ಮೇಲೆ ಇಟ್ಟಿರುವ ಪ್ರೀತಿಯು ಆ ವಸ್ತುಗಳನ್ನು ಮೀರಿ ಹೋಗುವಂಥ ದಾರಿಗಳ ಮೂಲಕ ಜ್ಞಾಪಕದಲ್ಲಿ ಉಳಿಯುವಂತೆ ಮಾಡಲ್ಪಟ್ಟಿದೆ; ನಮಗೆ ಕ್ರಿಸ್ತನ ಮರಣವು ಇರುವದಾಗಿದ್ದು, ಅದು ಹಳೆಯ ಒಡಂಬಡಿಕೆಯ ಯಾವದೇ ಭೌತಿಕ ವಸ್ತುವನ್ನು ಮೀರಿಸುವಂಥದ್ದಾಗಿದೆ. ಕ್ರಿಸ್ತನು ಮರಣದಲ್ಲಿ ತೋರಿದ ಕ್ರಿಯೆಯ ಕಾರಣದಿಂದ, "ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೂಲಕ . . . ದೇವರಲ್ಲಿ ಹರ್ಷಗೊಳ್ಳುತ್ತೇವೆ" (ರೋಮಾ 5:11).

## ಗುಡಾರದ ಪ್ರತ್ಯೇಕಗೊಳಿಸುವಿಕೆ (9:6, 7)

ನಿಶ್ಚಯವಾಗಿಯೂ, ಪ್ರತಿಯೊಬ್ಬ ಕ್ರೈಸ್ತನು ಸಹ ದೇವರಿಗೆ ಸಮೀಪವಾಗಬೇಕೆಂದು ಬಯಸುತ್ತಾನೆ. ಅದನ್ನು ಹೇಗೆ ಮಾಡುವದೆಂದು ನಮಗೆ ಗೊತ್ತಿರುವದಿಲ್ಲ, ಆದರೆ ಹಳೆಯ ಒಡಂಬಡಿಕೆಯಡಿಯಲ್ಲಿ ಅದು ಎಲ್ಲಾ ನಿರ್ಬಂಧಗಳು ಹಾಗೂ ಇತಿಮಿತಿಗಳ ಕಾರಣದಿಂದಾಗಿ ಹೆಚ್ಚು ಕಡಿಮೆ ಅಸಾಧ್ಯವಾದ ಮಾತಾಗಿತ್ತು. ದೇವರೊಂದಿಗೆ ನಿಕಟ ಸಂಬಂಧವನ್ನಿಟ್ಟುಕೊಳ್ಳುವ ಸವಲತ್ತು ಕೆಲವೇ ಕೆಲವು ಜನರು ಮಾತ್ರವೇ ಆನಂದಿಸುವ ಸಂಗತಿಯಾಗಿತ್ತು. ಯಾಜಕರು ಮಾತ್ರವೇ ಆಲಯವನ್ನು ಪ್ರವೇಶಿಸಬಹುದಿತ್ತು. ಇದು ಜನರು ಅಶುದ್ಧರು, ನಾಶನಕ್ಕೊಳಗಾದ ಪಾಪಿಗಳು ಎಂಬ ಸತ್ಯವನ್ನು ಸ್ಪಷ್ಟವಾಗಿ ಗೋಚರಗೊಳಿಸುತ್ತದೆ. ಮಹಾಯಾಜಕನು ಸಹ ಒಬ್ಬ ಪಾಪಿಯಾಗಿದ್ದನು; ಆತನ ಪಾಪಗಳು ನಿವಾರಿಸಲ್ಪಡುವ ಹೊರತು (ಸಾಂಕೇತಿಕವಾಗಿ) ಆತನು ಅತಿಪವಿತ್ರ ಸ್ಥಳದೊಳಕ್ಕೆ ಪ್ರವೇಶಿಸಲು ಸಾಧ್ಯವಿರುತ್ತಿರಲಿಲ್ಲ. ದೇವರ ಸಮ್ಮುಖಕ್ಕೆ ಸಮೀಪವಾಗುವದಕ್ಕೆ ಪಾಪಿಗಳಿಗಿದ್ದ ಅಶಕ್ತತೆಯು ಒತ್ತಿ ಹೇಳಲ್ಪಟ್ಟಿದೆ, ದೋಷಪರಿಹಾರಕ ದಿನದಂದು ಸಹ ಅವರ ಘೋರವಾದ ಪಾಪವು ಅವರನ್ನು ದೇವರಿಂದ ಬಹಳ ದೂರವಾಗಿಡುತ್ತಿತ್ತು.

ಈ ಪರಿಸ್ಥಿತಿಯು ಧರ್ಮಶಾಸ್ತ್ರದಡಿಯಲ್ಲಿನ ಆರಾಧನೆಯಲ್ಲಿನ ಕೊರತೆಯನ್ನು ತೋರಿಸುತ್ತದೆ. ಯಾಜಕರು ಮತ್ತು ಇತರ ಆರಾಧಕರ ನಡುವಿನ ವ್ಯತ್ಯಾಸವು ಹೊಸ ಒಡಂಬಡಿಕೆಯಲ್ಲಿ ತೆಗೆದು ಹಾಕಲ್ಪಟ್ಟಿದೆ. ಪ್ರತಿಯೊಬ್ಬ ಪುರುಷನು ಸಾರ್ವಜನಿಕ ಆರಾಧನೆಯನ್ನು ನಡಿಸುವದರಲ್ಲಿ ಪಾಲ್ಗೊಳ್ಳುವದಕ್ಕೆ ಅರ್ಹನಾಗಿರುತ್ತಾನೆ. ಸ್ತ್ರೀಯರು ನಾಯಕತ್ವ ಪಾತ್ರಗಳಲ್ಲಿ ಅಲ್ಲದಿದ್ದಾಗ್ಯೂ, ಅವರಿಗೆ ಆರಾಧನೆಯಲ್ಲಿ ಪಾಲ್ಗೊಳ್ಳುವದಕ್ಕೆ ಅರ್ಹತೆಯಿರುತ್ತದೆ (ನೋಡಿರಿ 1 ತಿಮೊಥೆ 2:8-15). ಸಭೆಯಲ್ಲಿ ಸೇವೆಯ ವಿವಿಧ ಪಾತ್ರಗಳನ್ನಂತೂ ಹೊಂದಿದೆ – ಉದಾಹರಣೆಗೆ ಹಿರಿಯರು, ಸಭಾಸೇವಕರು, ಮತ್ತು ಸುವಾರ್ತಿಕರು – ಆದರೆ ಇವುಗಳಲ್ಲಿ ಯಾವದು ನಮ್ಮ ಹಾಗೂ ದೇವರ ನಡುವೆ ಮಧ್ಯಸ್ಥಿಕೆ ವಹಿಸುವಂಥವುಗಳಲ್ಲ. ಕೆಲವರು ಪೂರ್ಣಾವಧಿ ಸುವಾರ್ತಿಕರಾಗಿದ್ದು ಅವರ ಸಾರಭೂತವಾದ ಕೆಲಸವು ಉಪದೇಶಿಸುವದು ಅಥವಾ ಬೋಧಿಸುವದು, ಆದರೆ ಇದು ಉಪದೇಶ ಮತ್ತು ಬೋಧನೆಯನ್ನು ಮಾಡದಿರುವಂತೆ ಬೇರೆಯವರನ್ನು ತಡೆಯುವದಿಲ್ಲ. ಪ್ರತಿಯೊಬ್ಬ ಕ್ರೈಸ್ತನು ಪ್ರಾರ್ಥಿಸಬಹುದು, ಹಾಡಬಹುದು, ಕೊಡಬಹುದು, ಮತ್ತು ದೇವರಿಗೆ ಆರಾಧನೆ ಮಾಡುವದರಲ್ಲಿ ಕರ್ತನ ಭೋಜನದೊಳಗೆ ಪಾಲುಗಾರರಾಗಬಹುದು.

## ಪವಿತ್ರ ಸ್ಥಳಕ್ಕೆ ಮಾರ್ಗ (9:8)

ಜನರು ಅನೇಕ ಸಾರಿ ತಮಗೆ ಬೈಬಲ್ ಬಗ್ಗೆ ಇನ್ನಷ್ಟು ಹೆಚ್ಚು ತಿಳಿದುಕೊಳ್ಳಬೇಕೆಂಬ ಬಯಕೆಯಿದೆ ಎಂದು ಹೇಳುತ್ತಾರೆ; ಆದರೆ ಅವರು ಶಾಸ್ತ್ರಾಧರಿತ ಪುಸ್ತಕಗಳನ್ನು ಓದುವದಿಲ್ಲ, ಆಳವಾದ ಬೈಬಲ್ ತರಗತಿಗಳಿಗೆ ಹೋಗುವದಿಲ್ಲ, ಅಥವಾ ಪ್ರಸಂಗಗಳನ್ನು ಜಾಗ್ರತೆಯಿಂದ ಕೇಳಿಸಿಕೊಳ್ಳುವದಿಲ್ಲ. ಬಹಳಷ್ಟು ಜನರು ಜಾಗರೂಕವಾದ ಅಧ್ಯಯನದ ಬೆಲೆಯನ್ನು ತೆತ್ತದೆ ದೇವರನ್ನು ತಿಳಿದುಕೊಳ್ಳಬೇಕೆಂದು ಬಯಸುತ್ತಾರೆ. ಯೇಸು ಹೀಗೆ ಹೇಳಿದನು, "ಆದದರಿಂದ ನೀವು ಹೇಗೆ ಕಿವಿಗೊಡಬೇಕೋ ನೋಡಿಕೊಳ್ಳಿರಿ" (ಲೂಕ 8:18). ನಾವು ಸ್ವಂತವಾಗಿ ಯಾವದೇ ತ್ಯಾಗಗಳನ್ನು ಮಾಡದೆಯೇ ದೇವರ ಸನ್ನಿಧಿಯೊಳಗೆ ಕರೆದೊಯ್ಯಲ್ಪಡುವದಕ್ಕೆ ಮತ್ತು ದೇವರನ್ನು ಸಂಧಿಸುವದಕ್ಕೆ ಬಯಸುತ್ತೇವೆ, ಆದರೆ ಅದು ಅಷ್ಟು ಸುಲಭವಾದದ್ದಲ್ಲ. ದೇವರ ವಾಕ್ಯವನ್ನು ಶ್ರದ್ಧೆಯಿಂದ ಕಲಿಯುವದಕ್ಕೆ ತನ್ನನ್ನು ಅನ್ವಯಿಸಿಕೊಳ್ಳುವವನು "ದೇವರನ್ನು

ಕಂಡುಕೊಳ್ಳುವಂತೆ ನನಗೆ ಸಹಾಯ ಮಾಡಬಲ್ಲಿರಾ?" ಎಂದು ಕೇಳುವದಿಲ್ಲ ಯಾಕೆಂದರೆ ಆತನು ಈಗಾಗಲೇ ಆತನನ್ನು ಕಂಡುಕೊಂಡಿರುತ್ತಾನೆ. ಅನೇಕ ಶಾಸ್ತ್ರದ ವಚನಗಳನ್ನು ಕಂಠಪಾಠ ಮಾಡುವವರು ಯಾವಾಗಲೂ ಅತ್ಯಂಥ ಭಕ್ತಿಯುಳ್ಳ ಜನರಾಗಿ ಇಲ್ಲದಿರಬಹುದು, ಆದರೆ ತನ್ನ ಪ್ರಸ್ತುತ ಪರಿಸ್ಥಿತಿಗೆ ಅಥವಾ ಶೋಧನೆಗೆ ಸರಿಹೊಂದುವಂತಹ ವಾಕ್ಯಭಾಗದ ಬಗ್ಗೆ ಯೋಚಿಸುವದಕ್ಕೆ ಶಕ್ತನಾದವನು ದೇವರಿಗೆ ಹೇಗೆ ಹತ್ತಿರವಾಗಿರಬೇಕು ಎಂಬುದರ ಗ್ರಹಿಕೆಯನ್ನು ಜಾಗ್ರತೆಯಿಂದ ಅಧ್ಯಯನ ಮಾಡದ ಅಥವಾ ಕೇಳಿಸಿಕೊಳ್ಳದ ವ್ಯಕ್ತಿಗಿಂತಲೂ ಎಷ್ಟೋ ಹೆಚ್ಚಾಗಿ ಹೊಂದಿರುವನೆಂದು ನನಗೆ ಮನವರಿಕೆಯಾಗಿರುತ್ತದೆ. ಒಬ್ಬ ಸ್ತ್ರೀಯು ಒಮ್ಮೆ ಬೋಧಕನಿಗೆ ಹೀಗೆ ಹೇಳಿದಳು, "ನಿನ್ನ ರೀತಿಯಲ್ಲಿಯೇ ಬೈಬಲ್ ತಿಳಿದುಕೊಳ್ಳುವದಕ್ಕೆ ನನ್ನ ಅರ್ಧ ಜೀವನವನ್ನೇ ಕೊಡುವೆನು." ಆತನು ಪ್ರತ್ಯುತ್ತರವಾಗಿ ಹೀಗೆ ಹೇಳಿದನು, "ಒಳ್ಳೇದು ಸಹೋದರಿಯೇ, ಅದಕ್ಕೆ ಸರಿಯಾಗಿ ಅದೇ ಬೆಲೆಯನ್ನು ತೆತ್ತಬೇಕಾಗಿರುತ್ತದೆ." ನಾವು ಎಂದಿಗೂ ಶಾಸ್ತ್ರಗಳನ್ನು ಅಧ್ಯಯನ ಮಾಡುವದಕ್ಕಾಗದಷ್ಟು ಕೆಲಸಗಳಲ್ಲಿ ನಿರತರಾಗಬಾರದು. ಇದಕ್ಕಿಂತ ಘೋರವಾದ ಸ್ಥಿತಿಯು ಒಬ್ಬ ಸಭಾ ನಾಯಕನು ಹೀಗೆ ಹೇಳುವದರಲ್ಲಿ ತೋರ್ಪಡಿಸಲ್ಪಟ್ಟಿತು, ಏನೆಂದರೆ "ನಾವು ಬೈಬಲಿನ ವಾಕ್ಯವನ್ನು ಅಧ್ಯಯನ ಮಾಡುವ ಅಗತ್ಯವಿಲ್ಲ, ಅದು ನಮಗೆ ಗೊತ್ತದೆ." ಒಬ್ಬನು "ಯೋಗ್ಯನಾಗಿ ಕಾಣಿಸಿಕೊಳ್ಳುವದಕ್ಕೆ" "ಅಧ್ಯಯನ" (KJV) ಮಾಡಬೇಕು, ಅಥವಾ "ಪ್ರಯಾಶಪಡಬೇಕು" (2 ತಿಮೊಥೆ 2:15). "ಸತ್ಯವಾಕ್ಯವನ್ನು" ಹೇಗೆ ನಿಭಾಯಿಸಬೇಕೆಂಬದನ್ನು ಕಲಿಯುವದಕ್ಕೆ ಪ್ರಯಶ ಪಡುವಿಕೆಯು ಅವಶ್ಯಕವಾಗಿರುತ್ತದೆ. ನಾವು ಅದನ್ನು ಎಂದಿಗೂ ಸಂಪೂರ್ಣವಾಗಿ ಅರಿತುಕೊಳ್ಳಲಾರೆವು; ಆದರೆ ವಾಕ್ಯವನ್ನು ಹೆಚ್ಚೆಚ್ಚಾಗಿ ಕಲಿತುಕೊಳ್ಳುವ ಮೂಲಕ, ನಾವು ಕೃಪಾಸನಕ್ಕೆ ಹೆಚ್ಚು ಹತ್ತಿರವಾಗಬಲ್ಲೆವು (ಇಬ್ರಿಯ 4:15, 16).

ದೇವರ ಸಂಗಡ ನಿಕಟವಾದ ಸಂಬಂಧಕ್ಕಾಗಿ ನಮಗೆ ಅಗತ್ಯವಿರುವದೆಲ್ಲವೂ ಕ್ರಿಸ್ತನಲ್ಲಿ ಒದಗಿಸಲ್ಪಟ್ಟಿದೆ (ಮತ್ತಾಯ 6:33; ಫಿಲಿಪ್ಪಿ 4:10-14). ನಾವು ದೇವರಿಗೆ ಆಪ್ತರಾಗಿ ಬೆಳೆಯುವದಕ್ಕೆ ಆತನನ್ನು ಆತ್ಮದಲ್ಲಿಯೂ ಸತ್ಯದಲ್ಲಿಯೂ ಆರಾಧಿಸುವದಕ್ಕೆ ಬಯಸುತ್ತೇವೆ. ಜನರು "ಆತ್ಮದಲ್ಲಿಯೂ ಸತ್ಯದಲ್ಲಿಯೂ" ಆರಾಧಿಸಬೇಕೆಂಬುದು ದೇವರ ಬಯಕೆಯಾಗಿದೆ ಎಂಬುದನ್ನು ಯೇಸು ಸಮಾರ್ಯದ ಸ್ತ್ರೀಗೆ ಹೇಳಿದನು (ಯೋಹಾನ 4:23, 24). ದೇವರನ್ನು ಕಂಡುಕೊಳ್ಳುವದಕ್ಕೆ ದಾರಿಯು ಕ್ರಿಸ್ತನು ಅರ್ಪಿಸಿದ ಯಜ್ಞವನ್ನು ಅಂಗೀಕರಿಸುವದರ ಮೂಲಕವೇ ಎಂಬುದಾಗಿ ಇಬ್ರಿಯರಿಗೆ ಪತ್ರಿಕೆಯು ಜನರಿಗೆ ಹೇಳುತ್ತದೆ.

## ಹಳೆಯ ಒಡಂಬಡಿಕೆಯ ಸಂಕೇತಗಳು (9:10)

ಬೈಬಲಿನಲ್ಲಿರುವ ಮಾದರಿಗಳು ಹಾಗೂ ಪ್ರತಿಮಾದರಿಗಳ ಕುರಿತ ಪಾಠಗಳು ಒಂದು ಕಾಲದಲ್ಲಿ ನಿಯತಕ್ರಮವಾಗಿ ತರಗತಿಗಳಲ್ಲಿ ಕೇಳಿಸಿಕೊಳ್ಳಲ್ಪಡುತ್ತಿದ್ದವು. ಅದೊಂದು ಅದ್ಭುತವಾದ ನಂಬಿಕೆಯನ್ನು ವೃದ್ಧಿಪಡಿಸುವ ಅನುಭವವಾಗಬಹುದು – ಹಳೆಯ ಒಡಂಬಡಿಕೆಯು ಹೇಗೆ ಹೊಸ ಒಡಂಬಡಿಕೆಯಲ್ಲಿ ಸಮರಸವಾಗಿ ಬೆರೆತುಕೊಳ್ಳುವದಾಗಿ ಎರಡೂ ಒಬ್ಬನೇ ದೇವರಿಂದಲೂ ಒಬ್ಬನೇ ಆತ್ಮನಿಂದಲೂ ಬಂದವುಗಳೆಂಬ ಸ್ಪಷ್ಟವಾದ ಸಂದೇಶವನ್ನು ಕೊಡುತ್ತದೆಂಬುದನ್ನು ನೋಡುವದು ಅದ್ಭುತವಾದ ಅನುಭವವಾಗಿದೆ. ಹೇಗೂ, ಹಳೆಯ ಒಡಂಬಡಿಕೆಯ ಇತಿಹಾಸದಲ್ಲಿ ನಡೆದ ಪ್ರತಿಯೊಂದು ಘಟನೆ ಅಥವಾ ಧರ್ಮಶಾಸ್ತ್ರದಡಿಯಲ್ಲಿ ದೇವರ ಆರಾಧನೆಯ ಪ್ರತಿಯೊಂದು ಅಂಶದಲ್ಲಿಯೂ ವಿಲಕ್ಷಣವಾದ ಕಲ್ಪನೆಗಳನ್ನು ಸೃಷ್ಟಿಸಕೂಡದು. ಈ ಅಪಾಯವನ್ನು Philip Edgcumbe Hughesನು ಉತ್ತಮವಾಗಿ ವಿವರಿಸುತ್ತಾನೆ: ". . . ಸಂಕೇತಶಾಸ್ತ್ರೀಕವಾದ ಮಹತ್ವಗಳನ್ನು ಹುಡುಕುವದರಲ್ಲಿ ತಪ್ಪೇನಿಲ್ಲ.

ಆದರೆ ಕೆಲವೊಂದು ಇತಿಮಿತಿಗಳನ್ನು ಇಟ್ಟುಕೊಳ್ಳತಕ್ಕದ್ದು, ಇಲ್ಲವಾದರೆ ಒಂದು ಫಲವತ್ತಾದ ಕಲ್ಪನೆಯು ಎಲ್ಲಾ ವಿಧವಾದ ಅಳತೆ ಮೀರಿದ ಅರ್ಥನಿರೂಪಣೆಗಳಿಗೆ ನಡಿಸಬಲ್ಲದು, ಮತ್ತು ಬಹಳಷ್ಟು ಸಾರಿ ನಡಿಸಿರುತ್ತದೆ."[75]

ಒಂದು ಸಮೃದ್ಧವಾದ ಅಧ್ಯಯನ ಮಾಡುವದಕ್ಕೆ ಶಾಸ್ತ್ರಗಳಲ್ಲಿ ಸಾಕಷ್ಟು ಸೂಚಿಸಲ್ಪಟ್ಟಿರುತ್ತದೆ. ಯೆಶಾಯ 7ನೇ ಅಧ್ಯಾಯದಲ್ಲಿ ಮುಂತಿಳಿಸಲ್ಪಟ್ಟ ಒಂದು ಮಗುವಿನ ಜನನವು ಯೆಹೂದದ ಬಿಡುಗಡೆಯನ್ನು ಸೂಚಿಸಿತು ಮತ್ತು ಕ್ರಿಸ್ತನ ಕನ್ಯೆಯಲ್ಲಿನ ಜನನದ ಕಡೆಗೆ ಬೆರಳು ತೋರಿಸುವ ಒಂದು ದೊಡ್ಡದಾದ, ಎರಡನೆಯ ಅರ್ಥವನ್ನು ಹೊಂದಿತ್ತು (ಯೆಶಾಯ 7:14; ಮತ್ತಾಯ 1:20-23). ಯೇಸುವು ಒಬ್ಬ ವಿಮೋಚಕನೆಂಬುದಕ್ಕೆ ಮೋಶೆಯು ಮಾದರಿಯಾಗಿದ್ದನು (ಅಪೊಸ್ತಲರ ಕೃತ್ಯಗಳು 7:37; ಧರ್ಮೋಪದೇಶಕಾಂಡ 18:15-18). ಇಸಾಕನನ್ನು ಯಜ್ಞವಾಗಿ ಅರ್ಪಿಸುವಿಕೆಯು ಕ್ರಿಸ್ತನಿಗೆ ಮತ್ತು ಆತನ ಪುನರುತ್ಥಾನದ ಕಡೆಗೆ ಬೆರಳು ತೋರಿಸಿತೆಂಬುದಾಗಿ ಇಬ್ರಿಯರಿಗೆ ಪತ್ರಿಕೆಯಲ್ಲಿ ಸುಳಿವು ನೀಡಲಾಗಿರುತ್ತದೆ (ಇಬ್ರಿಯ 11:17-19). ಯಾವ ಮಾದರಿಯೂ ಪ್ರತಿಯೊಂದು ವಿವರದಲ್ಲಿ ಹೊಸ ಒಡಂಬಡಿಕೆಯಲ್ಲಿನ ನೆರವೇರಿಕೆಯಂತೆಯೇ ಆಗಿರುವದಿಲ್ಲ ಎಂಬುದನ್ನು ಮನಸ್ಸಿನಲ್ಲಿಟ್ಟುಕೊಳ್ಳಿರಿ. ನಾವು ಮಹತ್ವಪೂರ್ಣತೆಯ ಮೇಲೆ, ಹೋಲಿಕೆ ಮಾಡಬಹುದಾದ ಅಂಶಗಳ ಮೇಲೆ ಮುಖ್ಯ ಗಮನವನ್ನು ಹರಿಸಬೇಕು.

ಆ ಎಚ್ಚರಿಕೆಯನ್ನು ಗಮನಕ್ಕೆ ತೆಗೆದುಕೊಂಡವರಾದ ಬಳಿಕ, ಹೇಗೂ, ಒಬ್ಬನು ಆರಾಧಿಸುವದಕ್ಕಾಗಿ ಗುಡಾರವನ್ನು ಪ್ರವೇಶಿಸುವದಕ್ಕೆ ಮುಂದೆ ಯಜ್ಞವನ್ನು ಅರ್ಪಿಸುವಿಕೆ ಮತ್ತು ಸಭೆಯಲ್ಲಿ ಭಾಗವಾಗುವದಕ್ಕೆ ಮುಂಚೆ ಪಶ್ಚಾತ್ತಾಪ ಪಡುವಿಕೆ ಇವುಗಳ ನಡುವೆ ಇರುವ ಗಮನ ಸೆಳೆಯುವಂತ ಸಮಾನಾತೆಯನ್ನು ಕಾಣಬಲ್ಲೆವು. ಯಾಜಕನು ಗಂಗಾಳದಲ್ಲಿನ ನೀರಿನಲ್ಲಿ ತೊಳೆದುಕೊಳ್ಳುವದು ಒಬ್ಬನು ಹೊಸ ಒಡಂಬಡಿಕೆಯ ಯಾಜಕನಾಗುವದಕ್ಕೆ ನೀರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವದರ ಚಿತ್ರಣವಾಗಿರುತ್ತದೆ. ಪ್ರತಿ ವಾರ ಪವಿತ್ರ ರೊಟ್ಟಿಯನ್ನು ತಿನ್ನುವದು ನಾವು ಪ್ರತಿ ವಾರವೂ ಕರ್ತನ ಭೋಜನ ಆಚರಿಸುವದನ್ನು ಸೂಚಿಸುತ್ತದೆ, ಮತ್ತು ಅತಿಪವಿತ್ರ ಸ್ಥಳವನ್ನು ಪ್ರವೇಶಿಸುವದಕ್ಕೆ ಹೊರಗಿನ ಅಂಗಳವನ್ನು ದಾಟಿಕೊಂಡು ಹೋಗುವದು ಪರಲೋಕವನ್ನು ಪ್ರವೇಶಿಸುವದಕ್ಕಾಗಿ ಸಭೆಯನ್ನು ಪ್ರವೇಶಿಸುವದಕ್ಕೆ ಪೂರ್ವಛಾಯೆಯಾಗಿರುತ್ತದೆ. ಇವುಗಳು ಸುಂದರವಾದ ಸಾದೃಶ್ಯಗಳಾಗಿವೆ; ಆದರೆ ಬೈಬಲಿನಲ್ಲಿ ಪ್ರಕಟಿಸಲ್ಪಟ್ಟಿರುವ "ಮಾದರಿಗಳು" ಮತ್ತು ನಮ್ಮ ಸ್ವಂತ ಸಾದೃಶ್ಯಗಳ ನಡುವೆ ಭೇದ ಮಾಡತಕ್ಕದ್ದು. ಸಿದ್ಧಾಂತಗಳು ಮಾದರಿ ಮತ್ತು ಸಾದೃಶ್ಯಗಳ ಮೂಲಕ ದೃಷ್ಟಾಂತಪಡಿಸಲ್ಪಡಬಹುದು, ಆದರೆ ಅದು ಅವುಗಳ ಮೇಲೆ ಆಧಾರಗೊಳಿಸಲ್ಪಡಕೂಡದು. ನಮ್ಮ ಸಿದ್ಧಾಂತಗಳನ್ನು ಹೊಸ ಒಡಂಬಡಿಕೆಯ ಸ್ಪಷ್ಟವಾಗಿರುವ ವಾಕ್ಯಭಾಗಗಳಿಂದ ತೆಗೆದುಕೊಳ್ಳೋಣ, ಮತ್ತು ನಾವು ಹೇಳಲಿಚ್ಛಿಸುವದಕ್ಕೆ ಉದಾಹರಣೆಯಾಗಿ ಸಾದೃಶ್ಯಗಳನ್ನು ಬಳಸೋಣ.

## ಕುಡಿತದ ಬಗ್ಗೆ ಯಾವ ನಿಯಮವು ಇಲ್ಲ? (9:10)

ಕೆಲವರು ಹಳೆಯ ಒಡಂಬಡಿಕೆಯ ಅಡಿಯಲ್ಲಿ ನಾಜೀರರ ಹರಕೆಯನ್ನು ಮಾಡಿದವರನ್ನು (ಅವರು ದ್ರಾಕ್ಷಾರಸವನ್ನು ಕುಡಿಯುವದಿಲ್ಲ; ಅರಣ್ಯಕಾಂಡ 6:2-21) ಹೊರತು ಪಡಿಸಿ ಕುಡಿತದ ಬಗ್ಗೆ ಯಾವ ನಿಯಮಗಳು ಇರುವದಿಲ್ಲ ಎಂದು ಯೋಚಿಸುತ್ತಾರೆ. ಇದು ಸಂಪೂರ್ಣವಾಗಿ ಸತ್ಯವಲ್ಲ. ನಾದಾಬ್ ಮತ್ತು ಅಬೀಹು ಎಂಬವರು ಧೂಪಾರತಿಗಳಲ್ಲಿ ಅಧಿಕೃತವಲ್ಲ

ಬೆಂಕಿಯನ್ನಿಡುವ ಮೂಲಕ ದೇವರ ಕಟ್ಟಳೆಗಳನ್ನು ಉಲ್ಲಂಘಿಸಿದ ಸ್ವಲ್ಪ ಸಮಯದ ಬಳಿಕ (ಯಾಜಕಕಾಂಡ 10:1-3), ದ್ರಾಕ್ಷಾ ರಸ ಅಥವಾ ಮದ್ಯವನ್ನಾಗಲಿ ಕುಡಿಯಬಾರದೆಂಬ ನಿಯಮವು ಕೊಡಲ್ಪಟ್ಟಿತು. ಗುಡಾರದ ಸಮೀಪಕ್ಕೆ ಬರುವವು ದೇವರನ್ನು ಗಾಢವಾಗಿ ಗೌರವಿಸಬೇಕು ಮತ್ತು "ಪರಿಶುದ್ಧ" ಎಂದು ಎಣಿಸಬೇಕೆಂದು ಮೋಶೆಯು ಹೇಳುತ್ತಾನೆ (10:3-7). ನಾದಾಬ ಮತ್ತು ಅಬೀಹುರನ್ನು ಅವರ ಅಚಾತುರ್ಯಕ್ಕಾಗಿ ಕರ್ತನಿಂದ ಬಂದ ಬೆಂಕಿಯು ಧಹಿಸಿ ಬಿಟ್ಟಿತು, ಮತ್ತು ಆರೋನನು ಅವರ ಸಾವಿಗಾಗಿ ದುಃಖವನ್ನು ಸಹ ಪಡಬಾರದಿತ್ತು (ಯಾಜಕಕಾಂಡ 10:1-7).

ನಂತರ, ಸೇವೆ ಮಾಡುತ್ತಿರುವ ಯಾಜಕರ ಕುರಿತು ದೇವರು ಒಂದು ಹೊಸದಾಗಿರುವ ನಿಯಮವನ್ನು ಕೊಟ್ಟನು. ಅವರು ದೇಶದರ್ಶನದ ಗುಡಾರದ ಬಳಿಯಲ್ಲಿ ಸೇವೆ ಮಾಡುವ ವೇಳೆಯಲ್ಲಿ "ದ್ರಾಕ್ಷಾರಸವನ್ನಾಗಲಿ ಮದ್ಯವನ್ನಾಗಲಿ ಕುಡಿದು" ಬರಬಾರದು ಎಂಬದೆ (ಯಾಜಕಕಾಂಡ 10:8-11). ಇದರಿಂದ ಪರೋಕ್ಷವಾಗಿ ಸೂಚಿತವಾಗುವದೇನೆಂದರೆ ನಾದಾಬ ಮತ್ತು ಅಬೀಹು ಅಪ್ಪಣೆ ಕೊಟ್ಟಿರದಂತಹ ವಸ್ತುವನ್ನು ಆರಾಧನೆಯಲ್ಲಿ ಬಳಸುವಷ್ಟು ಮೂರ್ಖರಾಗಿದ್ದಾಗ ಕುಡಿತದಲ್ಲಿದ್ದರು ಎಂಬದೆ. ಯಾವ ಯಾಜಕನೂ ಕುಡಿದವನಾಗಿ ಸೇವೆಯನ್ನು ಮಾಡಬೇಕೆಂಬ ಸಾಮಾನ್ಯ ಪರಿಜ್ಞಾನ ಮತ್ತು ದೇವರ ಭಯವು ಅವರಿಗಿರಬೇಕಿತ್ತು. ದೇವರ ಕಟ್ಟಳೆಯನ್ನು ಮೀರುವದಕ್ಕೆ ಅಮಲೇರಿರುವದು ಒಂದು ನೆಪವಾಗಿರಲಿಕ್ಕೆ ಸಾಧ್ಯವಿಲ್ಲ; ಅವರು ಅಪರಾಧ ಮಾಡಿದ್ದರು.

ಇಂದು ಸಹ ಅದೇ ನಿಮಯವು ಅನ್ವಯವಾಗುತ್ತದೆ. ಉದಾಹರಣೆಗೆ, ಒಬ್ಬ ಕುಡಿಕ ಚಾಲಕನು ತನ್ನ ವಾಹನದಿಂದ ಒಬ್ಬನನ್ನು ಕೊಲ್ಲುವದಾದರೆ ಆತನನ್ನು ಹೊಣೆಗಾರರನ್ನಾಗಿ ಮಾಡತಕ್ಕದ್ದು. ಆತನು ಕುಡಿಯುವದಕ್ಕಾರಂಭಿಸುವ ಮುನ್ನ, ಆತನಿಗೆ ಮುಂದೆ ಏನಾಗಬಹುದೆಂಬ ಪ್ರಜ್ಞೆಯು ಇತ್ತು.

### ಕ್ರಿಸ್ತನಿಗಾಗಿ ಅತ್ಯಂತ ಮಹಾನ್ ದಿನ (9:11, 12)

ತನ್ನ ಮರಣದ ವೇಳೆಯಲ್ಲಿ, ಕರ್ತನು ಮೂವತ್ತು ವರ್ಷಗಳಿಂದ ತನ್ನ ತಂದೆಯ ಸಮ್ಮುಖದಿಂದ ದೂರಕ್ಕೆ ಹೋಗಿದ್ದವನಾಗಿದ್ದನು. ಈಗ, ನಮ್ಮ ವಿಮೋಚನೆಯನ್ನು ಸಂಪಾದಿಸಿಕೊಳ್ಳಲು ತನ್ನ ರಕ್ತವನ್ನು ಸುರಿಸಿದವನಾಗಿ, ಆತನು ಮಹಿಮೆಯಲ್ಲಿ ಪರಲೋಕಕ್ಕೆ ಹಿಂದಿರುಗಲು ಶಕ್ತನಾಗಿದ್ದನು. ದೇವದೂತರು ಹೇಗೆ ಹರ್ಷಿಸಿರಬಹುದು ಮತ್ತು ಸಂಭ್ರಮದಿಂದ ಕೂಗಿರಬಹುದು! ಕ್ರಿಸ್ತನು ಭೂಮಿಯ ಮೇಲಿನ ತನ್ನ ಧ್ಯೇಯವನ್ನು ಪೂರ್ತಿಗೊಳಿಸಿ ಪರಲೋಕಕ್ಕೆ ಹಿಂದಿರುಗಿದ್ದು ಕೀರ್ತನೆ 24ರಲ್ಲಿ ಸಾಂಕೇತಿಕವಾಗಿರಬಹುದಾಗಿದೆ:

> ದ್ವಾರಗಳೇ, ಉನ್ನತವಾಗಿರ್ರಿ;
> ಪುರಾತನ ಕದಗಳೇ, ತೆರೆದುಕೊಂಡಿರ್ರಿ
> ಮಹಾಪ್ರಭಾವವುಳ್ಳ ಅರಸನು ಆಗಮಿಸುತ್ತಾನೆ.
> ಮಹಾಪ್ರಭಾವವುಳ್ಳ ಈ ಅರಸನು ಯಾರು?
> ಮಹಾ ಬಲಿಷ್ಠನೂ ವಿಶೇಷ ಪರಾಕ್ರಮಿಯೂ ಆಗಿರುವ ಯೆಹೋವ,
> ಯುದ್ಧವೀರನಾಗಿರುವ ಯೆಹೋವ.
> ದ್ವಾರಗಳೇ, ಉನ್ನತವಾಗಿರ್ರಿ;
> ಪುರಾತನ ಕದಗಳೇ, ತೆರೆದುಕೊಂಡಿರ್ರಿ;
> ಮಹಾಪ್ರಭಾವವುಳ್ಳ ಅರಸನು ಆಗಮಿಸುತ್ತಾನೆ.

ಮಹಾಪ್ರಭಾವವುಳ್ಳ ಈ ಅರಸನು ಯಾರು?
ಸೇನಾಧೀಶ್ವರನಾದ ಯೆಹೋವನೇ;
ಮಹಾಪ್ರಭಾವವುಳ್ಳ ಅರಸನು ಈತನೇ (ವಚನಗಳು 7-10).

ಯೇಸು ನಿಜವಾದ ಮತ್ತು ಮಹಿಮೆಯುಳ್ಳ ದೇವದರ್ಶನ ಗುಡಾರವನ್ನು, ಸ್ವತಃ ದೇವರ ನಿವಾಸ ಸ್ಥಳವನ್ನೇ ಪ್ರವೇಶಿಸಿದನು. ಬೈಬಲಿನ ರೂಪಕಗಳನ್ನು ಅನುಗುಣವಾಗಿ, ಆತನು ಎಲ್ಲಾ ನಿಜವಾದ ಕರುಣೆಯು ಬರುವಂತಹ ತಂದೆಯ ಕೃಪಾಸಿಂಹಾಸನದ ಮೇಲೆ ರಕ್ತವನ್ನು ಪ್ರೋಕ್ಷಿಸುವವನಾಗಿ ನಾವು ಆತನನ್ನು ಚಿತ್ರಿಸಿಕೊಳ್ಳಬಹುದು. ತಂದೆಯ ಪ್ರತಿಕ್ರಿಯೆಯು "ನಾನು ಅವರ ಪಾಪವನ್ನು ನನ್ನ ನೆನಪಿಗೆ ಎಂದಿಗೂ ತರುವದಿಲ್ಲ" ಎಂದಾಗಿರುತ್ತದೆ (ಯೆರೆಮೀಯ 31:34). ದೇವಾಯಲದ ಹೊರಗೆ ನಿಂತುಕೊಂಡು ಮಹಾಯಾಜಕನು ಹೊರಗೆ ಬರುವದನ್ನು ಕಾಯುತ್ತಾ ಇರುವದು ಪರಲೋಕದಲ್ಲಿನ ಈ ದೃಶ್ಯಕ್ಕೆ ಸರಿಸಾಟಿಯಾಗಲಿಲ್ಲ!

## ನಾವು ಅಪರಾಧದಲ್ಲಿಯೇ ಉಳಿಯಬೇಕಾದ ಅಗತ್ಯವಿಲ್ಲ (9:11, 12)

ನಾವು ಇನ್ನು ಮೇಲೆ ದೇವರಿಂದ ಅಂತರದಲ್ಲಿ ಇಡಲ್ಪಟ್ಟವರಲ್ಲ, ಆದರೆ ಈಗ ನಾವು ನಂಬಿಕೆಯಲ್ಲಿ ಆತನೊಂದಿಗೆ ನಿಕಟವಾಗಿದ್ದೇವೆ. ಆತನು ದೂರದಲ್ಲಿದ್ದಾನೆಂದು ಯೋಚಿಸುವದಕ್ಕೆ (ಅಪೊಸ್ತಲರ ಕೃತ್ಯಗಳು 17:27, 28) ಅಥವಾ ಅಪರಾಧ ಭಾವನೆಯಲ್ಲಿರುವದಕ್ಕೆ ಕ್ರೈಸ್ತರಿಗೆ ಯಾವ ಕಾರಣವೂ ಇರುವದಿಲ್ಲ. ಯೇಸುವಿನ ವಿಮೋಚನಾತ್ಮಕ ರಕ್ತದಿಂದ ನಮ್ಮ ಅಪರಾಧವು ನಿವಾರಿಸಲ್ಪಟ್ಟಿದೆ! ನಾವು, ಪೌಲನ ರೀತಿಯಲ್ಲಿ ಆಂತರ್ಯದಲ್ಲಿ ನಮ್ಮನ್ನು ಪಾಪಿಗಳಲ್ಲಿ ಮುಖ್ಯವಾದವರು ಎಂದು ಪರಿಗಣಿಸಿಕೊಂಡಾಗ್ಯೂ (1 ತಿಮೊಥೆ 1:15), ಸಂತೋಷದಿಂದ ಹಾಡಬಲ್ಲೆವು. ಪೌಲನು ಯೇಸುವಿನ ಭವಿಷ್ಯದ ಧ್ಯೇಯಕ್ಕಾಗಿ ಪರಿಶ್ರಮ ಪಟ್ಟನು, ಹಿಂದಿನದನ್ನು "ಮರೆತು ಬಿಟ್ಟು" ಮುಂದಿನದನ್ನು ಹಿಡಿಯುವದಕ್ಕೆ ಓಡುವವನಾಗಿದ್ದನು (ಫಿಲಿಪ್ಪಿ 3:12-16). ದಮಸ್ಕದ ದಾರಿಯಲ್ಲಿ ಯೇಸುವನ್ನು ನೋಡಿದ ಬಳಿಕ (ಅಪೊಸ್ತಲರ ಕೃತ್ಯಗಳು 9; 22; 26), ಆತನ ಇಡೀ ಜೀವನವು ಒಂದು ವಿರೋಧಾಭಾಸವಾಗಿತ್ತು: ಆತನು ಒಬ್ಬ ಕ್ಷಮಿಸಲ್ಪಟ್ಟ, ರಕ್ಷಣೆ ಹೊಂದಿದ್ದ, ವಿಮೋಚಿಸಲ್ಪಟ್ಟ ಪಾಪಿಯಾಗಿದ್ದನು. ಆತನು ತಾನು ಹಿಂದೆ ಮಾಡಿದ ಮೂರ್ಖತನದ ಪ್ರಮಾದಗಳನ್ನು ಗುರುತಿಸಿಕೊಂಡಿದ್ದನು; ಆದರೆ ತನ್ನ ಪರವಾಗಿ ಕ್ರಿಸ್ತನು ಮಾಡಿದ ಕಾರ್ಯದಿಂದಾಗಿ, ಹಿಂದಿನ ಪಾಪಗಳು ಆತನನ್ನು ಹತಾಶೆಯೊಳಗೆ ಎಳೆದೊಯ್ಯುವಂತೆ ಆತನು ಅವಕಾಶವನ್ನು ಕೊಡಲಿಲ್ಲ (ಗಲಾತ್ಯ 2:20).

ಈ ಪ್ರಯೋಜನವನ್ನು ಸ್ವೀಕರಿಸಿಕೊಳ್ಳುವ ಆಯ್ಕೆಯು ನಮ್ಮದಾಗಿರುತ್ತದೆ. ಅದನ್ನು ನಮಗೋಸ್ಕರ ಬೇರೆ ಯಾರೂ ಮಾಡಲಾರರು. ನಾವು "ಇಷ್ಟವುಳ್ಳವನು ಬರಲಿ" ಎಂಬ ಗುಂಪಿಗೆ ಸೇರಿದವರು (ನೋಡಿರಿ ಪ್ರಕಟನೆ 22:17; KJV). ನಾವು ಆ ಆಯ್ಕೆಯನ್ನು ಮಾಡಿಕೊಳ್ಳಬಹುದು. ನಾವು ನಂಬಿಕೆಯನ್ನಿಡುವಾಗ, ನಮಗೆ "ದೇವರ ಮಕ್ಕಳಾಗುವ ಅಧಿಕಾರವು" ಕೊಡಲ್ಪಡುತ್ತದೆ (ಯೋಹಾನ 1:11, 12). ನಮ್ಮ ಹೃದಯಗಳಲ್ಲಿ ನಂಬಿಕೆಯು ಕಾಣಲ್ಪಡುವಾಗ ನಾವು ಈಗಾಗಲೇ ರಕ್ಷಿಸಲ್ಪಟ್ಟಿದ್ದೇವೆಂದಾಗಿರುವದಿಲ್ಲ, ಆದರೆ ನಮಗೆ ರಕ್ಷಣೆ ಹೊಂದುವ ಸವಲತ್ತು ಕೊಡಲ್ಪಟ್ಟಿದೆ ಎಂದಾಗಿರುತ್ತದೆ. ಒಂದು ಬಸ್ ಟಿಕೆಟ್ ಖರೀದಿಸಿ ಬಿಟ್ಟರೆ ಒಬ್ಬ ಪ್ರಯಾಣಿಕನನ್ನು ಬೇರೊಂದು ಪಟ್ಟಣದಲ್ಲಿ ಕೊಂಡೊಯ್ದು ಬಿಡುವದಿಲ್ಲ, ಆದರೆ ಅದು ಆತನಿಗೆ ಅಲ್ಲಿಗೆ ತಲುಪುವದಕ್ಕೆ ಒಂದು ಮಾರ್ಗವನ್ನು ಒದಗಿಸುತ್ತದೆ, ಯಾಕೆಂದರೆ ಆತನಿಗೆ ಬಸ್‌ನಲ್ಲಿ ಪ್ರಯಾಣಿಸುವ ಅಧಿಕಾರವಿರುತ್ತದೆ. ನಾವು ಈ ಜೀವನದಲ್ಲಿರುವ ವೇಳೆ ನಿತ್ಯ ರಕ್ಷಣೆಯ ಸ್ಥಳಕ್ಕೆ ಬಂದು ತಲುಪುವದಿಲ್ಲ; ನಾವು "ಅದರ ನಿರೀಕ್ಷೆಯಲ್ಲಿ" ಉಳಿಯುತ್ತೇವೆ (ತೀತನಿಗೆ 1:2). ನಮ್ಮ ನಿತ್ಯವಾದ

ಗಮ್ಯತೆಯು ನಮಗೆ ಬಿಟ್ಟಿದ್ದು. ಕ್ರಿಸ್ತನಿಗೆ ವಿಧೇಯತೆ ಮತ್ತು ನಂಬಿಗಸ್ತಿಕೆಯು ಆತನ ಬಳಿಗೆ ಹೋಗುವ ಮತ್ತು ಆತನೊಂದಿಗೆ ಇರುವ ನಮ್ಮ ಅಧಿಕಾರವನ್ನು ಖಾತ್ರಿ ಪಡಿಸುತ್ತದೆ (ಇಬ್ರಿಯ 5:8, 9).

## ಇಂದು ವಿಮೋಚನೆಯು ಏನಾಗಿರುತ್ತದೆ? (9:12)

"ವಿಮೋಚನೆ" ಎಂಬುದಕ್ಕಿರುವ ಪದವು λύτρωσις (*lutrōsis*), ಇದರಲ್ಲಿ ಗುಲಾಮ ಮಾರುಕಟ್ಟೆಯ ವಾಸನೆಯನ್ನು ಹೊಂದಿರುತ್ತದೆ, ಯಾಕೆಂದರೆ ಅದು ಒಬ್ಬ ಸೆರೆಯಲ್ಲಿರುವ ಗುಲಾಮನನ್ನು ಬಿಡುಗಡೆಗೊಳಿಸುವದಕ್ಕೆ ಅನ್ವಯವಾಗುತ್ತಿತ್ತು. ಲೋಕದ ಬಹುತೇಕ ಭಾಗಗಳಲ್ಲಿ, ಗುಲಾಮತನ ಪದ್ಧತಿಯು ಗತಿಸಿ ಹೋಗಿರುತ್ತದೆ, ಆದರೆ ಅದರಿಂದುಂಟಾದ ಭಯಾನಕತೆಗಳನ್ನು ಕೀಳುತನಕ್ಕೆ ಹೋಗುವ ದುಷ್ಪರಿಣಾಮಗಳನ್ನು ನಾವು ಎಂದಿಗೂ ನಿರ್ಮೂಲನೆ ಮಾಡುವದಕ್ಕಾಗುವದಿಲ್ಲ.

"ಕ್ರೈಸ್ತ" ಎಂಬ ಹೆಸರನ್ನು ಧರಿಸಿಕೊಂಡವರು ಉಳಿದಿರುವ ವರ್ಣಭೇದವನ್ನು ಜಯಿಸುವದಕ್ಕೆ ಮಿಲಿಟರಿ ಪ್ರವೃತ್ತಿಯ ಚಟುವಟಿಕೆಗೆ ಇಳಿಯಬಾರದು. Martin Luther King, Jr., ನು ಎಲ್ಲಾ ಜನಾಂಗೀಯ "ಸಹೋದರರಲ್ಲಿ" ಸಮಾನತೆಯನ್ನು ಸಾಧಿಸುವದಕ್ಕೆ ಅಹಿಂಸೆಯ ದಾರಿಯನ್ನು ಪ್ರತಿಪಾದಿಸಿದನು. ಯೇಸು ಕ್ರಿಸ್ತನಿಂದ ಒದಗಿಸಲ್ಪಟ್ಟಿರುವ ವಿಮೋಚನೆಯು ನಮ್ಮೆಲ್ಲರನ್ನು ವಿಮುಕ್ತಗೊಳಿಸುತ್ತದೆ. ನಾವು ಎಲ್ಲದರಲ್ಲಿಯೂ ನಮ್ಮ ಜೀವನದ ಮಾದರಿಗಾಗಿ ಯೇಸುವಿನ ಕಡೆಗೆ ಹಿಂದಿರುಗಬೇಕು. ಆತನ ಉಪದೇಶವು ದಾಸತ್ವದಿಂದ ಬಿಡುಗಡೆ ಮತ್ತು ಸ್ವಾತಂತ್ರಕ್ಕೆ ನಡಿಸುತ್ತದೆ.

ಎಲ್ಲಾ ಕ್ರೈಸ್ತರು ಸ್ವತಂತ್ರರು, ಯಾಕೆಂದರೆ ಕ್ರಿಸ್ತನು "ತನ್ನ ರಕ್ತದ ಮೂಲಕ" ನಮಗೋಸ್ಕರ "ನಿತ್ಯವಿಮೋಚನೆಯನ್ನು ಸಂಪಾದಿಸಿಕೊಂಡಿದ್ದಾನೆ." ಅದಕ್ಕೆ ಪ್ರತಿಯಾಗಿ, ನಾವು ಕ್ರಿಸ್ತನಿಗೆ ಅಧೀನರಾದ ಸೇವಕರಾಗಿ, ಸೆರೆಯಾಳುಗಳಾಗಿ ಸಹ ಜೀವಿಸುವದಕ್ಕೆ ಆರಿಸಿಕೊಳ್ಳುತ್ತೇವೆ (ನೋಡಿರಿ ಎಫೆಸ 4:1-3).

## "ರಕ್ತಧಾರೆಯಿಲ್ಲದೆ ಪಾಪಪರಿಹಾರ ಉಂಟಾಗುವದಿಲ್ಲ" (9:13-22)

ಈ ವಾಕ್ಯಭಾಗವು ವಿಮೋಚನೆಯ ಸುವಾರ್ತಾ ಕಥೆಯಲ್ಲಿನ ಕೇಂದ್ರಿಯ ಅಂಶವನ್ನು ಮುಂದಿಡುತ್ತದೆ. ಅದು ಹೇಳಲಿಚ್ಛಿಸುವ ವಿಷಯವು ಸ್ಪಷ್ಟವಾಗಿದೆ: ರಕ್ತಧಾರೆಯಿಲ್ಲದೆ ಪಾಪಪರಿಹಾರವು ಉಂಟಾಗುವದಿಲ್ಲ (ವ. 22). ಇದು ಇಬ್ರಿಯರಿಗೆ ಪತ್ರಿಕೆಯ ಮತ್ತು ಇಡೀ ಬೈಬಲಿನ ಪ್ರಮುಖ ಚರ್ಚೆಯಾಂಶವೆಂದು ಸಹ ನಾವು ಹೇಳಬಹುದು. ನಮ್ಮನ್ನು ರಕ್ಷಿಸುವಂಥದ್ದು ನಮ್ಮ ಸ್ವಂತ ಒಳ್ಳೇತನವಲ್ಲ; ರಕ್ಷಣೆಯು ಯೇಸುವಿನ ರಕ್ತದ ಮೂಲಕ ಸಾಧಿಸಿಕೊಳ್ಳಲ್ಪಡುತ್ತದೆ. "ಮರಣವನ್ನು ಅನುಭವಿಸಿದ್ದರಿಂದ" ವಿಮೋಚನೆಯು ಲಭ್ಯವಾಗಿರುತ್ತದೆಂದು 15ನೇ ವಚನವು ಹೇಳುತ್ತದೆ.

"ರಕ್ತವು ಪ್ರಾಣಾಧಾರವಾಗಿದೆ" ಎಂದು ಹಳೆಯ ಒಡಂಬಡಿಕೆಯು ಕಲಿಸುತ್ತದೆ (ಯಾಜಕಕಾಂಡ 17:11, 14). ಹತ್ತೊಂಭತ್ತನೆಯ ಶತಮಾನದಲ್ಲಿ ಮಾತ್ರವೇ ದೇಹದಿಂದ "ಕೆಟ್ಟ ರಕ್ತವನ್ನು" ಬಿಡುಗಡೆಗೊಳಿಸಬೇಕೆಂಬ ವೈದ್ಯರು ಯೋಚನೆಯನ್ನು ಅಳಿಸಿ ಹಾಕಿದರು, ಅದು George Washingtonನ ಮರಣಕ್ಕೆ ಭಾಗಶಃ ಕಾರಣವಾಗಿದ್ದ ಭಾವನೆ ಇದಾಗಿತ್ತು. ವೈದ್ಯಕೀಯ ವಿಜ್ಞಾನದಲ್ಲಿ ಪ್ರಗತಿಯು ಉಂಟಾದದ್ದರಿಂದ, ರಕ್ತವನ್ನು ವರ್ಗಾವಣೆ ಮಾಡುವದರ ಮೂಲಕ ಅನೇಕ ಜೀವಗಳು ಉಳಿಸಲ್ಪಟ್ಟಿವೆ.

Robert E. Colemanನು ತನ್ನ *Written in Blood* ಎಂಬ ಪುಸ್ತಕದಲ್ಲಿ ಒಂದೇ ವಿಧದ ವಿರಳವಾದ ರಕ್ತ ವ್ಯಾದಿಯುಳ್ಳ ಒಬ್ಬ ಸಹೋದರ ಹಾಗೂ ಸಹೋದರಿಯ ಕುರಿತಾಗಿ ಹೇಳುತ್ತಾನೆ. ಹುಡುಗನು ಚೇತರಿಸಿಕೊಂಡನು, ಆದರೆ ಆಥನ ಸಹೋದರಿಗೆ ಆ ವ್ಯಾಧಿಯನ್ನು ಜಯಿಸಲು ಸಾಧ್ಯವಾಗಲಿಲ್ಲ. ವೈದ್ಯರು ಸಹೋದರನಲ್ಲಿರುವ ಪ್ರತಿರಕ್ಷಣೆಗೊಳಿಸಲ್ಪಟ್ಟಿರುವ ರಕ್ತವು ಮಾತ್ರವೇ ಆತನ ಸಹೋದರಿಯನ್ನು ಕಾಪಾಡಬಲ್ಲದೆಂದು ಹೇಳಿದರು. ಆತನ ಸಹೋದರಿಯು ಎಷ್ಟೊಂದು ರೋಗಗ್ರಸ್ಥಳಾಗಿದ್ದಾಳೆಂಬುದನ್ನು ಒಬ್ಬ ವೈದ್ಯನು ಆ ಹುಡುಗನಿಗೆ ವಿವರಿಸಿದನು; ತನ್ನ ರಕ್ತವನ್ನು ಕೊಡುವ ಮೂಲಕ ಅವನು ತನ್ನ ಸಹೋದರಿಯನ್ನು ರಕ್ಷಿಸಬಹುದೆಂದು ವೈದ್ಯನು ಹೇಳಿದನು. ವೈದ್ಯನು ಆತನಿಗೆ "ನೀನು ನಿನ್ನ ರಕ್ತವನ್ನು ಕೊಡುವೆಯಾ?" ಎಂದು ಕೇಳಿದನು. ಚಿಕ್ಕ ಬಾಲಕನ ತುಟಿಗಳು ನಡುಗಿದವು, ಆದರೆ ಆತನು ಹೀಗೆ ಹೇಳಿದನು, "ಹೌದು, ನಾನು ಅದನ್ನು ಮಾಡುತ್ತೇನೆ." ಆತನನ್ನು ಮತ್ತೊಂದು ಕೋಣೆಗೆ ಕರೆದೊಯ್ಯಲಾಯಿತು, ಮತ್ತು ರಕ್ತ ವರ್ಗಾವಣೆ ಆರಂಭಗೊಂಡಿತು. ಒಂದು ಅದ್ಭುತವು ಸಂಭವಿಸಿತೋ ಎಂಬಂತೆ ಆತನ ಸಹೋದರಿಯ ದೇಹಕ್ಕೆ ಜೀವವು ಹಿಂದಿರುಗಿತು. ಅದಾದ ತಕ್ಷಣವೇ ವೈದ್ಯನು ಒಳಗೆ ಬಂದನು, ಮತ್ತು ಬಾಲಕನು ವೈದ್ಯನಿಗೆ "ಡಾಕ್ಟರ್, ನಾನು ಯಾವಾಗ ಸಾಯುತ್ತೇನೆ?"[76] ಎಂದು ಕೇಳಿದನು. ತಾನು ಸಹೋದರಿಗೆ ತನ್ನ ರಕ್ತವನ್ನು ಕೊಡುವದರಿಂದ ತನ್ನ ಪ್ರಾಣವನ್ನು ಕಳಕೊಳ್ಳಲಿದ್ದೇನೆಂದು ಆತನು ಭಾವಿಸಿಕೊಂಡಿದ್ದನು. ಆತನು ತುಟಿಗಳು ನಡುಗಿದ್ದವು ಎಂಬುದರಲ್ಲಿ ಆಶ್ಚರ್ಯವೇನಿಲ್ಲ!

ಯೇಸು ನಮಗೋಸ್ಕರ ಅದನ್ನು ಮಾಡಿದನು; ಆತನ ದೇಹವು ಶಿಲುಬೆಯ ಮೇಲೆ ನಡುಗಿರಬಹುದಾಗಿದೆ. ನಮಗೋಸ್ಕರ ತನ್ನ ರಕ್ತವನ್ನು ಕೊಡುವದರಲ್ಲಿ ತಾನು ಮರಣಿಸುವೆನೆಂದು ಆತನಿಗೆ ಗೊತ್ತಿತ್ತು. ನಾವು ಒಂದು ನಿತ್ಯವಾದ ರಕ್ತದ ವರ್ಗಾವಣೆಯನ್ನು ಹೊಂದಿರುತ್ತೇವೆ. ಕ್ರೈಸ್ತರು ಯೇಸುವಿನ ರಕ್ತದ ಮೂಲಕ ರಕ್ಷಿಸಲ್ಪಟ್ಟಿದ್ದಾರೆ! ಈ ಅಮೂಲ್ಯವಾದ ವರದಾನವನ್ನು ನಾವು ಎಂದಿಗೂ ಅಲ್ಪವೆಂದೆಣಿಸಬಾರದು (ನೋಡಿರಿ ಇಬ್ರಿಯ 10:29). ಆತನು ಎಂಥಾ ಬೆಲೆಯನ್ನು ತೆತ್ತನು!

### ತನ್ನ ಸ್ವಂತ ರಕ್ತ (9:22, 25)

ಶಿಲುಬೆಯ ಕಥೆಯನ್ನು ಹೇಳದ ಮತ್ತು ಯೇಸುವಿನ ಸುರಿಸಲ್ಪಟ್ಟ ರಕ್ತವು ರಕ್ಷಣೆಗೆ ಅವಶ್ಯವೆಂಬುದನ್ನು ಸೇರ್ಪಡೆಗೊಳಿಸದ ಯಾವದೇ ಸಭೆ ಅಥವಾ ಬೋಧಕನು ಕೇಳಿಸಿಕೊಳ್ಳುವದಕ್ಕೆ ಯೋಗ್ಯವಲ್ಲ. ರಕ್ತದ ಪ್ರಾಮುಖ್ಯತೆಯು 9:22ರಲ್ಲಿ ಕಂಡು ಬರುತ್ತದೆ: ". . . ಎಲ್ಲಾ ವಸ್ತುಗಳು ರಕ್ತದಿಂದಲೇ ಶುದ್ಧೀಕರಿಸಲ್ಪಡುವವು; ರಕ್ತಧಾರೆಯಿಲ್ಲದೆ ಪಾಪಪರಿಹಾರ ಉಂಟಾಗುವದಿಲ್ಲ." ಮಹಾಯಾಜಕನು ರಕ್ತವನ್ನು ತಕ್ಕೊಂಡು ಪವಿತ್ರ ಸ್ಥಳವನ್ನು ಪ್ರವೇಶಿಸುತ್ತಿದ್ದನೆಂದು 25ನೇ ವಚನವು ನಮಗೆ ಜ್ಞಾಪಿಸುತ್ತದೆ. ಬಹಳ ಜನರಿಗೆ, ರಕ್ತವು ಒಂದು ಭಯಂಕರವಾದ ಯೋಚನೆಯಾಗಿರುತ್ತದೆ. ನಮ್ಮ ಸ್ವಂತ ರಕ್ತವನ್ನು ನೋಡಿದರೆ ನಮ್ಮಲ್ಲಿ ಕೆಲವರು ನಡುಗುತ್ತೇವೆ ಮತ್ತು ಮಂಕಾಗಿ ಬಿಡುತ್ತೇವೆ; ಮತ್ತೊಬ್ಬನು ತನ್ನ ಮರಣದಲ್ಲಿ ರಕ್ತ ಸುರಿಸುವದನ್ನು ನೋಡುವದು ಹೃದಯ-ಹಿಂಡುವಂತಿರುತ್ತದೆ. ನತದೃಷ್ಟನು ನಿರಪರಾಧಿಯೆಂದು ತಿಳಿದಾಗಲಂತೂ ಇದು ಮತ್ತುಷ್ಟು ಸತ್ಯವಾಗಿರುತ್ತದೆ. ನಮ್ಮ ಪಾಪವು ದೇವರಿಗೆ ಅಸಹ್ಯಕರವಾಗಿರುವದಕ್ಕಿಂತಲೂ ರಕ್ತವನ್ನು ನೋಡುವದು ನಮಗೆ ಇನ್ನು ಮೇಲೆ ಅಸಹ್ಯಕರವಾಗಿರುತ್ತದೋ? ಶಿಲುಬೆ ಮತ್ತು ಯೇಸುವಿನ ಸುರಿಸಲ್ಪಟ್ಟ ರಕ್ತವು ದೇವರಿಗೆ ಪಾಪ ಎಷ್ಟು ಅಸಹ್ಯಕರವೆಂಬುದನ್ನು ತೋರ್ಪಡಿಸುತ್ತದೆ.[77] ಪಾಪವು ಮರಣವುಂಟು ಮಾಡುತ್ತದೆ,

ಮತ್ತು ಮರಣವು ದೇಹ ತನ್ನ ರಕ್ತವನ್ನು ಕಳಕೊಳ್ಳುವಾಗ ಸಂಭವಿಸುತ್ತದೆ. ನಾವು ನಮ್ಮ ಪಾಪಗಳಿಗಾಗಿ ಶಾಶ್ವತವಾಗಿ ಮರಣಿಸಿರುವ ಹೊರತು, ಕ್ರಿಸ್ತನು ಅಪರಾಧಗಳಿಗೋಸ್ಕರ ನಿರಪರಾಧಿಯಾಗಿ ಸಾಯಬೇಕಾಗಿತ್ತು (2 ಕೊರಿಂಥ 5:18-21).

ಶಾಸ್ತ್ರಗಳಲ್ಲಿ, ರಕ್ತವು ಹಿಂಸಾತ್ಮಕವಾಗಿ ತೆಗೆದುಕೊಳ್ಳಲ್ಪಟ್ಟ ಜೀವವನ್ನು ಪ್ರತಿನಿಧಿಸುತ್ತದೆ. ಸಮರ್ಪಿಸಲ್ಪಡುವಂಥ ರಕ್ತ ಯಜ್ಞವು ಅರ್ಹವಾದದ್ದು ಆಗಿದ್ದಲ್ಲಿ —ಯೇಸುವಿನ ರೀತಿಯಲ್ಲಿ, ಯಾಕೆಂದರೆ ಆತನು ಪಾಪವಿಲ್ಲದವನಾಗಿದ್ದನು (1 ಪೇತ್ರ 1:18, 19; 2:21-23) — ಆ ರಕ್ತ ಯಜ್ಞವು ಜೀವವನ್ನು ಉಳಿಸಿಕೊಳ್ಳುವದಕ್ಕೆ ದಾರಿಯನ್ನು ಒದಗಿಸಬಲ್ಲದ್ದಾಗಿತ್ತು ಮತ್ತು ಒದಗಿಸಿತ್ತು. ಒಂದು ರಕ್ತ ಸಮರ್ಪಣೆಯು ಅಕ್ಷರಶಃ ಒಬ್ಬನಿಗೆ ಜೀವವನ್ನುಂಟು ಬಿಡುಗಡೆಗೊಳಿಸುತ್ತದೆಂದು ಹೊಸ ಒಡಂಬಡಿಕೆಯು ಕಲಿಸುವದಿಲ್ಲ. ಬದಲಾಗಿ, ಕ್ರಿಸ್ತನ ರಕ್ತದ ಪ್ರಯೋಜನಗಳು ಮತ್ತು ಆತನ ರಕ್ತವನ್ನು ಸಮರ್ಪಿಸುವಿಕೆಯು ಆತನ ಶಾರೀರಿಕ ಜೀವವನ್ನು ಅಂತ್ಯಗೊಳಿಸಿತ್ತು, ಆದರೆ ಆತನ ಯಜ್ಞವು ಎಲ್ಲಾ ಮಾನವರಿಗೆ ಒಂದು ಆತ್ಮೀಕ ವಿಮೋಚನೆಯ ದಾರಿಯನ್ನು ಒದಗಿಸಿತು.

ಕೆಲವು ವರ್ಷಗಳ ಹಿಂದೆ, ಕೆಲವೊಂದು ಧಾರ್ಮಿಕ ಗುಂಪುಗಳು ತಮ್ಮ ಹಾಡಿನ ಪುಸ್ತಕಗಳಿಂದ ಯೇಸುವಿನ ದೋಷಪರಿಹಾರಕ ರಕ್ತದ ಉಲ್ಲೇಖವಿರುವ ಎಲ್ಲಾ ಪದಗಳನ್ನು ತೆಗೆದು ಹಾಕುವದಕ್ಕೆ ನಿರ್ಧರಿಸಿದರು. ಈ ಉಲ್ಲೇಖನಗಳನ್ನು ಅವರು ಯಾವದೇ ಕಾರಣಕ್ಕೂ ಯಾವನೂ ಸಾಯುವದನ್ನು ಇಷ್ಟಪಡದ ತಮ್ಮ ಆಧುನಿಕ, ಕನಿರಕರವುಳ್ಳ ಹೃದಯದ ಸದಸ್ಯರಿಗೆ ಬೇಸರವನ್ನುಂಟು ಮಾಡುತ್ತವೆಂದು ಅವರು ಪರಿಗಣಿಸಿದ್ದರು. (ಇನ್ನು ಕೆಲವರು ಪ್ರಾಣಿಗಳಿಗೆ ಸಹ ಮಾನವರಿಗಿರುವಂತೆಯೇ ಸಮಾನ ಹಕ್ಕುಗಳಿರುತ್ತವೆಂದು, ಆ ಕಾರಣದಿಂದ ಅವುಗಳು ಸಹ ಮತ್ತೊಬ್ಬರ ಪ್ರಯೋಜನಾರ್ಥವಾಗಿ ಸಾಯುವ ಅವಶ್ಯಕತೆಯಿರುವದಿಲ್ಲ ಎಂದು ಸಹ ಪ್ರತಿವಾದವನ್ನು ಮಾಡಿದರು.) ರಕ್ತವನ್ನು ಸುರಿಸುವ ಯೋಚನೆಯು ಅವರಿಗೆ ಅಸಭ್ಯವೆಂದು ತೋರಿತು; ಅದು ಅವರ ಮನಸ್ಸಿನ ಸೂಕ್ಷ್ಮತೆಗಳ ಮಟ್ಟಕ್ಕೆ ಕೆಳಗಿನದ್ದಾಗಿತ್ತು. ಈ ಗುಂಪುಗಳು ನರಕ, ನ್ಯಾಯತೀರ್ಪಿನ ಬಗ್ಗೆ, ಮತ್ತು ಪಾಪವೆಂದರೆ ಒಟ್ಟಾರೆ ಏನಾಗಿರುತ್ತದೆಂಬುದರ ಬಗ್ಗೆ ಕಡಿಮೆ ಕಡಿಮೆಯಾಗಿ ಸಹ ಬೋಧಿಸಿರುತ್ತವೆ. ಇತ್ತೀಚಿನ ಒಂದು ಸುವಾರ್ತಿಕ ವರ್ತಮಾನ ಪತ್ರಿಕೆಯು ಬಹುಪಾಲು ಬೋಧಕರು ನ್ಯಾಯತೀರ್ಪಿನ ಕುರಿತು ಮಾತಾಡುವದಿಲ್ಲ ಎಂಬುದನ್ನು ಎತ್ತಿ ತೋರಿಸಿತು, "ಅವರು ಅದನ್ನು ನಂಬುವದಿಲ್ಲ ಎಂಬುದಕ್ಕಲ್ಲ, ಆದರೆ ಅವರ ಶ್ರೋತೃಗಳು ಅದನ್ನು ಸಹಿಸಿಕೊಳ್ಳಲಾರರು ಎಂಬ ಕಾರಣಕ್ಕಾಗಿಯೇ."[78] ಅದೇ ರೀತಿಯಲ್ಲಿಯೇ, ಪಾಪವು ಜನರಿಗೆ ಮನನೋವುಂಟು ಮಾಡುತ್ತದೇನೋ ಎಂದು ನಾವು ಹೆದರುವದರಿಂದ ಪಾಪವು ಸಭೆಯಲ್ಲಿ ಖಂಡಿಸಲ್ಪಡದಿರಬಹುದು. ಪಾಪವು ಮನನೋವುಂಟು ಮಾಡುವಂಥದು! ಅದಕ್ಕೆ ದೇವರ ಏಕೈಕ ಮಗನ ರಕ್ತವನ್ನು ಬೆಲೆಯಾಗಿ ತೆತ್ತಬೇಕಾಯಿತು!

ನಾವು ಪಾಪಕ್ಕಾಗಿ ಮಾಡಲ್ಪಟ್ಟ ಅತ್ಯಂಥ ಶ್ರೇಷ್ಠವಾದ ಯಜ್ಞದ ವಿಷಯದಲ್ಲಿ — ಕ್ರಿಸ್ತನ ರಕ್ತ — ರಾಜಿ ಮಾಡಿಕೊಳ್ಳುವದಾದರೆ, ನಾವು ಶೀಘ್ರದಲ್ಲಿಯೇ ಪಾಪದ ಕುರಿತು ಬೋಧಿಸುವದರಲ್ಲಿ ರಾಜಿ ಮಾಡಿಕೊಳ್ಳುವೆವು, ಮತ್ತು ಸಭೆಯು ಮತಭ್ರಷ್ಟತೆಯೊಳಗೆ ಸಾಗುವದು. ಜನರು "ನೀವು ಒಂದು ನೇಮನಿಷ್ಠೆಯ ಸಭೆ! ನೀವು ಸದಸ್ಯರಿಂದ ಅತಿ ಎತ್ತರವಾದ ಮಾನದಂಡದಂತೆ ನಡೆಯುವದನ್ನು ಬೇಡುತ್ತೀರಿ. ನೀವು ಪಾಪಿಗಳನ್ನು ಕ್ಷಮಿಸುವದರಲ್ಲಿ ವಿಫಲರಾಗುವಿರಾದ್ದರಿಂದ ನೀವು ಕ್ರಿಸ್ತನಂತೆ ಇರುವದಿಲ್ಲ" ಎಂದು ಹೇಳುತ್ತಾರೆಂಬ ಒಂದೇ ಕಾರಣಕ್ಕಾಗಿ ನಾವು ಪಾಪದ ಬಗ್ಗೆ ಖಂಡನೆ ಮಾಡುವದರಿಂದ ದೂರವಿರಬಾರದು. ನಾವು ಬೈಬಲನುಸಾರವಾಗಿ ಇರುವದಕ್ಕೆ ಪ್ರಯತ್ನಿಸುತ್ತಿಲ್ಲವಾದರೆ ಬೋಧನೆಯನ್ನಾದರೂ ಮಾಡುವ ಅಗತ್ಯವೇನಿದೆ? ನಾವು ಪಶ್ಚಾತ್ತಾಪ ಪಡುವವರ ಕಡೆಗೆ ಕರುಣೆಯುಳ್ಳವರಾಗಿದ್ದು ಅವರನ್ನು ಅಂಗೀಕರಿಸಿಕೊಳ್ಳಬೇಕು, ಆದರೆ ನಮ್ಮ

ದೇವರಿಗೆ ಪಾಪವು ದಿಗಿಲುಗೊಳಿಸುವ ರೀತಿಯಲ್ಲಿ ಇನ್ನು ಅದು ನಮಗೆ ದಿಗಿಲುಗೊಳಿಸದಂಥ ದಿಕ್ಕಿನಲ್ಲಿ ಹೋಗದಿರೋಣ.

### ಪಾಪವನ್ನು ಹೇಗೆ ನಿವಾರಿಸಿಕೊಳ್ಳುವದು (9:26)

ಒಂದು ಸರ್ಕಾರದಿಂದ ಅನುಮೋದನೆ ಮಾಡಲಾದ ಯಾವದೇ ಕಾನೂನು ಆಗಲಿ ಅಥವಾ ಯಾವಾಗಲೂ ನ್ಯಾಯಾಲಯದ ಪ್ರಕರಣವೊಂದನ್ನು ಕೇಳಿಸಿಕೊಂಡ ನ್ಯಾಯದರ್ಶಿ ಮಂಡಲಿಯು ಪೂರ್ಣ ಕ್ಷಮಾಪಣೆಯ ಮೂಲಕ ಪಾಪವನ್ನು ನಿವಾರಣೆ ಮಾಡಲಾಗದು. ನ್ಯಾಯದರ್ಶಿ ಮಂಡಲಿಯು ಒಂದು ಪ್ರಕರಣವನ್ನು ನ್ಯಾಯಯುತವಾಗಬಲ್ಲ ನರಹತ್ಯೆಯೆಂದು ನಿರ್ಧರಿಸಬಹುದು, ಆದರೆ ಅರೋಪಿ ಸ್ಥಾನದಲ್ಲಿರುವ ವ್ಯಕ್ತಿಯು ಆಗಲೂ ಮತ್ತೊಬ್ಬನನ್ನು ಕೊಂದಿರುವದಕ್ಕಾಗಿ ತಪ್ಪಿತಸ್ಥ ಭಾವನೆಯನ್ನು ಹೊಂದಿರಬಹುದಾಗಿದೆ. ಮಾನವ ಕ್ಷಮಾಪಣೆಯು ಅಪರಾಧಿತ್ವವನ್ನು ಕ್ಷಮಿಸಲಾರದು ಅಥವಾ ನಿವಾರಿಸಲಾರದು. ಮತ್ತೊಬ್ಬರ ಕ್ರಿಯೆಗಳಿಗಾಗಿ ಬೇರೆ ಯಾವನೇ ಆಗಲಿ ಮಾಡುವ ಅರಿಕೆಯು ನಿಜವಾದ ಕ್ಷಮಾಪಣೆಯನ್ನು ಒದಗಿಸಲಾರದು ಅಥವಾ ದೋಷವನ್ನು ನಿವಾರಿಸಲಾರದು. ಘೋರವಾಗಿ ಪಾಪ ಮಾಡಿದವರು ಮತ್ತು ತಮ್ಮ ಕುಟುಂಬಗಳನ್ನು ನಾಶಗೊಳಿಸಿರುವವರು ತಾವು ಮಾಡಿರುವ ಹಾನಿಗಾಗಿ ಅಪರಾಧಭಾವನೆಗಳನ್ನು ತೆಗೆದು ಹಾಕಲಾರರು. ದೇವರು ಮಾತ್ರವೇ ಒಬ್ಬ ಪಾಪಿಯನ್ನು ಕ್ಷಮಿಸಬಲ್ಲನು ಮತ್ತು ಅಂಗೀಕರಿಸಿಕೊಳ್ಳಬಲ್ಲನು, ಮತ್ತು ಆತನಿಗೆ ಪಶ್ಚಾತ್ತಾಪವು ಅಗತ್ಯವಾಗಿರುತ್ತದೆ (ಲೂಕ 13:3, 5). ಆತನು ಕ್ರಿಸ್ತನು ಮೂಲಕ ಕ್ಷಮಿಸುತ್ತಾನೆ, ಆತನು, ನಮ್ಮ ವಾಕ್ಯಭಾಗದ ಪ್ರಕಾರವಾಗಿ, “ತನ್ನನ್ನು ಯಜ್ಞಮಾಡಿಕೊಳ್ಳುವವನಾಗಿ” ಬಂದನು. ನಾವು ದೇವರ ಹೊರತಾಗಿ ನಮ್ಮ ಅಪರಾಧವನ್ನು ಎಂದಿಗೂ ನಿವಾರಿಸಿಕೊಳ್ಳಲಾರೆವು. ಆತನಲ್ಲಿ ಮಾತ್ರವೇ ಪೂರ್ಣ ಕ್ಷಮಾಪಣೆಯು ಸಿಕ್ಕುತ್ತದೆ. ನಮ್ಮ ಸ್ವಂತವಾಗಿ, ನಾವು ಅದರ ನೆನಪನ್ನು ಅಳಿಸಿ ಹಾಕುವದಕ್ಕೆ ಆರಂಭವನ್ನು ಸಹ ಮಾಡಲು ಸಾಧ್ಯವಿಲ್ಲ.

### ಅಂತಿಮ ಭೇಟಿ ನಿಶ್ಚಯ (9:27)

ನಾವು ನೆರವೇರಿಸುವ ಭೇಟಿ ನಿಶ್ಚಯವು ಮರಣದೊಂದಿಗೆ ಆಗಿರುತ್ತದೆ. “ಒಂದೇ ಸಾರಿ ಸಾಯುವದು . . . ಮನುಷ್ಯರಿಗೆ ನೇಮಕವಾಗಿದೆ.” ಈ ಭೇಟಿ ನಿಶ್ಚಯದಿಂದ ತಪ್ಪಿಸಿಕೊಳ್ಳುವ ದಾರಿಯೇ ಇರುವದಿಲ್ಲ. ಕೆಲವು ಜನರು ತಮ್ಮ ಜೀವಿತಗಳಲ್ಲಿ ಎಲ್ಲವೂ ಚೆನ್ನಾಗಿ ಸಾಗಿರುವ ವೇಳೆಯಲ್ಲಿ ಇದನ್ನು ಮರೆತು ಬಿಡುತ್ತಾರೆ. ಯೇಸುವು ಅತ್ಯಂಥ ಸಮೃದ್ಧಿಕರವಾದ ವರ್ಷವನ್ನು ಕಂಡಿದ್ದ ಮನುಷ್ಯನೊಬ್ಬನ ಕುರಿತು ಹೇಳಿದನು. ಕರ್ತನ ಕೆಲಸಕ್ಕಾಗಿ ಎಷ್ಟು ಕೊಡಬೇಕೆಂಬುದರ ಬಗ್ಗೆ ಯೋಚಿಸುವದರ ಬದಲಾಗಿ, ಆತನು ತನ್ನ ಸ್ವಂತ ನಿವೃತ್ತಿಯ ಔತಣಕೂಟದ ಬಗ್ಗೆ ಮತ್ತು ಮುಂದಿರುವ ವಿಶ್ರಮಿಸಿಕೊಳ್ಳುವ ಸಮಯದ ಬಗ್ಗೆ ಮಾತ್ರವೇ ಯೋಚಿಸುವವನಾದನು. ಆತನು ಹೂಡಿಕೆಗಳ ಬಗ್ಗೆ ಅಥವಾ ದಿವಾಳಿತನದ ಕುರಿತು ಚಿಂತಿಸಬೇಕಾಗಿರಲಿಲ್ಲ. ಆತನು ಐಶ್ವರ್ಯವಂತನಾಗಿದ್ದನು. ಆತನು ತನಗೆ ಆರ್ಥಿಕ ಸಲಹೆಗಳನ್ನು ಕೊಟ್ಟುಕೊಳ್ಳುವಷ್ಟು ಜಾಣನಾಗಿದ್ದನು. ಒಬ್ಬ ರೈತನಾಗಿ, ತಾನು ಉತ್ಪಾದನೆಯನ್ನೆಲ್ಲಾ ಕೂಡಿಸಿಟ್ಟುಕೊಂಡು ಅದರ ಮೂಲಕ ವರ್ಷಗಳ ವರೆಗೆ ಬದುಕುವದಕ್ಕಾಗಿ ಆತನಿಗೆ ಒಂದು ಸಾಕಾಗುವಷ್ಟು ದೊಡ್ಡ ಕೋಣೆಯು ಬೇಕಿತ್ತಷ್ಟೆ ಎಂದು ನಿರ್ಧರಿಸಿದನು. ಹೇಗೂ, ಆತನ ಯೋಚನೆಯು ತಪ್ಪಾಗಿತ್ತು. ದೇವರು ವಾಸ್ತವದಲ್ಲಿ ಆತನೊಂದಿಗೆ ಮಾತಾಡುತ್ತಾ ಹೀಗೆ ಹೇಳಿದನು, “ಬುದ್ಧಿಹೀನನು ನೀನು! *ಈ ಹೊತ್ತು* ರಾತ್ರಿ ನಿನ್ನ ಪ್ರಾಣವನ್ನು ನಿನ್ನ ಕಡೆಯಿಂದ ಕೇಳುವರು” ಎಂದು ಹೇಳಿದನು (ಲೂಕ

12:15-21; ಒತ್ತಿ ಹೇಳಿದ್ದು ನನ್ನದು).

## ಒಂದೇ ಒಂದು ನ್ಯಾಯತೀರ್ಪು (9:27)

9:27ರಲ್ಲಿ ಏಕೆ ಒಂದು "ಎತ್ತಲ್ಪಡುವಿಕೆಗೆ" ಸಮಯವು ನಿಗದಿ ಮಾಡಿ ಕೊಟ್ಟಿರುವದಿಲ್ಲ? ಅಂಥ ಯಾವದೇ ಘಟನೆಯು ಇರುವದಿಲ್ಲ ಎಂಬುದು ಕಾರಣವಿರಬಹುದೋ? "ಒಯ್ಯಲ್ಪಡುವೆವು" ಎಂಬ ಪದವು (ಲ್ಯಾಟಿನ್ ಭಾಷೆಯ ಮೂಲ ಅರ್ಥವು "ಎತ್ತಲ್ಪಡುವಿಕೆ") 1 ಥೆಸಲೋನಿಕ 4:17ರಲ್ಲಿ ಕಾಣಿಸಿಕೊಳ್ಳುತ್ತದೆ (ನೋಡಿರಿ ವಚನಗಳು 13-18). ದೇವಜನರು "ಸದಾಕಾಲವೂ ಕರ್ತನ ಜೊತೆಯಲ್ಲಿ ಇರುವವರಾಗುವಂತೆ" "ಒಯ್ಯಲ್ಪಡುವರು." ಅಲ್ಲಿ ಮೂರುವರೆ ವರ್ಷಗಳ ಅಥವಾ ಏಳು ವರ್ಷಗಳ ತಾತ್ಕಾಲಿಕ ಕಾಲಾವಧಿಯ ಬಗ್ಗೆ ಹೇಳಲ್ಪಟ್ಟಿರುವದಿಲ್ಲ. ವಾಕ್ಯಭಾಗವನ್ನು ಓದಿರಿ! ಅದು ಒಂದು "ರಹಸ್ಯವಾದ ಮತ್ತು ಶಾಂತವಾದ" ಘಟನೆ ಆಗಿರುವದೇ ಇಲ್ಲ. ಈ ವಾಕ್ಯಭಾಗದ ಮೇಲಿನ ಸಹಸ್ರವರ್ಷ ಪೂರ್ವಾಡಳಿತವಾದದ ಯೋಚನೆಯು ಖಂಡಿತವಾಗಿಯೂ ಕಾಲ್ಪನಿಕವಾದದ್ದು.

ಯೇಸು ನ್ಯಾಯತೀರಿಸುವದಕ್ಕೆ ಬರುವನು, ಹೊರತು ಇನ್ನೊಂದು ಯಜ್ಞಕ್ಕಾಗಿ ಅಲ್ಲ. ಆತನು ಪುನಃ ಅದನ್ನು ಮಾಡಬೇಕಾಗಿದ್ದಲ್ಲಿ, ಅದು ಮೊದಲನೆಯ ಯಜ್ಞವನ್ನು ಸಾಕಾದದ್ದಲ್ಲ ಎಂದು ನಿರೂಪಿಸುವದಾಗಿದೆ (ವ. 27). ಎಲ್ಲಾ ಮನುಷ್ಯರಿಗೆ ಒಂದು ಅಂತಿಮವಾದ ನ್ಯಾಯತೀರ್ಪು ಇರುವದೆಂಬ ಯೋಚನೆಯು ಸಾಮಾನ್ಯವಾಗಿ ಎಲ್ಲರಿಂದ ಅಸಡ್ಡೆ ಮಾಡಲ್ಪಡುವಂಥ ಬೋಧನೆಯಾಗಿದೆ, ಆದಾಗ್ಯೂ ಕೆಲವು ಸತ್ಯಗಳು ಬೈಬಲಿನಲ್ಲಿ ಬಹಳ ಸ್ಪಷ್ಟವಾಗಿ ಹೇಳಲ್ಪಟ್ಟಿರುತ್ತವೆ (ಯೋಹಾನ 5:28, 29; 12:48; ಅಪೊಸ್ತಲರ ಕೃತ್ಯಗಳು 17:30, 31; 2 ಕೊರಿಂಥ 5:10; ಪ್ರಕಟನೆ 20:11-15). ಪೌಲನು ಬರಲಿರುವ ನ್ಯಾಯತೀರ್ಪಿನ ಬಗ್ಗೆ ಮಾತಾಡಿದ್ದು ಫೇಲಿಕ್ಸನಿಗೆ ಭಯವನ್ನುಂಟು ಮಾಡಿತ್ತು (ಅಪೊಸ್ತಲರ ಕೃತ್ಯಗಳು 24:25). ನಾವು ಅನುಭವಿಸುವ ಏಕೈಕ ನ್ಯಾಯತೀರ್ಪು ಈ ಭೂಮಿಯ ಮೇಲಿನದ್ದು ಎಂದು ಫೇಲಿಕ್ಸನು ಯೋಚಿಸಿದ್ದಲ್ಲಿ ಆತನು ಹೆದರಿರುತ್ತಿದ್ದನೋ? ಪೌಲನು ಅಂತಿಮವಾಗಿ ಸಾರ್ವತ್ರಿಕ ರಕ್ಷಣೆಯು ಉಂಟಾಗುವದೆಂಬ ಬಗ್ಗೆ ಬೋಧಿಸಿದ್ದರೆ ಆತನು ನಡುಗಿರುತ್ತಿದ್ದನೋ (KJV)? ಪೌಲನು ಅಂಥ ಯೋಚನೆಗಳನ್ನು ಬೋಧಿಸಲಿಲ್ಲ.

ಯೇಸುವು ಕಡೇ ದಿನದಲ್ಲಿ ಹಿಂದಿರುಗಿ ಬರುವನು (ಯೋಹಾನ 6:39, 40, 44). ಆತನು ನೀತಿವಂತರನ್ನು ಸತ್ತವರೊಳಗಿಂದ ಎಬ್ಬಿಸುವನು ಮತ್ತು ಭೂಮಿಯ ಮೇಲಿರುವಾಗ ಆರಂಭಿಸಿದ ಕೆಲಸವು ಬೆರಳು ತೋರಿಸಿದ ಸಂಪೂರ್ಣ ರಕ್ಷಣೆಯನ್ನು ತರುವನು (ವ. 28). ಕ್ರೈಸ್ತರು ಹಿಂದಿನ ಪಾಪಗಳ ಅಪರಾಧದಿಂದ ತಕ್ಷಣವೇ ಪಡೆದುಕೊಳ್ಳುತ್ತಾರಾದರೂ (2 ಪೇತ್ರ 1:9), ಈ ಮಧ್ಯದಲ್ಲಿ ನಾವು "ನಿತ್ಯಜೀವದ ನಿರೀಕ್ಷೆಯಲ್ಲಿ" ಇರುತ್ತೇವೆ (ತೀತನಿಗೆ 1:2). ಒಂದು ಅರ್ಥದಲ್ಲಿ, ನಾವು ಕ್ರಿಸ್ತನಲ್ಲಿ ನಂಬಿಕೆಯಿಂದಿರುವ ಮೂಲಕ ಜೀವವನ್ನು ಈಗಾಗಲೆ ಹೊಂದಿದ್ದೇವೆ; ಆದರೆ ಆ ಜೀವದ ಪೂರ್ಣ ವಾಸ್ತವಿಕತೆಯು ಆತನ ಎರಡನೆಯ ಬರೋಣದಲ್ಲಿ ಅನುಗ್ರಹಿಸಲ್ಪಡುವದು. ಖಂಡಿತವಾಗಿಯೂ ನಾವು ಈಗ, ಈ ಜೀವನದಲ್ಲಿ ರಕ್ಷಣೆ ಹೊಂದಿದವರಾಗಿದ್ದೇವೆ, ಮತ್ತು ನಾವು ಕ್ರಿಸ್ತನಲ್ಲಿ ನೆಲೆಗೊಳ್ಳುವ ತನಕ ನಿತ್ಯಜೀವವನ್ನು ಹೊಂದಿದ್ದೇವೆ. ಯೋಹಾನ 3:16; 5:24, ಅಲ್ಲಿ ನಮ್ಮ ರಕ್ಷಣೆಯನ್ನು ಉಳಿಸಿಕೊಳ್ಳಬೇಕಾದರೆ ನಾವು "ನಂಬುತ್ತಲಿರಬೇಕು" ಎಂಬ ಅರ್ಥವನ್ನು ಕ್ರಿಯಾಪದದ ಕಾಲರೂಪವು ಕೊಡುತ್ತದೆ. ನಿರಂತರವಾದ ನಂಬಿಗಸ್ತಿಕೆಯು ನಾವು ಕ್ರಿಸ್ತನಲ್ಲಿ ನೆಲೆಗೊಳ್ಳುವದನ್ನು ಖಾತ್ರಿಪಡಿಸುತ್ತದೆ, ಆ ಮಂಡಲದಲ್ಲಿಯೇ ಈಗ ನಾವು ನಂಬಿಕೆಯ ಮೂಲಕ ರಕ್ಷಣೆಯನ್ನು ಹೊಂದಿದ್ದೇವೆ. ಯೋಹಾನ

3:16 ನೇ ವಚನವು "ನಾಶವಾಗದೆ" ಅಥವಾ "ನಾಶವಾಗಬಾರದು" (KJV) ಎಂದಿರುತ್ತದೆ. ಒಬ್ಬನು ನಂಬುತ್ತಲೇ ಇರುವದಾದರೆ "ನಾಶವಾಗದೆ" ಎಂಬುದು ಸರಿಯಾದದ್ದು, ಯಾಕೆಂದರೆ ನಿತ್ಯಜೀವವನ್ನು ಹೊಂದಿಕೊಳ್ಳಲು ಮತ್ತು ಉಳಿಸಿಕೊಳ್ಳಲು ಅದು ಅವಶ್ಯಕವಾಗಿರುತ್ತದೆ.

## ಯೇಸುವಿಗಾಗಿ ಹಂಬಲದಿಂದ ನಿರೀಕ್ಷಿಸಿಕೊಂಡಿರುವದು (9:27)

ನಮ್ಮ ನಂಬಿಕೆಯು ಇರತಕ್ಕಂಥ ನಂಬಿಕೆಯಾಗಿರುವದಾದರೆ, ಎರಡನೆಯ ಸಾರಿ ಕರ್ತನು ಬರುವದನ್ನು ನಾವು ಹಂಬಲದಿಂದ ಎದುರುನೋಡುವವರಾಗಿ ಇರತಕ್ಕದ್ದು. ಬೋಧನೆಯು ಎರಡನೆಯ ಬರೋಣವನ್ನು ಒತ್ತಿ ಹೇಳತಕ್ಕದ್ದು ಮತ್ತು ನಮಗೆ ಅದು ತರುವಂಥ ಸಂತೋಷವನ್ನು ಚಿತ್ರಿಸತಕ್ಕದ್ದು. ನಾವು ಆ ಕ್ಷಣವನ್ನು ಸಂಭ್ರಮದಿಂದ ಎದುರುನೋಡತಕ್ಕದ್ದು.

ಯೌವನದಲ್ಲಿರುವ ಮತ್ತು ಜೀವನವನ್ನು ಆನಂದಿಸುವವರು ಲೋಕದ ಬಾಧೆಗಳ ಕಾರಣದಿಂದ ಅದನ್ನು ತೊರೆದು ಹೋಗುವದಕ್ಕೆ ಬಯಸುವದನ್ನು ಊಹಿಸಿಕೊಳ್ಳುವದು ಕಷ್ಟಕರವಾಗಿರುತ್ತದೆ. ನಾವು ದೊಡ್ಡವರಾಗಿ ಬೆಳೆದಂತೆ ಮತ್ತು ಜೀವನದ ಹೆಚ್ಚು ಅನುಭವವನ್ನು ಪಡೆದ ಹಾಗೆ ಲೋಕದ ಘಟನೆಗಳು – ಯುದ್ಧ, ವ್ಯಾಧಿ, ಭಯೋತ್ಪಾದನೆ, ಮತ್ತು ಪ್ರಾಕೃತಿಕ ವಿಕೋಪಗಳು – ನಮ್ಮನ್ನು ವಾಸ್ತವಿಕತೆಗೆ ಎಚ್ಚೆತ್ತುಕೊಳ್ಳುವಂತೆ ಮಾಡು ಆಘಾತವುಂಟು ಮಾಡಬಹುದು. ನಮ್ಮ ಸುತ್ತಲೆಲ್ಲಾ ವೈರಿಗಳಿದ್ದಾರೆ. ದೇವರ ಬಯಕೆ ಯನ್ನು ಅನುಸರಿಸುವದರ ಬದಲಾಗಿ ಸೈತಾನನ ಬಯಕೆಯನ್ನು ಅನುಸರಿಸುವವರು ಕ್ರೈಸ್ತತ್ವವನ್ನು ನಾಶಗೊಳಿಸುವದಕ್ಕೆ ಪ್ರಯತ್ನಿಸುವರು. ನಾವು ಆರ್ಥಿಕತೆಗೆ ಸಂಬಂಧಿಸಿದಂತೆ; ಆರೋಗ್ಯ, ಸಂತೋಷ, ಮತ್ತು ನಮ್ಮ ಮಕ್ಕಳ ನಂಬಿಗಸ್ತಿಕೆಗೆ ಸಂಬಂಧಿಸಿದಂತೆ; ಜೀವನದಲ್ಲಿ ವೈಯಕ್ತಿಕ ಯಶಸ್ಸು; ಮತ್ತು ಬೇರೆ ರೀತಿಯ ಎಷ್ಟೋ ಚಿಂತೆಗಳಿಗೆ ಸಂಬಂಧಿಸಿದಂತೆ ನಿರಂತರವಾದ ಅನಿಶ್ಚಿತತೆಯನ್ನು ಎದುರಿಸುತ್ತೇವೆ. ಈ ಯಾವದೇ ವಿಷಯಗಳಿಂದ ನಾವು ಗಾಬರಿಯಾಗಬೇಕಾಗಿಲ್ಲ ಯಾಕೆಂದರೆ ಎಲ್ಲವನ್ನೂ ಸರಿಪಡಿಸುವದಕ್ಕೆ ಕ್ರಿಸ್ತನು ಬರುತ್ತಿದ್ದಾನೆ. ನಮಗೆ ವಿರುದ್ಧ ತಪ್ಪು ಮಾಡಿರುವವರಿಗೆ ನಾವು ಪ್ರತೀಕಾರ ಸಲ್ಲಿಸಬೇಕಿಲ್ಲ ಅಥವಾ ಪ್ರತ್ಯಾಕ್ರಮಣ ಮಾಡಬೇಕಿಲ್ಲ, ಯಾಕೆಂದರೆ ದೇವರೇ ನಮಗೋಸ್ಕರ ಮುಯ್ಯಿಗೆ ಮುಯ್ಯಿ ತೀರಿಸುವಾತನು (ರೋಮಾ 12:18-21). ಪ್ರತೀಕಾರ ಮಾಡುವದು ಕರ್ತನ ಕೆಲಸ; ಆತನೇ ಅದನ್ನು ಮಾಡಲಿ. ಸೇಡು ತೀರಿಸಿಕೊಳ್ಳುವದೆಂದರೆ ನಾವು ಸ್ವತಃ ಕೆಟ್ಟತನಕ್ಕೆ ಸೋತು ಹೋದಂತಾಗುವದು. ಭೂಮಿಯಲ್ಲಿನ ಎಲ್ಲಾ ಸಮಸ್ಯೆಗಳಿಗೆ ಯೇಸುವಿನ ಬರೋಣವನ್ನು ನಿರೀಕ್ಷಿಸಿಕೊಂಡಿರುವದು ಒಂದು ದೊಡ್ಡ ಸಮಸ್ಯೆ – ಪರಿಹಾರಕವಾಗಿರುತ್ತದೆ.

ತಮ್ಮ ಹೆತ್ತವರಲ್ಲಿ ದೇವರ ಪ್ರೀತಿಯನ್ನು ಕಂಡಿರದೆ ಇರುವ ಕಾರಣದಿಂದ ಆತ್ಮಹತ್ಯೆ ಮಾಡಿಕೊಳ್ಳುವಷ್ಟರ ಮಟ್ಟಿಗೆ ಭಾರದಿಂದ ಒದ್ದಾಡುತ್ತಿರುವ ಹದಿ ಹರೆಯದ ಅನೇಕ ಮಕ್ಕಳನ್ನು ನಾವು ಮರೆಯಕೂಡದು. ಇನ್ನು ಕೆಲವರು, ಮನೆಯಲ್ಲಿ ಪ್ರೀತಿಯಿಂದ ಮುದ್ದು ಮಾಡಲ್ಪಟ್ಟವರು, ಪ್ರಾಯಸ್ಥರಾಗಿ ಅಂಥ ಸಮಸ್ಯೆಗಳನ್ನು ಎದುರಿಸುವವರಾಗಿ ಸೋತು ಹೋಗುತ್ತಾರೆ. ಅವರು ನಂಬಿಗಸ್ತರಾಗಿ ಉಳಿಯುವದಾದರೆ ಯೇಸು ಅವರನ್ನು ವಿಜಯಿಶಾಲಿಗಳಾಗಿ ಮಾಡುವನೆಂಬುದನ್ನು ಪ್ರತಿಯೊಂದು ಪರಿಸ್ಥಿತಿಯಲ್ಲಿರುವ ಜನರಿಗೆ ಜ್ಞಾಪಕಪಡಿಸುವದು ಅಗತ್ಯವಿರುತ್ತದೆ (ರೋಮಾ 8:28, 31-39).

## ಎರಡನೆಯ ಅವಕಾಶವು ಇರುವದಿಲ್ಲ (9:27)

9:27 ರಲ್ಲಿರುವ ಮರಣ ಮತ್ತು ಬಳಿಕ ನ್ಯಾಯತೀರ್ಪು ಇರುವದೆಂಬ ಕುರಿತ ಹೇಳಿಕೆಯು

ಮರಣದ ನಂತರ ಇನ್ನಾವ ಅವಕಾಶವು ಇರುವದಿಲ್ಲ ಎಂಬುದನ್ನು ಪ್ರಕಟಗೊಳಿಸುತ್ತದೆ. ಬೈಬಲ್ ಎಲ್ಲಿಯೂ ಪುರ್ಗಟೋರಿ (purgatory), ಪುನರ್ಜನ್ಮ, ಅಥವಾ ಎರಡನೆಯ ಅವಕಾಶದ ಬಗ್ಗೆ ಕಲಿಸುವದಿಲ್ಲ. ಒಬ್ಬ ವ್ಯಕ್ತಿಯ ಮರಣವು ದೈವಿಕ ನೇಮಕವಾಗಿರುತ್ತದೆ ಮತ್ತು ಒಂದೇ ಸಾರಿ ಮಾತ್ರವೇ ಸಂಭವಿಸುತ್ತದೆ. ಸಕಲ ಜನರು ಮರಣಿಸುವರೆಂಬುದು ಖಾತ್ರಿಗೊಳಿಸಲ್ಪಟ್ಟಿದೆ (ಎರಡನೆಯ ಬರೋಣದಲ್ಲಿ ಬದುಕಿರುವವ ರನ್ನು ಹೊರತು ಪಡಿಸಿ), ಆದರೆ ಎಲ್ಲರೂ ನ್ಯಾಯತೀರ್ಪನ್ನು ಎದುರಿಸುವರೆಂಬುದು ಅದಕ್ಕಿಂತಲೂ ಹೆಚ್ಚು ಖಾತ್ರಿಯಾದದ್ದು.

---

## ಅಡಿಟಿಪ್ಪಣಿಗಳು

[1]Adapted from Neil R. Lightfoot, *Everyone's Guide to Hebrews* (Grand Rapids, Mich.: Baker Books, 2002), 114. [2]Robert Milligan, *A Commentary on the Epistle to the Hebrews*, New Testament Commentaries (Cincinnati: Chase and Hall, 1876; reprint, Nashville: Gospel Advocate Co., 1975), 309. [3]Lightfoot, *Everyone's Guide to Hebrews*, 115. [4]Simon J. Kistemaker, *Exposition of the Epistle to the Hebrews*, New Testament Commentary (Grand Rapids, Mich.: Baker Book House, 1984), 249. ರಬ್ಬಿಗಳು ಪ್ರತಿ ವರ್ಷವೂ ಹೊಸ ತೆರೆ, ಅಥವಾ ಪರದೆಯು ಹಾಕಲ್ಪಡುತ್ತಿತ್ತೆಂದು ಬರೆದಿರುತ್ತಾರೆ, ಆದ್ದರಿಂದ ಅದು ತನ್ನಷ್ಟಕ್ಕೆ ತಾನೇ ಹರಿದು ಹೋಗಿರುವದಕ್ಕೆ ಸಾಧ್ಯವಿರುವದಿಲ್ಲ. (Milligan, 312.) ಒಂದು ಭೂಕಂಪವಾದಾಗಲೂ, ಪರದೆಯು ಮೇಲಿನಿಂದ ಕೆಳಗಿನ ವರೆಗೂ ಹರಿದು ಹೋಗುವದಕ್ಕಿಂತಲೂ ಹಾರಾಡಿರುತ್ತಿದ್ದ ಸಾಧ್ಯತೆಯು ಅಧಿಕವಾಗಿತ್ತು. [5]ಈ ಪದವು ಬೈಬಲಿನಲ್ಲಿ ಕಾಣಿಸಿಕೊಳ್ಳುವದಿಲ್ಲ, ಆದರೆ ಈ ಯೋಚನೆಯು ಯೆಶಾಯ 60:2; ಮತ್ತಾಯ 17:5; ಲೂಕ 2:9; ರೋಮಾ 9:4 ರಲ್ಲಿ ಪರೋಕ್ಷವಾಗಿ ಸೂಚಿಸಲ್ಪಟ್ಟಿದೆ Targums ನಲ್ಲಿ ಪ್ರಸ್ತಾಪಿಸಲ್ಪಟ್ಟಿದೆ. [6]"ಒಡಂಬಡಿಕೆಯ ಬರೆದಿದ್ದ ಕಲ್ಲಿನ ಹಲಿಗೆಗಳು" ಎಂಬ ಮಾತು (ವ. 4) "ಒಡಂಬಡಿಕೆ" ಯು ಖಂಡಿತವಾಗಿಯೂ ದಶಾಜ್ಞೆಗಳನ್ನು ಒಳಗೊಂಡಿತ್ತೆಂಬುದನ್ನು ಗುರುತಿಸುತ್ತದೆ. NIVಯಲ್ಲಿ "ಪ್ರಾಯಶ್ಚಿತ್ತದ ಮುಸುಕು" ಎಂದಿರುತ್ತದೆ (9:5). [7]ಮಂಜೂಷದೊಳಗೆ ಮನ್ನಾದ ಗಡಿಗೆ ಮತ್ತು ಆರೋನನ ಕೋಲು ಸಹ ಇದ್ದವು ಎಂಬುದನ್ನು ಹಳೆಯ ಒಡಂಬಡಿಕೆಯು ನಿರ್ದಿಷ್ಟವಾಗಿ ಹೇಳುವದಿಲ್ಲ. ಇಬ್ರಿಯ ಹಳೆಯ ಒಡಂಬಡಿಕೆಯಾಗಲಿ ಸಹ ಪಾತ್ರೆಯು (ಗಡಿಗೆ) ಚಿನ್ನದಿಂದ ತಯಾರಿಸಲ್ಪಟ್ಟಿತ್ತದೆಂದು ಪ್ರಸ್ತಾಪಿಸುವದಿಲ್ಲ, ಆದಾಗ್ಯೂ ಇದು LXX ನಲ್ಲಿ ಪ್ರಸ್ತಾಪಿಸಲ್ಪಟ್ಟಿದೆ. ಆ ಆವೃತ್ತಿಯು ಸರಿಯಾಗಿರಬಹುದಾಗಿದೆ, ಅಥವಾ ದೇವರು ಈ ಮಾಹಿತಿಯನ್ನು ಇಬ್ರಿಯರಿಗೆ ಪತ್ರಿಕೆಯ ಲೇಖಕನಿಗೆ ಪ್ರಕಟಗೊಳಿಸಿರಬಹುದಾಗಿದೆ. [8]Josephus *Wars* 1.7.6; *Antiquities* 14.4.4; Tacitus *History* 9. [9]F. F. Bruce, *The Epistle to the Hebrews*, The New International Commentary on the New Testament (Grand Rapids, Mich.: Wm. B. Eerdmans Publishing Co., 1964), 188, n. 29. ಇದು *Mishnah Yoma* 3.5.2 ದಲ್ಲಿ ಪ್ರಸ್ತಾಪಿಸಲ್ಪಟ್ಟಿದೆ. [10]ವಿಮೋಚನಕಾಂಡ 25:18-22; 29:43; ಅರಣ್ಯಕಾಂಡ 7:89; ಯೆಹೆಜ್ಕೇಲ 10:19, 20.

[11]Kenneth Samuel Wuest, *Hebrews in the Greek New Testament for the English Reader* (Grand Rapids, Mich.: Wm. B. Eerdmans Publishing Co., 1951), 153. [12]ದೇವದರ್ಶನ ಗುಡಾರವನ್ನು ಪ್ರವೇಶಿಸುವದು ವಾಕ್ಯಭಾಗದಲ್ಲಿ ಪರಿಗಣನೆಯಲ್ಲಿರುತ್ತದೆಂಬುದು ನಿಜವೇ, ಆದರೆ ದೇವದರ್ಶನ ಗುಡಾರವು ದೇವರ ದೇವರ ಸಂಕಲ್ಪವನ್ನು ಅನುಸರಿಸಿದ ಆರಾಧನೆಯ ಮಾದರಿಯನ್ನೊಳಗೊಂಡ ದೇವಾಲಯದ ಶುದ್ಧತೆಯನ್ನು ಸಂಕೇತಿಸುತ್ತದೆ. 9:6, 7 ರಲ್ಲಿರುವ ವರ್ತಮಾನಕಾಲರೂಪವು ಇಬ್ರಿಯರಿಗೆ ಪತ್ರಿಕೆಯು ಬರೆಯಲ್ಪಡುವ ವೇಳೆಯಲ್ಲಿನ ನಡೆಯುತ್ತಿದ್ದ ಆಗಿನ ಕ್ರಿಯೆಯೆಂಬುದನ್ನು ಅಳಿಸಿ ಹಾಕುವದಕ್ಕೆ ಸಾಧ್ಯವೇ ಇರುವದಿಲ್ಲ. [13]Gareth L. Reeseನು ಆ ದಿನದಲ್ಲಿ ಮಹಾಯಾಜಕನು ಮಾಡುತ್ತಿದ್ದ ಕರ್ತವ್ಯಗಳ ಕುರಿತು, ಆತನು ಧರಿಸುವ ಉಡುಪು ಮೊದಲ್ಗೊಂಡು ಆತನ ಸಮರ್ಪಣೆಗಳ ಬಗ್ಗೆ, ರಕ್ತವನ್ನು ಪ್ರೋಕ್ಷಿಸುವದು, ಧೂಪವನ್ನು ಹಾಕುವದು, ಮತ್ತು ಬಲೀ ಪಶುವನ್ನು ಬಿಡುಗಡೆಗೊಳಿಸುವದ ಸೇರಿದಂತೆ ಎಲ್ಲವುಗಳ ಬಗ್ಗೆ ಒಂದು ಉತ್ತಮವಾದ, ಕ್ಲುಪ್ತ ಸಾರಾಂಶವನ್ನು ಕೊಡುತ್ತಾನೆ (ಯಾಜಕಕಾಂಡ 16). (Gareth L. Reese, *A Critical and Exegetical Commentary on the Epistle to the Hebrews* [Moberly, Mo.: Scripture Exposition Books, 1992], 147-48.) ಅರಣ್ಯಕಾಂಡ 15:27-31 ತೋರಿಸುವದೇನೆಂದರೆ ಅಜ್ಞಾನದಲ್ಲಿ ಮಾಡಿದ ಪಾಪಗಳು (ಉದ್ದೇಶಪೂರ್ವಕವಲ್ಲದ) ಕ್ಷಮಿಸಲ್ಪಡಬಹುದು, ಅದೇ ವೇಳೆಯಲ್ಲಿ ಮೊಂಡುತನವುಳ್ಳ ಪಾಪಿಯನ್ನು ಜನರೊಳಗಿಂದ ತೆಗೆದು ಹಾಕಬೇಕು. Reeseನು ಸಹ ದೋಷಪರಿಹಾರಕ ದಿನದಂದು ಮಹಾಯಾಜಕನು ಒಂದಕ್ಕಿಂತ ಹೆಚ್ಚು ಬಾರಿ ಅತಿಪವಿತ್ರ ಸ್ಥಳದೊಳಗೆ ಪ್ರವೇಶಿಸಿರಬಹುದೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾನೆ. (Ibid., 148, n. 40.) [14]*Mishnah Yoma* 8.9. [15]Ray C. Stedman,

*Hebrews*, The IVP New Testament Commentary Series (Downers Grove, Ill.: InterVarsity Press, 1992), 95. [16]"ಸಂಕೇತ" ಎಂಬ ಪದವು παραβολή (*parabolē*) ಎಂದಾಗಿರುತ್ತದೆ, ಅದು ಆಂಗ್ಲ ಭಾಷೆಯನ್ನು "ಸಾಮ್ಯ" ಎಂದು ಪ್ರವೇಶಿಸಿತು. ಅದು "ಹೋಲಿಕೆ ಮಾಡುವದಕ್ಕಾಗಿ ಏನೋ ಒಂದನ್ನು ಜೊತೆಯಲ್ಲಿ ಎಸೆಯಲ್ಪಟ್ಟದ್ದು" ಎಂಬ ಅಭಿಪ್ರಾಯವನ್ನು ಸೂಚಿಸುತ್ತದೆ, ಆದರೆ ಅದು ಯಾವದೇ ರೀತಿಯ ಸಾಂಕೇತಿಕ ರೂಪವನ್ನು ಪ್ರತಿನಿಧಿಸಬಹುದಾಗಿದೆ. ಇದು 11:19ರಲ್ಲಿ ಅಬ್ರಹಾಮನು ಇಸಾಕನನ್ನು ಹಿಂದಿರುಗಿ ಪಡೆದುಕೊಂಡ ರೀತಿಯನ್ನು ಒಂದು ಮಾದರಿ ಎಂದು ಸೂಚಿಸುವದಕ್ಕೆ ಬಳಲ್ಪಟ್ಟಿರುತ್ತದೆ. (Wuest, 155.) [17]Ibid. [18]Bruce, *Hebrews*, 196. [19]Raymond Brown, *The Message of Hebrews: Christ Above All*, The Bible Speaks Today (Downers Grove, Ill.: InterVarsity Press, 1982), 154. [20]Wuest, 156.

[21]Philip Edgcumbe Hughes, *A Commentary on the Epistle to the Hebrews* (Grand Rapids, Mich.: Wm. B. Eerdmans Publishing Co., 1977), 325. [22]Lightfoot, *Everyone's Guide to Hebrews*, 118. [23]Kistemaker, 248. F. F. Bruceನು ಇದು ವರ್ತಮಾನಕಾಲಕ್ಕೆ ಎಂಬದನ್ನು ಒಪ್ಪಿಕೊಳ್ಳುತ್ತಾನೆ. (Bruce, *Hebrews*, 327.) "ಈಗಾಗಲೇ ಇರುತ್ತದೆ" (NIV) ಎಂಬುದು ಸಾಮಾನ್ಯವಾಗಿ ಉತ್ತಮ ಅನುವಾದವೆಂದು ಗುರುತಿಸಲ್ಪಟ್ಟಿರುತ್ತದೆ. [24]Brooke Foss Westcott, *The Epistle to the Hebrews: The Greek Text with Notes and Essays* (London: Macmillan & Co., 1889; reprint, Grand Rapids, Mich.: Wm. B. Eerdmans Publishing Co., 1973), 256. [25]"ಕೈಯಿಂದ ಕಟ್ಟಲ್ಪಡದಂಥ" ಎಂಬುದಕ್ಕಿರುವ ಪದವು (ἀχειροποίητος, *acheiropoiētos*) ಪೌಲನಿಂದ 2 ಕೊರಿಂಥ 5:1 ರಲ್ಲಿ ಸಹ ಬಳಸಲ್ಪಟ್ಟಿರುತ್ತದೆ, ಮತ್ತು ಇಲ್ಲಿರುವಂತೆ, ಒಂದು ನಕಾರಾತ್ಮಕ ಉಪಸರ್ಗವನ್ನು ಹೊಂದಿರುತ್ತದೆ. ಅದು ಬೇರೆ ಕಡೆಗಳೊಳಗೆ ಮಾರ್ಕ 14:58, ಅಪೊಸ್ತಲರ ಕೃತ್ಯಗಳು 17:24, ಇಬ್ರಿಯ 9:24, ಮತ್ತು ಕೊಲೊಸ್ಸೆ 2:11 ರಲ್ಲಿ ಬಳಸಲ್ಪಟ್ಟಿದೆ. ಇದು ಒಂದು ಸಂಯುಕ್ತ ಪದವಾಗಿದ್ದು "ಮಾಡು" ಎಂಬುದರ ಭಾಗವಾಗಿರುತ್ತದೆ. ಸೊಲೊಮೋನನು ತನ್ನ ಜನರ ನಾಯಕರಿಗೆ ಮಾಡಿದ ಪ್ರೇರಿತ ಭಾಷಣದಲ್ಲಿ, ದೇವರು ಹೊಸ ದೇವಾಲಯದಲ್ಲಿ ವಾಸಿಸುವವನಲ್ಲ ಎಂಬುದನ್ನು ಗಮನಕ್ಕೆ ತರುತ್ತಾನೆ (2 ಪೂರ್ವಕಾಲವೃತ್ತಾಂತ 6:18). [26]ಆತನು ಅಕ್ಷರಶಃ ತನ್ನ ರಕ್ತವನ್ನು ಪರಲೋಕಕ್ಕೆ ತಕ್ಕೊಂಡು ಹೋದನೆಂದು ಇದು ಸೂಚಿಸುವದಿಲ್ಲ. (Bruce, *Hebrews*, 200.) ಶಾರೀರಿಕವಾಗಿ ಮಾತಾಡುವದಾದರೆ, ಆತನ ರಕ್ತವು ಭೂಮಿಯೊಳಗೆ ಬಿದ್ದಿತು. ಹೇಗೂ, ಆತನು ತನ್ನ ಜೀವವನ್ನು ಕೊಡುವದಕ್ಕೆ ಮನಸ್ಸುಳ್ಳವನಾಗಿದ್ದರಿಂದ ಆತನ ಯಜ್ಞವು ಪರಲೋಕದಲ್ಲಿ ಅಂಗೀಕರಿಸಲ್ಪಟ್ಟಿತು. (Wuest, 158-59.) [27]ಧಾರ್ಮಿಕ ಸಂಸ್ಕಾರವು ಆರಾಧಕನನ್ನು ಪಾಪದ ಬಗ್ಗೆ ಯೋಚಿಸುವಂತೆ ಮಾಡಿತು, ಶುದ್ಧೀಕರಣದ ಅಗತ್ಯತೆಯನ್ನು ಕಾಣುವಂತೆ, ಮತ್ತು ದೇವರು ಅದಕ್ಕಾಗಿ ದಾರಿಯನ್ನು ಒದಗಿಸುವನೆಂಬುದನ್ನು ಅರ್ಥಮಾಡಿಕೊಳ್ಳುವಂತೆ ಮಾಡಿತು. (Reese, 153.) [28]"ಪ್ರೋಕ್ಷಿಸುವಿಕೆ" ಯು ಹಳೆಯ ಒಡಂಬಡಿಕೆಯಲ್ಲಿ ಯಾವಾಗಲೂ ರಕ್ತದಿಂದ ಮಾಡಲ್ಪಡುತ್ತಿತ್ತು ಹೊರತು ನೀರಿನಿಂದಲ್ಲ, ಮತ್ತು ಅದಕ್ಕೂ ಹೊಸ ಒಡಂಬಡಿಕೆಯ ದೀಕ್ಷಾಸ್ನಾನಕ್ಕೂ ಯಾವದೇ ಸಂಬಂಧವಿರುವದಿಲ್ಲ. [29]Milliganನು ಈ ಪದವನ್ನು "ಕ್ರಿಸ್ತನ ದೈವಿಕ ಸ್ವಭಾವ" ಎಂದು ಅರ್ಥ ಕೊಡುತ್ತೆಂದು ಸೂಚಿಸಿದನು. (Milligan, 325-27.) Westcott, 261, ಮತ್ತು Hughes, 358-59 ನಲ್ಲಿ ಅದೇ ರೀತಿಯ ಅಭಿಪ್ರಾಯಗಳು ಕೊಡಲ್ಪಟ್ಟಿರುತ್ತವೆ. [30]Lightfoot, *Jesus Christ Today*, 172.

[31]Bruce, *Hebrews*, 205. [32]Donald Guthrie, *The Letter to the Hebrews: An Introduction and Commentary*, The Tyndale New Testament Commentaries (Grand Rapids, Mich.: Wm. B. Eerdmans Publishing Co., 1983), 189. [33]ಪುನಃ 13:18ರಲ್ಲಿ ಒಂದು ಶುದ್ಧ ಮನಸ್ಸಾಕ್ಷಿಯನ್ನು ಸೂಚಿಸಿ ಹೇಳಲಾಗಿರುತ್ತದೆ, ಅಲ್ಲಿ ಲೇಖಕನು ತನಗೋಸ್ಕರ ಮತ್ತು ತನ್ನ ಜೊತೆಗೆಲಸದವರಿಗಾಗಿ ಪ್ರಾರ್ಥನೆ ಮಾಡಬೇಕೆಂದು ಬೇಡಿಕೊಳ್ಳುತ್ತಾನೆ. ದೀಕ್ಷಾಸ್ನಾನದಲ್ಲಿ ಕರ್ತನಿಗೆ ವಿಧೇಯರಾಗುವ ಮೂಲಕ ಒಂದು ಶುದ್ಧ ಮನಸ್ಸಾಕ್ಷಿಯನ್ನು ಹೊಂದಿಕೊಳ್ಳಲಾಗುತ್ತದೆಂದು ಮೊದಲ ಪೇತ್ರ 3:21 ತೋರಿಸುತ್ತದೆ. [34]Adapted from Hughes, 360-61. [35]Gerald F. Hawthorne, "Hebrews," in *The New International Bible Commentary*, ed. F. F. Bruce, H. L. Ellison, and G. C. D. Howley (Grand Rapids, Mich.: Zondervan Publishing House, 1986), 1522. [36]Hughes, 365. [37]Wuest, 163. [38]ಇದು "ಪೌಲನು 1 ತಿಮೊಥೆ 2:5ರಲ್ಲಿ ಬಳಸಿದ ಅದೇ ರೀತಿಯಲ್ಲಿಯೇ ಹೊಸ ಒಡಂಬಡಿಕೆಯಲ್ಲಿ ಯೇಸುವಿನ ಪಾತ್ರದ ವಿಷಯದಲ್ಲಿ ಮಾತ್ರವೇ ಬಳಸಲ್ಪಟ್ಟಿದೆ (9:15 ಮತ್ತಯ 12:24ರಲ್ಲಿ ಸಹ)" (Jim Girdwood and Peter Verkruyse, *Hebrews*, The College Press NIV Commentary [Joplin, Mo.: College Press Publishing Co., 1997], 269). [39]Walter Bauer, *A Greek-English Lexicon of the New Testament and Other Early Christian Literature*, 2d ed., rev. William F. Arndt and F. Wilbur Gingrich (Chicago: University of Chicago Press, 1957), 183. [40]Lightfoot, *Jesus Christ Today*, 181.

[41]ನೋಡಿರಿ 1:2, 4, 14; 6:12, 17; 9:15; 11:7, 8; 12:17. [42]ನೋಡಿರಿ ಅಪೊಸ್ತಲರ ಕೃತ್ಯಗಳು 20:32 (ಎಫೆಸದ ಹಿರಿಯರೊಂದಿಗೆ ಮಾತಾಡುತ್ತಿರುವದು); ಗಲಾತ್ಯ 3:18; ಎಫೆಸ 1:14, 18; 5:5; ಕೊಲೊಸ್ಸೆ 3:24. [43]Girdwood and

Verkruyse, 298. [44]NIVಯು 16ನೇ ವಚನದಲ್ಲಿ ಪೂರ್ಣವಾದ ಭಾವಾನುವಾದ ಹೊಂದಿದೆ "ಮರಣವನ್ನು ಸಾಬಿತುಪಡಿಸುವದು ಅವಶ್ಯಕವಾಗಿರುತ್ತದೆ." [45]ಒಂದು ಅರ್ಥದಲ್ಲಿ ಯೇಸು ತನ್ನ ಸ್ವಂತ ಉಯಿಲನ್ನು "ಪ್ರಮಾಣೀಕರಿಸಿದನು," ಅಥವಾ ಪರಿಣಾಮಕ್ಕೆ ತರುವವನಾಗಿ, ಅದನ್ನು ಮಾಡಲು ತನಗೆ ಅಧಿಕಾರವಿರುತ್ತದೆಂಬುದನ್ನು ಘೋಷಿಸಿದನು ಮತ್ತು ಮತ್ತೊಂದು ಸಾರಿ ಅದರ ಶರತ್ತುಗಳನ್ನು ವಿವರಿಸುತ್ತಾನೆ (ಮತ್ತಾಯ 28:18-20). [46]F. F. Bruce, *The Letter of Paul to the Romans*, The Tyndale New Testament Commentaries (Grand Rapids, Mich.: Wm. B. Eerdmans Publishing Co., 1985), 128. [47]"ಪ್ರತಿಷ್ಠಿಸಿದನು" (ἐγκαινίζω, *egkainizō*), ಎಂಬುದು "ಸಮರ್ಪಿಸು" (ASV; NKJV) ಅಥವಾ "ಜಾರಿಗೆ ತರಲ್ಪಟ್ಟಿತು" (NIV) ಎಂದು ಸಹ ಅನುವಾದಿಸಲ್ಪಟ್ಟಿದೆ, ಇದು "ಅನುಮೋದಿಸಲ್ಪಟ್ಟಿತು" ಅಥವಾ "ನವೀಕರಿಸಲ್ಪಟ್ಟಿತು" ಎಂಬ ಅರ್ಥವನ್ನು ಸಹ ಕೊಡಬಲ್ಲದು. ಇದು ಪುನಃ 10:20ರಲ್ಲಿ "ಒಂದು ಜೀವವುಳ್ಳ ಹೊಸ ದಾರಿ" ಎಂಬುದಕ್ಕಾಗಿ ಬಳಸಲ್ಪಟ್ಟಿದೆ. (Guthrie, 192-93.) [48]Hughes, 374. [49]ಕರ್ತನ ಭೋಜನವು ಕೆಲವು ಧಾರ್ಮಿಕ ಗುಂಪುಗಳಲ್ಲಿ "Eucharist" ಎಂದು ಪರಿಚಿತವಿರುತ್ತದೆ, ಅದು "ಸ್ತೋತ್ರಗಳನ್ನು ಅರ್ಪಿಸುವಿಕೆ" ಎಂಬುದಕ್ಕಾಗಿರುವ ಗ್ರೀಕ್ ಪದದಿಂದ ಬಂದದ್ದಾಗಿದೆ. ಈ ಪದವು ಹೊಸ ಒಡಂಬಡಿಕೆಯಲ್ಲಿ ಕರ್ತನ ಭೋಜನ ಎಂಬುದಕ್ಕೆ ಬಳಸಲ್ಪಟ್ಟಿರುವದಿಲ್ಲ, ಆದರೆ ಯೇಸು ಊಟದ ಆರಂಭದಲ್ಲಿ ಸ್ತೋತ್ರಗಳನ್ನು ಸಲ್ಲಿಸಿದ್ದಂತೂ ನಿಜ. [50]Bruce, *Hebrews*, 215. ಆರೋನನು ಪ್ರೋಕ್ಷಣೆ ಮಾಡುವದರ ಕುರಿತ ನಿರ್ದೇಶನಗಳು ವಿಮೋಚನಕಾಂಡ 40:12-16ರಲ್ಲಿ ಕೊಡಲ್ಪಟ್ಟಿದೆ, ಆದರೆ ರಕ್ತದ ಬಗ್ಗೆ ಏನನ್ನು ಹೇಳಲಾಗಿರುವದಿಲ್ಲ. ಇಬ್ರಿಯರಿಗೆ ಪತ್ರಿಕೆಯಲ್ಲಿ ಕೊಡಲ್ಪಟ್ಟಿರುವ ವಾಸ್ತವಾಂಶಗಳು Josephusನ *Antiquities* 3.8.6ರಲ್ಲಿ ಕಾಣಿಸಿಕೊಳ್ಳುತ್ತವೆ. ಅನೇಕ ಪ್ರಾಚೀನ ಹಸ್ತಪ್ರತಿಗಳು "ಆಡುಗಳು" ಎಂಬುದನ್ನು ಪ್ರಸ್ತಾಪಿಸಲಾಗಿರುವದಿಲ್ಲ (Hughes, 375), ಬಹಳಷ್ಟು ಆವೃತ್ತಿಗಳೊಳಗೆ ಇಬ್ರಿಯ 9:13ರಲ್ಲಿ "ಆಡುಗಳು" ಎಂದಿರುತ್ತದೆ. ಆಡುಗಳನ್ನು ಹಳೆಯ ಒಡಂಬಡಿಕೆಯಲ್ಲಿ ಪಾಪಪರಿಹಾರಕ ಯಜ್ಞಗಳಾಗಿ ಸಮರ್ಪಿಸಲಾಗುತ್ತಿತ್ತು (ಯಾಜಕಕಾಂಡ 1:10). (Guthrie, 193.)

[51]Josephus *Antiquities* 3.8.6; 4.4.6. [52]ದೇವದರ್ಶನ ಗುಡಾರವು ರಕ್ತ ಮತ್ತು ಎಣ್ಣೆಯಿಂದ ಪ್ರೋಕ್ಷಿಸಲ್ಪಟ್ಟಿತೆಂದು Josephusನು ಹೇಳುತ್ತಾನೆ. (Ibid., 3.8.6.) [53]Stedman, 101, n. [54]Hughes, 378. [55]Milligan, 335. [56]"[ದೇವಜನರು] ಆತನಿಗೆ ತಕ್ಕದಾದ ವಾಸಸ್ಥಾನವಾಗುವಂತಾಗಲು . . . ಅಂತರ್ಯದಲ್ಲಿ ಶುದ್ಧ ಮಾಡಲ್ಪಡುವಿಕೆಯ ಅಗತ್ಯವು ಅವರಿಗೆ ಇರುತ್ತದೆ" (Bruce, 219). [57]Ibid., n. 152. [58]Wuest, 168. [59]ನೋಡಿರಿ 1:4; 6:9; 7:7, 19, 22; 8:6; 9:23; 10:34; 11:16, 35, 40; 12:24. [60]Bauer, 75.

[61]Reese, 163, n. 103. [62]Hughes, 383, n. 37. Hughesನು ಇಬ್ರಿಯರಿಗೆ ಪತ್ರಿಕೆಯು ಬರೆಯಲ್ಪಡುವ ವೇಳೆಯಲ್ಲಿ ದೇವಾಲಯದಲ್ಲಿ ಆರಾಧನೆಯು ನಡೆಯುತ್ತಲಿತ್ತೆಂಬುದನ್ನು ಸೂಚಿಸುವ ಎಲ್ಲಾ ವರ್ತಮಾನಕಾಲರೂಪದಲ್ಲಿರುವ ವಚನಗಳನ್ನು ಪಟ್ಟಿ ಮಾಡುತ್ತಾನೆ. (Hughes, 31-32.) [63]Bruce, *Hebrews*, 221. [64]Ibid., 222. [65]Girdwood and Verkruyse, 305. [66]ಈ ಮಾತು ಬೇರೆ ಕಡೆಯೊಳಗೆ 1 ಕೊರಿಂಥ 1:7; ಫಿಲಿಪ್ಪಿ 3:20; ಮತ್ತು ರೋಮಾ 8:19, 23, 25 ರಲ್ಲಿ ಸಿಕ್ಕುತ್ತದೆ. [67]ಓದಿರಿ ಅಪೊಸ್ತಲರ ಕೃತ್ಯಗಳು 2:36-41; 8:12, 13, 34-39; 10:46-48; 16:15, 27-34; 18:8; 19:1-6; 22:16; see also 1 ಕೊರಿಂಥ 1:14. [68]ನೋಡಿರಿ 7:22; 8:6, 8, 9 (ಎರಡು ಸಾರಿ), 10; 9:4 (ಎರಡು ಸಾರಿ), 15 (ಎರಡು ಸಾರಿ), 16, 17, 20; 10:16, 29; 12:24; 13:20. [69]Wuest, 163. [70]Owen D. Olbricht, "An Introduction," in "The Covenants," *Truth for Today* (October 2000): 3ರಲ್ಲಿ ಒಡಂಬಡಿಕೆ ಮಾಡಲ್ಪಡುವಿಕೆ ಕುರಿತು ಹೆಚ್ಚಿನ ವಿವರಗಳು ಕೊಡಲ್ಪಟ್ಟಿವೆ.

[71]Wuest, 164. [72]Leon Morris, "Hebrews," in *The Expositor's Bible Commentary*, ed. Frank E. Gaebelein (Grand Rapids, Mich.: Zondervan Publishing House, 1981), 12:70. [73]ಗ್ರೀಕ್ ಪದ κυριακός (*kuriakos*) ಎಂಬುದು ಹೊಸ ಒಡಂಬಡಿಕೆಯೊಳಗೆ ಕೇವಲ ಎರಡು ಸಾರಿ ಮಾತ್ರವೇ ಬಳಸಲ್ಪಟ್ಟಿದೆ, ಒಂದು ಸಾರಿ "ಕರ್ತನ ರಾತ್ರಿ ಭೋಜನ" ಕ್ಕಾಗಿ (1 ಕೊರಿಂಥ 11:20) ಮತ್ತು "ಕರ್ತನ ದಿನ" ಎಂಬುದಕ್ಕಾಗಿ ಒಂದು ಸಾರಿ (ಪ್ರಕಟನೆ 1:10) ಬಳಸಲ್ಪಟ್ಟಿದೆ. "ಕರ್ತನ ರಾತ್ರಿ ಭೋಜನ" ಮತ್ತು "ಕರ್ತನ ದಿನ" ಪರಸ್ಪರ ಸಂಬಂಧ ಹೊಂದಿರುತ್ತವೆಂದು Everett Fergusonನು ಮುಕ್ತಾಯಕ್ಕೆ ಬರುತ್ತಾನೆ. (Everett Ferguson, *The Church of Christ: A Biblical Ecclesiology for Today* [Grand Rapids, Mich.: Wm. B. Eerdmans Publishing Co., 1996], 242.) [74]James T. Draper, Jr., *Hebrews, the Life That Pleases God* (Wheaton, Ill.: Tyndale House Publishers, 1976), 228. [75]Hughes, 317. [76]Robert E. Coleman, *Written in Blood: A Devotional Study of the Blood of Christ* (Old Tappan, N.J.: Fleming H. Revell Co., 1972), 32-33. [77]ದಿವಂಗತ H. A. Dixon, President of Freed-Hardeman College (now University), ಹೀಗೆ ಹೇಳುತ್ತಿದ್ದರು, "ಯೇಸುವಿನ ರಕ್ತದ ಸಂಬಂಧವಾಗಿ 'ಚೆಲ್ಲಿದನು' ಎಂಬ ಪದವನ್ನು ಬಳಸಬೇಡಿರಿ. ಅದು ಒಂದು ಆಕಸ್ಮಿಕವೆಂಬ ಪರೋಕ್ಷ ಅರ್ಥವನ್ನು ಕೊಡುತ್ತದೆ, ಮತ್ತು ಆತನ ರಕ್ತವು ಆಕಸ್ಮಿಕವಾಗಿ ಸುರಿಸಲ್ಪಡಲಿಲ್ಲ." ಆತನು ಸಾಯುವದಕ್ಕೆ ಆರಿಸಿಕೊಂಡಿದ್ದನು! [78]Tim Stafford, "The Church's Walking Wounded; How Should We Respond in a Psychological Age?" *Christianity Today* (March 2003): 68.